ಹುಣ್ಣಿಮೆಯಿಂದ ಹುಣ್ಣಿಮೆಗೆ

ಆದಿಮ
ಲಿವಿಂಗ್ ಪ್ಯಾಷನ್ಸ್

ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು

RNI :
KARKAN 22229/10/1/2012-TC
ಸಂಪುಟ : 2
ಸಂಚಿಕೆ : 6
ಪುಟಗಳು : 24
ಏಪ್ರಿಲ್-ಮೇ 2013
ಬೆಲೆ : 10 ರೂ



ಅಮ್ಮ
ಮಾಡಿದೆ
ಸಾದು

ಆಂಜಿನಪ್ಪನ
ನೆನಪಲ್ಲಿ

ಕಾರ್ಮಿಕರು
ಮತ್ತೆ ಮತ್ತೆ
ನೆನೆಯಬೇಕಾದ
ನೇತಾರ

ಒಂದು
ಗಲ್ಲು ಶಿಕ್ಷೆ

ನನ್ನಮ್ಮ

■ ಕೆ.ಎಂ.ಬೈರಪ್ಪ

ಟಾರು ರಸ್ತೆಯ ಮೇಲೆ ಬರಿಗಾಲ ನಡಿಗೆ
ಅತ್ತಿತ್ತ ನೋಡುತ್ತ......
ಅಬ್ಬಾ..! ಈ ಪ್ಯಾಟೆಯಲ್ಲಿ ಎಷ್ಟೊಂದು ಶಿಳ್ಳೆಗಳು..!
ಎಷ್ಟೊಂದು ದನಿಗಳು.....! ಎಷ್ಟೊಂದು ಬಣ್ಣಗಳು...!
ಒಂದೂ ಸ್ಪಷ್ಟವಾಗದು...
ತಾರಿನ ತಾಪಕ್ಕೆ ತಡವರಿಸಿದ ಕಾಲುಗಳು
ನೀರು–ನೆರಳನ್ನು ಕೇಳುತ್ತಿದ್ದವು....
ಭಯ..!
ಅದೋ..! ನನ್ನಮ್ಮ ನೆನಪಿಗೆ ಬರುತ್ತಿದ್ದಾಳೆ–
'ಜ್ವಾಪಾನಾ ಅಪ್ಪಂತ್ಯಾ.....'
ಎಂದು
ನನ್ನ



ಓದಲು, ಬರೆಯಲು ಕಳಿಸಿದ್ದಾಳೆ.....

ಗಮ್ಮೆಂದು 'ಗೋಬಿ'ಯು ಮೂಗನ್ನು ಅಪ್ಪಿಕೊಂಡು
ಹೊಟ್ಟೆಯ ಹಸಿವನ್ನು ಹೆಚ್ಚಿಸಿ
ಗುಟುಕುಗಳನ್ನು ಹುಟ್ಟಿಸಿ
ಗೋಬಿಯನ್ನಿಕ್ಕಿಕೊಳ್ಳಲು ಹಂಬಲಿಸಿ.......
ಯಾಕೋ ಭಯ !
ಅದೋ..! ನನ್ನಮ್ಮ ನೆನಪಿಗೆ ಬರುತ್ತಿದ್ದಾಳೆ–
ಹಸಿವೆಂಬ ಜವರಾಯನನ್ನೇ ಹಿಡಿದು
ಕಟ್ಟಿ ಇಟ್ಟಿದ್ದಳು ಕಾಸಿನ ಕುಡಿಕೆಯ
ಒಡೆದು ಕೈಗಿತ್ತಳು–
'ಬಸ್ ಶಾರ್ಜಿಕೆ ಮಡಿಗ್ಯಾ
ಹೊಟ್ಟೆ ಹಸುದ್ರೆ ಈ ರಾಗಿ ರೊಟ್ಟಿ ತಿಂದಾ ....'
ಅಯ್ಯೋ! ಇದೇನಿಂತಹ ಬಣ್ಣದ ಚಿತ್ರಗಳು !

ಅಕ್ಕಂದಿರ ಮೈಮೇಲಿನ ಬಟ್ಟೆಗಳ
ಯಾರು ಕಿತ್ತುಕೊಂಡರಯ್ಯಾ ?
ಆದರೂ....... ಅಕ್ಕಂದಿರು ನಗುತ್ತಿದ್ದಾರಲ್ಲಾ..?!
ಅದೋ! ನನ್ನಮ್ಮ ನೆನಪಿಗೆ ಬರುತ್ತಿದ್ದಾಳೆ–
ಮಡಿಸಿಕೊಂಡು ಹರಿದ ಶ್ಯಾಲಿ ಚಾಕೆಟ್ಟುಗಳ
ತ್ಯಾಪೆ ಹಾಕಿ ಹೊಲಿದು ಹೊಲಿದು ಹೊದ್ದಿದ್ದಾಳೆ..
ಅಮ್ಮನಿಗೆ ಹೇಳಬೇಕು..
'ಅಮ್ಮಾ.... ಪ್ಯಾಟ್ಯಾಗ ಹರಿಯಲು ಶ್ಯಾಲಿಗಳಿಲ್ಲ;
ಮೊದಲೆ ಹರಿದ ಜೀನ್ಸ್‌ಗಳೇ ಎಲ್ಲಾ...!
ಒಹೋ .... ಇದ್ಯಾರೋ ಕೋಲಿಡಿದು ಕಾಯುತ್ತಿದ್ದಾರೆ!

ಬಿಸಿಲಲ್ಲಿ ಚೆಂಡನ್ನು ದಂಡಿಸಲೆಂದು
ಫೋರ್, ಸಿಕ್ಸ್, ಸೆಂಚುರಿಗಳ ದಾಖಲೆಗಾಗಿ.....
ಅದೋ....! ನನ್ನಮ್ಮ ನೆನಪಿಗೆ ಬರುತ್ತಿದ್ದಾಳೆ–
ಬೆಟ್ಟಗುಡ್ಡಗಳಲ್ಲಿ, ಹುಲ್ಲುಬಯಲಿನಲ್ಲಿ,
ಕೋಲಿಡಿದು ನಿಂತಿದ್ದಾಳೆ..
ಕುರಿ, ಮೇಕೆ, ಹಸುಗಳ ಕಾಯುತ್ತಿದ್ದಾಳೆ
ಧೀರಯೋಧೆಯಂತೆ !
ಕೂಸುಗಳ ಕಾಯುವ ಮಹಾಮಾತೆಯಂತೆ.
ಬಿಸಿಲು, ಮಳೆ, ಚಳಿಗೆ
ಕತ್ತಲಿಗೆ ಎಂದೂ ಬೆಚ್ಚಳು
ಅನುದಿನವೂ ಹಸುರನ್ನೇ ಉಣ್ಣಿಸಲು
ಕೂಸುಗಳನ್ನು ಕಾಯುವ
ಪ್ರೇಮಗಣಿಯ ದಾಖಲಿಸೋದು ಹೇಗೆ?
ಅಯ್ಯೋ..! ಇದೇನು ಗೊಂದಲದ ಸದ್ದುಗಳು

ಹಾದಿಬೀದಿಗಳಲ್ಲಿ ಕಲ್ಲುಕೂಟಗಳೊಳಗೆ
ಆ ದೇವ ಈ ದೇವಿಯೆಂದು
ಜಯಕಾರಗಳು ಮೊಳಗುತ್ತಿವೆಯಲ್ಲ..

ಅಮ್ಮಾ.......!
ಅದೋ.....! ನನ್ನಮ್ಮ ನೆನಪಿಗೆ ಬರುತ್ತಿದ್ದಾಳೆ–
ನನ್ನಮ್ಮ ನನಗೆ ಗುರು ಮಹಾಗುರು
ಪಾಠಗಳ ಪಾಠ ನನ್ನಮ್ಮ
ಯಾವಾಗಲೂ ಹೇಳುತ್ತಾಳೆ:
'ಅಪ್ಪಯ್ಯಾ..! ಹೊಟ್ಯಾಗಿರೋ ಬಗಮಂತ್ನು ಶೆನ್ನಾಗಿರ್ಲಿ,
ನಮ್ನ ಎದಿಮ್ಯಾಗ ಆಕೆಂದಿರೋ ಬೂಮೊಮ್ಮನೂ
ಸೂರಿಣ್ಣು ಚಂದ್ರಮ್ಮನಂತ ಸತ್ತಿಮಂತ್ರು
ಎಲ್ಲಾ ನೋಡೆತರಾ..... ಜ್ವಾಕೆ,
ಯಾರ್ನೂ ಅನ್ಯಾಯ ಮಾಡಬ್ಯಾಡ,
ಇಲ್ಲದೋರ್ಕ ನಿನ್ ಕೈಲಾದೋಸ್ ಸಾಯ ಮಾಡು...
ಒನ್‌ತುತ್ತು, ಎಲ್ಡಚ್ಚರ ಕೊಟ್ಟೋರ್ನ ಎಂದ್ಮ ನೆಂತಾ
ಒಳ್ಳೆ ಬುದ್ಧಿಮಂತ್ನಾಗು
ನಮ್ಯಾಸೇ ಸಾಕು_



ಚಂದಾ ವಿವರ
ಬಿಡಿಪ್ರತಿ 10 ರೂ.
ದ್ವೈವಾರ್ಷಿಕ –250 ರೂ.
ಪೋಷಕ–1000 ರೂ.


ಕೋರೆಗಾಂವ್ರೋ? ಕಲ್ಲಟ್ಟವೋ?

ಸ್ತೂಪಗಳು ಅಶೋಕನ ಕಾಲದ ಗುರುತುಗಳು.ದಿಗ್ವಿಜಯ ಕಾಲದ ಚರಿತ್ರೆಯ ಹೆಗ್ಗುರುತುಗಳು.ಇಂತದ್ದೊಂದು ಸ್ತೂಪ ಇವತ್ತು ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕಿನ ಯಲ್ಲೋಡು ಗ್ರಾಮದಲ್ಲೂ ಎದ್ದು ನಿಂತಿದೆ.

ಯಲ್ಲೋಡು — ಕಳೆದ ನಾಲಕ್ಕು ವರ್ಷಗಳ ಹಿಂದೆ ತೀರಿ–ಕೊಂಡ ದಲಿತ ಸಂಘರ್ಷ ಸಮಿತಿಯ ಈ ಭಾಗದ ನಾಯಕ ಆಂಜಿನಪ್ಪನ ಊರು.ಆತನ ಸಮಾಧಿಯ ಬಳಿ ಎದ್ದು ನಿಂತ ಈ ಸ್ತೂಪದ ಉದ್ಘಾಟನೆ ಇಷ್ಟರಲ್ಲೇ ನಡೆಯಲಿದೆ.'ದಸಂಸ'ಕ್ಕೆ ಎಲ್ಲೆಲ್ಲಿಂದಲೋ ಪ್ರೇರಣೆಗಳು ಹರಿದು ಬಂದು 'ದಲಿತ ಪ್ರಜ್ಞೆ' ರೂಪುಗೊಳ್ಳಲು ಕಾರಣವಾಗಿವೆ.ಎಂದೋ ಆಗಿ ಹೋಗಿರುವ ಇತಿಹಾಸದ ನೆನಪುಗಳು, ಖಂಡಾಂತರದಾಚೆಗಿನ ವಿದ್ಯಮಾನಗಳು ಈ ಪ್ರಜ್ಞೆಯ ಭಾಗವಾಗಿವೆ.

ಸ್ಪಾರ್ಟಕಸ್, ಅಬ್ರಹಾಂ ಲಿಂಕನ್, ರಷ್ಯಾದ ಕ್ರಾಂತಿ, ಬುದ್ಧ, ಫುಲೆ !ಹೀಗೆ ಯಾವುದು ಬೇಕಾದರೂ ಪ್ರೇರಣೆಯಾಗಬಹುದು.

ಇದೆಲ್ಲವೂ ದಲಿತ ಚಳವಳಿಯ ಆರಂಭಕಾಲದಲ್ಲಿ ಅಗತ್ಯವಿದ್ದ ಹುಮ್ಮಸ್ಸುಗಳು. ಮುವ್ವತ್ತು – ನಲವತ್ತು ವರ್ಷಗಳ ನಂತರವೂ ಇಂಥ ಪ್ರೇರಣೆಗಳಿಗಾಗಿ ಅದು ತನ್ನ ಕಾಲ ಕೆಳಗೆ ನೋಡದಿರುವುದು ಅದರ ಚಿಂತನಾ ಶಕ್ತಿ ಬೆಳೆದಿಲ್ಲ ಎಂಬುದರ ಕಾರಣವೋ ? ಅಥವಾ ಈ ಹೊತ್ತಿನ ಗೊತ್ತು ಗುರಿಗಳಿಲ್ಲದ ಅದರ ದಿಕ್ಕೇಡಿತನವೋ ಹೇಳುವವರು ಯಾರು ?



■ ಕೋಟಗಾನಹಳ್ಳಿ ರಾಮಯ್ಯ

ಹಿಂದೆ ಸತ್ತವರ ಸಮಾಧಿಯ ಬಳಿ ಗಿಡ ನೆಡುವುದೋ ಅಥವಾ ಹತ್ತು ಜನರ ಅನುಕೂಲಕ್ಕಾಗಿ ಏನಾದರೊಂದನ್ನು ಕಟ್ಟಿ ' ಆ ಜೀವವೇ ಈ ಜೀವಕ ನಡೆ' ಎನ್ನುವುದು ಈ ಪರಂಪರೆಗಳ ರೀತಿ.

ನನ್ನಜ್ಜಿ ಮಣ್ಣಾದ ಮೇಲೆ ನನ್ನ ಸೋದರ ಮಾವ ಮುನಿಸ್ವಾಮಿ 12ನೇ ದಿನ ನನ್ನನ್ನು ಅಜ್ಜಿಯ ನೆನಪಿಗೆ ಇಂತದ್ದೊಂದನ್ನು ನಿರ್ಮಿಸುವಂತೆ ಕೇಳಿದ್ದ.ಕೇಳಿದ ರೀತಿ ನನ್ನನ್ನು ತಬ್ಬಿಬ್ಬುಗೊಳಿಸಿತ್ತು. 'ಅಪ್ಪಯ್ಯ... ಅಜ್ಜಿ ಗುರುತಿಗೆ ಏನೋ ಒಂದು ಆಗಬೇಕು.. ಅದನ್ನ ನೀನು ಮಾಡಬೇಕು..ಏನಂತೀಯಾ?ಎಂದ.

ನನಗೆ ನಿಜಕ್ಕೂ ದಿಗಿಲಾಯ್ತು.ಏನು ಕೇಳಿಬಿಡುತ್ತಾರೋ ಏನೋ ಎಂದು.ನಾನು ಆಗ ಇದ್ದ ನೌಕರಿಗಳನ್ನೆಲ್ಲಾ ಬಿಟ್ಟು ಅಬ್ಬೆಪಾರಿಯಾಗಿದ್ದೆ.ಆದರೆ ನಮ್ಮ ಮಾವ ಮಾಡಬೇಕೆಂದಿದ್ದನ್ನ ಕೇಳಿ ದಿಗಿಲಿಗೆ ಬದಲು ಆಶ್ಚರ್ಯವಾಯಿತು.ಅವರು ಕೇಳಿದ್ದು ಒಂದು ಕಲ್ಲಿನ ಅಟ್ಟ.ಕೇವಲ ಮೂರು ಚಪ್ಪಡಿಗಳಿಂದಾಗಬಹುದಾದ ಅಟ್ಟ, ಅದೂ ಆಸು ಪಾಸಿನ ರೈತರ ಅನುಕೂಲಕ್ಕಾಗಿ.

ನಮ್ಮ ಮಾವನ ಗುಡಿಸಲಿದ್ದದ್ದು ಊರಿಗೆ ದೂರವಾಗಿದ್ದ ಹೊಲಗಳಲ್ಲಿ.ಆ ಹೊಲದ ಅಂಚಲ್ಲಿ ಒಂದು ಹೊಂಗೆ ಮರ ಇತ್ತು.ಅದು ಬಂಗಾರಪೇಟೆ – ಹರಟಿ ನಡುವೆ ದಿನಕ್ಕೆ ಎರಡು ಮೂರು ಬಾರಿ ಓಡಾಡುತ್ತಿದ್ದ ಬಸ್ಸು ನಿಲ್ಲುತ್ತಿದ್ದ ನಿಲ್ದಾಣವಾಗಿತ್ತು.ಸುತ್ತಮುತ್ತಲ ರೈತರು ತಾವು ಬೆಳೆಯುತ್ತಿದ್ದ ತರಕಾರಿ, ಸಾಮಾನು, ಸರಂಜಾಮುಗಳನ್ನು ಬಸ್ಸಿಗೆ ಏರಿಸುತ್ತಿದ್ದದ್ದೂ ಅಲ್ಲಿಯೇ. ಹಾಗೆ ಬಸ್ ಟಾಪಿಗೆ ಏರಿಸುವಾಗ ಅವರಿಗೆ ತುಂಬಾ ಕಷ್ಟವಾಗುತ್ತಿತ್ತು. ಅಲ್ಲೊಂದು 'ಕಲ್ಲಟ್ಟ' ಎತ್ತಿದರೆ ಅವರಿಗೆಲ್ಲಾ ಅನುಕೂಲವಾಗುತ್ತದೆ ಎನ್ನುವುದು ನಮ್ಮ ಮಾವನ ಇರಾದೆ. ಇದ–ರಿಂದ ನಮ್ಮ ಮಾವನಿಗೇನೂ ಅನುಕೂಲವಿರಲಿಲ್ಲ.ಯಾಕೆಂದರೆ ನಮ್ಮ ಮಾವನಿಗೆ ತರಕಾರಿ ಬೆಳೆಯುವುದಕ್ಕೆ ಬೇಕಾದ ಯಾವ ನೀರಿನ ಆಸರೆಯೂ ಇರಲಿಲ್ಲ.ತರಕಾರಿ ಬೆಳೆಯುತ್ತಿದ್ದವರೆಲ್ಲಾ ನಮ್ಮ ಮಾವನಿಗಿಂತ ಅನುಕೂಲಸ್ಥ ರೈತರು. ಅವರ 'ಸೌಭಾಗ್ಯ' ಕಂಡು ನಮ್ಮ ಮಾವ ಅಸೂಯೆ ಪಡಬಹುದಿತ್ತು. ತನಗಿಲ್ಲದ್ದು ಅವರಿಗಿದೆಯೆಂದು. ಆದರೆ ಆತ ಬಯಸಿದ್ದು ನಮ್ಮ ಅಜ್ಜಿಯ ಗುರುತು ಅವರಿಗೆಲ್ಲಾ ಅನುಕೂಲವಾಗಲೆಂದು.ಇದು ಪರಂಪರೆಗಳಲ್ಲಿರುವ ಬುದ್ಧಕಾರುಣ್ಯದ ಬೆಳಕು.ಇಲ್ಲವಾಗಿದ್ದರೆ ಸಾಲುಮರಗಳೂ, ಅರವಂಟಿಗೆಗಳು, ದದ್ದನಗಳು, ಮರುಕು ದರುಮಶಾಲೆಗಳು, ಕೆರೆ ಕುಂಟೆಗಳು ಈ ಪ್ರಮಾಣದಲ್ಲಿ ಇರಲು ಸಾಧ್ಯವೇ ಇರಲಿಲ್ಲ.

ಆಂಜಿನಪ್ಪ ಕೂಡ ಎದೆಯಲ್ಲಿ ಇದೇ ಬೆಳೆ ಕಟ್ಟಿಕೊಂಡಿದ್ದವನು. ಆತನ ಒಂದೊಂದು ಹೆಜ್ಜೆಯನ್ನೂ ನೋಡುತ್ತಾ ಹೋದಂತೆ ಇದು ಮನವರಿಕೆಯಾಗುತ್ತದೆ. ಒಂದೇ ಒಂದು ಘಟನೆ..ಸಾಕು ಇದನ್ನು ಕಾಣುವುದಕ್ಕೆ.

ಮನೆ ಇಲ್ಲದ ಆಂಜಿನಪ್ಪನಿಗೆ ಒಂದು ಜನತಾ ಮನೆಯಾಗುತ್ತದೆ.ಮೊದಲ ಬಿಲ್ಲು ಐದುಸಾವಿರ ಪಡೆಯುತ್ತಾನೆ.ಮನೆಗೆ ಬರುವ ದಾರಿಯಲ್ಲಿ ಯಾ–ರೋ ಎದುರಾಗುತ್ತಾರೆ.ಬೆಂಗಳೂರಿನ ಆಸ್ಪತ್ರೆಯಲ್ಲಿ ತಮ್ಮ ಮಗನೊಬ್ಬನನ್ನು ಅಡ್ಮಿಟ್ ಮಾಡಿದ್ದಾರೆ.ಚಿಕಿತ್ಸೆಗೆ ಕಾಸಿಲ್ಲ. ಸುದ್ದಿ ಕೇಳಿದೊಡನೆ ಆಂಜಿನಪ್ಪ ತನ್ನ ಜೇಬಿನಲ್ಲಿದ್ದ ಅಷ್ಟೂ ಹಣವನ್ನು ಎತ್ತಿ ಆತನ ಕೈಗಿಡುತ್ತಾನೆ.ಇದು ಆಂಜಿನಪ್ಪ.

ಇಂಥ ಆಂಜಿನಪ್ಪನ ಸಮಾಧಿಯ ಬಳಿ ಯಾವುದಕ್ಕೂ ಬಾರದ ಸ್ತೂಪವೇಕೆ ಎದ್ದು ನಿಂತಿದೆ?ಅದಕ್ಕೂ ಒಂದು ಪ್ರೇರಣೆ ಇದೆ.ತಮ್ಮ ಕಾಲ ಕೆಳಗೆ ಇರಬಹುದಾದ ಇಂತಹ ಅದೆಷ್ಟೋ ಸ್ತೂಪಗಳನ್ನು ಕಾಣದ ಚಳವಳಿಗಾರರು ಮಹಾರಾಷ್ಟ್ರದ ಮಹರ್ ಲಾಂಛನ ಇರುವ ಕೋರೆಗಾಂವಿಗೆ ಹೋಗಿ ಬಂದಿದ್ದಾರೆ. ಅಂತದ್ದೇ ಒಂದು ಸ್ತೂಪ ಸ್ಮಾರಕವನ್ನು ನಿರ್ಮಿಸಬೇಕೆಂಬ ಪ್ರೇರಣೆ ಅವರಲ್ಲಿ ಮೂಡಿದೆ. ಅದರ ಪರಿಣಾಮವೇ ಈ ಸ್ತೂಪ! ತಪ್ಪೇನಿಲ್ಲ.

ಕೋರೆಗಾಂವ್‌ಗಳನ್ನಷ್ಟೇ ಕಣ್ಣು ತುಂಬಿಕೊಳ್ಳುವವರಿಗೆ 'ಕಲ್ಲಟ್ಟಗಳು' ಕಾಣದಿರುವುದು ದುರಂತವೋ ? 'ದಲಿತ ಪ್ರಜ್ಞೆಯ' ವಿಸ್ತಾರವೋ?.. ಹೇಗೆ ಹೇಳುವುದು.?

(ಸಂಗಾತಿ ಸಂಘಂ ಅಂಜಿನಪ್ಪ – ಪುಸ್ತಕದಿಂದ ಆಯ್ದ ಲೇಖನ)

ಸಂಗಾತಿ ಸಂಘಂ ಆಂಜಿನಪ್ಪ

ದಲಿತ ಚಳುವಳಿಯ ಒಬ್ಬ ನಿಜದ ನಡೆಗಾರ

■ **ಶಿವರಾಮಯ್ಯ**

ದಲಿತ ಸೂರ್ಯ ಅಂಬೇಡ್ಕರ್ ಕೊಟ್ಟ ಕರೆ ಹಾಗೂ ಸಂವಿಧಾನದಲ್ಲಿ ಕಲ್ಪಿಸಿದ ಮೀಸಲಾತಿ ಸೌಲಭ್ಯದ ಕಾರಣ, ಸವರ್ಣೀಯರು ನೂಕಿದಾ ಕಡೆ ಬಿದ್ದು ಹಾಕಿದಾ ಎಂಜಲು ತಿಂದು ಶತಶತಮಾನ ಅವಮಾನದ ಬದುಕು ಸಾಗಿಸುತ್ತಿದ್ದ ಕತ್ತಲ ಜಗತ್ತಿನ ಜನ ಅಸ್ಪೃಶ್ಯರ ಕಣ್ಣು ತೆರೆಯಿತು. ಕೀಳರಿಮೆಯ ತೆರೆ ಸರಿದು ಆತ್ಮಪ್ರತ್ಯಯದ ಅರುಣೋದಯವಾಯಿತು. ನಾವು ನಿಮಗೆ ಸಮನೆಂಬ ಸ್ವಾಭಿಮಾನ ಮೂಡಿತು. ಆಗ ತಿಳಿಯಿತು ನಾವು ಹಿಂದಿನ ಕುರಿಗಳಲ್ಲ ವಿಸ್ಮೃತಿಗೆ ಸಂದಿದ್ದ ಆದಿಮ ಮನುಷ್ಯರು ಎಂಬುದು. ಹೀಗೆ ಎಚ್ಚರಗೊಂಡವರಲ್ಲಿ ಸಂಗಾತಿ ಸಂಘಂ ಆಂಜಿನಪ್ಪ ಕೂಡಾ ಒಬ್ಬರು. ಅಸ್ಪೃಶ್ಯತೆ, ಮತೀಯತೆ, ಜಾತೀಯತೆ, ಕೋಮುವಾದ, ಭ್ರಷ್ಟಾಚಾರಗಳೆಂಬ ಪಂಚಮಹಾಪಾತಕಗಳಿಂದ ಭರತಭೂಮಿ ಅಪವಿತ್ರಗೊಳ್ಳುತ್ತಿದೆ. ಆದರೂ ದೇಶ ಪ್ರಕಾಶಿಸುತ್ತಿದೆ. ಅಭಿವೃದ್ಧಿ ಪಥದಲ್ಲಿದೆ ಎಂಬ ಸೋಗಲಾಡಿ ಸುಳ್ಳುಗಳಿಗೆ ಮಾತ್ರ ಬರವಿಲ್ಲ. ಇಂಥ ಹೊತ್ತಿನಲ್ಲಿ ದಲಿತ ಚಳುವಳಿ ಚರಿತ್ರೆಯ ಹುಡುಕಾಟದಲ್ಲಿ ಣಟಡಿಛಿಣ (ಅನ್‌ರೆಸ್ಟ್) ಆಗಿ ತನ್ನನ್ನು ತೊಡಗಿಸಿಕೊಂಡಿದ್ದಾರೆ ಗೆಳೆಯ ಕೋಟಗಾನಹಳ್ಳಿ ರಾಮಯ್ಯ. ಅವರ ಈ ಹುಡುಕಾಟದಲ್ಲಿ ಕಣ್ಣಿಗೆ ಬಿದ್ದವರು ಎಲ್ಲೋಡು ಆಂಜಿನಪ್ಪ.

ಎಲ್ಲೋಡು ಆಂಜಿನಪ್ಪ ದಲಿತ ಚಳುವಳಿಯ ಒಬ್ಬ ನಿಜದ ನಡೆಗಾರ. ದಿನಾಂಕ 6.4.2013 ರಂದು ಶನಿವಾರ ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕಿನ ಅವರ ಹುಟ್ಟೂರು ಎಲ್ಲೋಡಿನಲ್ಲಿ ಅವರ ಹೆಸರಿನಲ್ಲಿ ಸ್ತೂಪ ಉದ್ಘಾಟನೆ ಮತು ಕೆ. ರಾಮಯ್ಯನವರ ಸಂಪಾದಕತ್ವದಲ್ಲಿ ವಿವಿಧ ಲೇಖಕರ ನೆನಪು ಸಂಗ್ರಹದ "ಸಂಗಾತಿ ಸಂಘಂ ಆಂಜಿನಪ್ಪ" ಎಂಬ ಪುಸ್ತಕ ಬಿಡುಗಡೆಯನ್ನೂ ಮಾಡಲಾಯಿತು. ಡಾ. ಕೆ. ಮರುಳಸಿದ್ಧಪ್ಪನವರಿಂದ ಸ್ತೂಪದ ಉದ್ಘಾಟನೆ, ನನ್ನಿಂದ ಪುಸ್ತಕದ ಬಿಡುಗಡೆ ಆಯಿತು. ಕಳ್ಳಂಬೆಳ್ಳದ ತೋಟದಲ್ಲಿದ್ದ ನಾನು ರಾಮಯ್ಯನವರ ಆಗ್ರಹಪೂರ್ವಕ ಕರೆಗೆ ಮಣಿದು ಏಪ್ರಿಲ್ ಬಿಸಿಲಿನ ಬೇಗೆಯಲ್ಲಿ ಕೆಂಡ ಹಾದವರೆಂಬಂತೆ ಶಿರಾ – ಮಧುಗಿರಿ – ಗೌರಿಬಿದನೂರು ಮಾರ್ಗವಾಗಿ ಎಲ್ಲೋಡು ತಲುಪಿದೆ. ಆದರೆ ಆಂಜಿನಪ್ಪನವರ ಬಗೆಗಿನ ಈ ಪುಸ್ತಕವನ್ನು ಓದಿದ ಮೇಲೆ, ಕೊಂಡ ಹಾದವರ ಮೈಮೇಲೆ ಹಿಮದ ಮಂಜು ಸುರಿದಂತೆ ಅನುಭವವಾಯಿತು. 'ಎಲ್ಲ ಮಲಗಿರುವಾಗ' ಎಲ್ಲೋಡಿನ ಆಂಜಿನಪ್ಪನ ಸಂಗಾತಿಗಳು, ಸ್ನೇಹಿತರು, ಬಳಗದವರು ಸೇರಿ ಅವರಿಗೊಂದು ಸ್ಥಾವರ ಸ್ತೂಪವನ್ನು ನಿರ್ಮಿಸಿ ಮತ್ತು 'ಸಂಗಾತಿ ಸಂಘಂ ಆಂಜಿನಪ್ಪ' ಎಂಬ ಜಂಗಮರೂಪಿ ಸ್ಥಾವರ ಪುಸ್ತಕವನ್ನು ಪ್ರಕಟಿಸುತ್ತಿರುವುದು ಬೆರಗು ಬರಿಸುವಂತಿದೆ. ಹಾಗಾದರೆ ಇವರ ಹೆಚ್ಚುಗಾರಿಕೆ? ಇವರು ಮಾಡಿದ ಕೆಲಸವೇನು? ಆಡಿದ ಮಾತುಗಳೇನು? ಎಂದರೆ, ಎಲ್ಲೋಡು ಆಂಜಿನಪ್ಪ ಒಬ್ಬ ನಿಷ್ಠಾವಂತ, ಪ್ರಾಮಾಣಿಕ, ಸಾಧು–ಸಂತರ ತರಹ ಜಿತೇಂದ್ರಿಯನಾದ ಯೋಗಿಯಂತೆ, ಜೋಗಿಯಂತೆ ಬದುಕಿ ಬಾಳಿದ ದಲಿತ ಸಂಘರ್ಷ ಸಮಿತಿಯ ಒಬ್ಬ ಹೋರಾಟಗಾರ. ಗುಡಿಬಂಡೆ, ಬಾಗೇಪಲ್ಲಿ ಸುತ್ತಲಿನ ಸೀಮೆಯಲ್ಲಿ ದನಿಯಿಲ್ಲದವರಿಗೆ ದನಿಯಾಗಿ ಅವರ ಕ್ಷೇಮಕಾರಕನಾಗಿ ಜೀವ ಸವೆಸಿದವರು ಇವರು.

ನೆಲೆ–ಹಿನ್ನೆಲೆ

ಎಲ್ಲೋಡು ಗುಡಿಬಂಡೆ ತಾಲ್ಲೂಕಿನ ಒಂದು ಪುಟ್ಟಗ್ರಾಮ. ಆಂಜಿನಪ್ಪ ಹುಟ್ಟಿದ್ದುದರಿಂದ ಇದು ಮಹಾರಾಷ್ಟ್ರದ 'ಕೋರೆ ಗಾಂವ್' ಎಂಬಂತೆ ದಲಿತರಿಗೊಂದು ಪವಿತ್ರ ಸ್ಫೂರ್ತಿ ಕೇಂದ್ರವಾಗಿದೆ. ಆಂಜಿನಪ್ಪನ ತಾಯಿ ಹನುಮಕ್ಕ, ತಂದೆ ಗುರ್ರಾಲ ದೊಡ್ಡನರಸಿಂಹಪ್ಪ. ಹುಟ್ಟಿದ್ದು 1952ರಲ್ಲಿ, ಇವರಿಗೆ ಹತ್ತನೆಯ ಮಗನಾಗಿ. ಸಾಧುಸಂತರ ಹಿಂದೆ ಬಿದ್ದು ಕನ್ನಡ ಮತ್ತು ತೆಲುಗು ಹಾಡು ಭಜನೆ ಮಾಡುತ್ತಿದ್ದ ಏಳುವರ್ಷ ಕಳೆದ ಹುಡುಗನನ್ನು ಶಾಲೆಗೆ ಸೇರಿಸಲಾಯಿತು. ಓದಿದ್ದು ಏಳನೆಯ ತರಗತಿಯವರೆಗೆ ಮಾತ್ರ. ಇವರ ಆಧ್ಯಾತ್ಮದ ಗುರುಗಳು ಉರುಟೂರು ವೆಂಕಟಯ್ಯಶೆಟ್ಟಿ ಎಂಬಾತ. ಒಮ್ಮೆ ಇಬ್ಬರಿಗೂ ಗುಡಿಸಿಲಿನಲ್ಲಿ ನಾಗರಹಾವು ಕಚ್ಚಿಬಿಟ್ಟಿತು. ಆಗ ಗುರು–ಶಿಷ್ಯರು ಅದಕ್ಕೆ ಔಷಧಿ ತೆಗೆದುಕೊಳ್ಳುವುದನ್ನು ಬಿಟ್ಟು ಆ ಹಾವನ್ನು ಹೊಡೆಯುವುದೋ ಬೇಡವೋ ಎಂದು ಜಿಜ್ಞಾಸೆಗೆ ತೊಡಗಿದ್ದರು. ಊರ ಜನ ಕಂಡು ಬೈದು ಅವರಿಗೆ ಸೂಕ್ತ ಮದ್ದನ್ನು ತೆಗೆದುಕೊಳ್ಳುವಂತೆ ಹೇಳಿದರು. ಕಡೆಗೆ ತುಂಬೆ ಸೊಪ್ಪಿನ ರಸ ಕುಡಿದು ಇಬ್ಬರು ಬದುಕಿ ಉಳಿದುಕೊಂಡರಂತೆ. ನಾಗರಹಾವನ್ನು ಕೊಲ್ಲಬಾರದು ಎಂದ ಗುರುಗಳ ಮೌಢ್ಯವನ್ನು ಧಿಕ್ಕರಿಸಿ ಕೊಂದದ್ದು ಬಾಲಕ ಆಂಜಿನಪ್ಪನ ವೈಚಾರಿಕ ಬುದ್ಧಿಯನ್ನು ಸಾರುತ್ತದೆ.

ಗೃಹಜೀವನ: ಆಂಜಿನಪ್ಪ ಒಳ್ಳೆ ಕಟ್ಟುಮಸ್ತಾದ ಆಳು. ಅವರ ಮಡದಿ ಅಶ್ವತ್ಥಮ್ಮ ಆಂಜಿನಪ್ಪನ ಸ್ವಂತ ಅಕ್ಕನ ಮಗಳು. ಇವರ ಮದುವೆ ನಡೆದ ರೀತಿಯೂ ವಿಚಿತ್ರವೇ. ಈಕೆಯ ಅಪ್ಪ 'ದಾರೀಲಿ ಹೋಗೋ ದಾಸಯ್ಯನಿಗೆ ಕೊಟ್ಟೇನು ಆದರೆ ಅವನಿಗೆ ಮಾತ್ರ ಹೆಣ್ಣು ಕೊಡಲ್ಲ' ಎಂದು ಹೇಳಿದ್ದರು. ಆದರೆ ಅಳಿಯ ಬಿಡಬೇಕಲ್ಲ ದಾಸಯ್ಯನ ವೇಷವನ್ನೇ ತೊಟ್ಟು ಹೋಗಿ ಹೆಣ್ಣು ಕೇಳಿದರು. ಅದು ಮಾತಿಗೆ ಬೆಲೆ ಇದ್ದ ಕಾಲ. ಆಡಿದ ಮಾತಿಗೆ ತಪ್ಪದೆ ಮಾವ ಮಗಳನ್ನು ಕೊಟ್ಟು ಮದುವೆ ಮಾಡಿದರು. ಬಹುಶಃ ಮನೆಬಿಟ್ಟು ಜನ ಕಟ್ಟಿಕೊಂಡು ಸುತ್ತುವ ಈ ವ್ಯಕ್ತಿ ಸಂಸಾರ ಏನು ಮಾಡಿಯಾನು? ಎಂದು ಅವರ ಮಾವ ಹೆಣ್ಣು ಕೊಡಲು ಹಿಂದೇಟು ಹಾಕಿರಬೇಕು. ಅದು ಮುಂದೆ ನಿಜವೇ ಆಯಿತು. ದಲಿತೋದ್ಧಾರಕ್ಕೆ ನಿಂತ ತನ್ನ ಗಂಡನ ಕುರಿತು ಅಶ್ವತ್ಥಮ್ಮನ ನೆನಪು ಅದನ್ನು ಸಾದರಪಡಿಸುತ್ತದೆ.

'ಅವರಿಗೆ ಮನೆಗೆ ಬಂದಾಗ ಒಂದು ವಾರ ಕೂಡ ಇರಲು ಆಗುತ್ತಿರಲಿಲ್ಲ. ಸುತ್ತಮುತ್ತ ಹತ್ತಾರು ಹಳ್ಳಿಗಳೇ ಏಕೆ ಜಿಲ್ಲೆಯಲ್ಲಿ



[ಅವಿಭಜಿತ ಕೋಲಾರ ಜಿಲ್ಲೆ] ಎಲ್ಲೇ ದಲಿತರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿಗೆ ಹೋಗಿಬಿಡುತ್ತಿದ್ದರು. ನಾನೂ ಕೂಡ ಬೇಸಾಯದ ಕೆಲಸವಿಲ್ಲದಿದ್ದಾಗ ಅವರ ಜೊತೆಗೆ ಹೋಗುವುದನ್ನು ಆರಂಭಿಸಿದೆ. ನನಗೆ ಅವರು ಮಾಡುತ್ತಿರುವ ಕೆಲಸದಲ್ಲಿ ನ್ಯಾಯವಿದೆ ಅನ್ನಿಸಿತ್ತು. ನಾನೂ ದಸಂಸ ಕಾರ್ಯಕರ್ತಳೇ ಆಗಿಹೋದೆ. ಅವರ ಜೊತೆ ಹೋಗಿದ್ದಾಗ ಹಳ್ಳಿಗಳಲ್ಲಿ ಗಲಾಟೆ ಆಗಿದ್ದಿದೆ. ಭೂಮಾಲೀಕ ರೆಡ್ಡಿಗಳು ಗುಂಪು ಕಟ್ಟಿ ಬಂದು ಹೊಡೆದದ್ದಿದೆ. ಅವರ ಜೊತೆ ನನಗೂ ಏಟುಗಳು ಬಿದ್ದಿವೆ. ದಿನ್ನಹಳ್ಳಿ ಹೋರಾಟ ಸುಮಾರು ಆರು ತಿಂಗಳು ನಡೆಯಿತು. ಆಮೇಲೆ ಅವರಿಗೇನೆ ನಾವು ಏನೆಂದು ಅರ್ಥವಾಯಿತು. ನಮ್ಮವರ ಛಲ ಕಂಡು ಅವರು ಮೆತ್ತಗಾದರು. ಕೊನೆಗೆ ನಮ್ಮ ಮನೆಗೇ ಬಂದು ತಪ್ಪಾಯಿತೆಂದು ಗೆಳೆಯರಾದರು.' (ಬೆನ್ನುಡಿ)

ಅಶ್ವತ್ಥಮ್ಮ ಮತ್ತು ಆಂಜನಪ್ಪ ದಂಪತಿಗಳಿಗೆ ನಾಲ್ಕು ಮಕ್ಕಳು ಹುಟ್ಟಿದರೂ ಅವು ಬದುಕಿ ಉಳಿಯಲಿಲ್ಲ. ಒಂದು ಹೆಣ್ಣುಮಗುವನ್ನು ತಂದು ಸಾಕಿಕೊಂಡರು. [ವೈದ್ಯಶಾಸ್ತ್ರದ ಪ್ರಕಾರ ಇವರಿಗೆ ಹುಟ್ಟಿದ ಮಕ್ಕಳು ಉಳಿಯದಿರುವುದಕ್ಕೆ ಕಾರಣ ಹತ್ತಿರದ ರಕ್ತಸಂಬಂಧ ಮಾಡಿದ್ದಿರಬೇಕು ಎನ್ನಬಹುದು.] ಆಂಜನಪ್ಪನ ಜೊತೆಗೂಡಿ ನಡೆದ ಅಶ್ವತ್ಥಮ್ಮ ಈಗ ಕೊಂಚ ನೆಮ್ಮದಿಯಿಂದ ಇರುವಂತೆ ಕಾಣುತ್ತದೆ. ಗಂಡನ ಒಡನಾಡಿಗಳು ಅವರಿಗೆ ಸ್ತೂಪ ನಿರ್ಮಿಸಿ ನೆನಪಿನ ಪುಸಕ ತಂದು ಓಡಾಡುತ್ತಿರುವುದನ್ನು ಕಂಡ ನೆಮ್ಮದಿ ಅದಿರಬೇಕು.

ಹಚ್ಚಿಟ್ಟ ದೀಪ

ಆಂಜನಪ್ಪನವರು ಅಹಿಂಸಾವಾದಿಗಳಾಗಿದ್ದರು. ಒಡೆದಾಟ ಬಡಿದಾಟಕ್ಕಿಂತ ಮಾತುಕತೆ ಸಂವಾದದಲ್ಲಿ ಸಮಸ್ಯೆಗಳ ಪರಿಹಾರ ಕಂಡುಕೊಳ್ಳಬೇಕೆಂದು ಹೇಳುತ್ತಿದ್ದರು. ಅನ್ಯಾಯದ ವಿರುದ್ಧ ಕತ್ತಿ ಎತ್ತುವುದು ಬೇಡ, ನನ್ನವನ್ನು ಸಾಕು ಆ ಕೆಲಸ ಮಾಡುತ್ತದೆ ಎಂದು ಸಂಗಾತಿಗಳಿಗೆ ಸಮಾಧಾನಪಡಿಸುತ್ತಿದ್ದರು. ಹೆಚ್ಚು ಓದು ಬರಹ ಇಲ್ಲದಿದ್ದರೂ ಕೂಡ ಅವರು ಅರಿವುಳ್ಳವರಾಗಿದ್ದರು. ಅಂಜನ ಹಾಕಿ ದೋಷಗಳನ್ನು ಹುಡುಕುತ್ತಾರೆಂಬ ಮಾತಿದೆ; ಹಾಗೇ ಅನ್ವರ್ಥನಾಮ ಹೊಂದಿದ ಆಂಜನಪ್ಪ ವ್ಯಕ್ತಿಗಳ ದೋಷವನ್ನು ಪತ್ತೆ ಹಚ್ಚುವುದರಲ್ಲಿ, ಅದರ ನಿವಾರಣೆಯಲ್ಲಿ ತೊಡಗಿದ್ದವರು. ಅವರ ಮಾನವೀಯತೆ ದೊಡ್ಡದು. 'ಶ್ರೀ ಅಂಜನಾಬೋಧ'ರವರ ಮಾರ್ಗದರ್ಶನದಲ್ಲಿ ಅವರ ಅನಿಸಿಕೆಗಳು ಹಾಗೂ ಒಡನಾಟದಿಂದ ಅನೇಕ ಅನುಭವಗಳನ್ನು ಪಡೆದೆ' ಎಂಬ ಎಂ.ಎಸ್. ನಾರಾಯಣಪ್ಪನವರು ನೆನಪಿಸಿಕೊಳ್ಳುವಂತೆ ಗುಡಿಬಂಡೆ ತಾಲ್ಲೂಕಿನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇವರ ಸೇವೆ ಅಮೂಲ್ಯವಾದುದು. ನೋವಿಗೆ ಮಿಡಿಯುವ ಆಂಜನಪ್ಪನವರ ಹೋರಾಟಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು:


ಗುಡಿಬಂಡೆ ಪಟ್ಟಣ ಪಂಚಾಯಿತಿಯಲ್ಲಿ ಹಂಗಾಮಿ ನೌಕರರಾಗಿ ಖಾಯಮಾತಿ; ಗುಡಿಬಂಡೆ ತಾಲ್ಲೂಕಿನ ಸಮಸ್ತ ದೀನದಲಿತರಿಗೆ ನಿವೇಶನಗಳನ್ನು ನೀಡಲು ನಡೆಸಿದ ಹೋರಾಟ; ಕಂಬಾಲಪಲ್ಲಿ ನರಮೇಧವನ್ನು ಖಂಡಿಸಿ ಮೌನ ಮೆರವಣಿಗೆ; ಎಲ್ಲೋಡು ಗ್ರಾಮದಲ್ಲಿ ಸಮುದಾಯ ಭವನ ಮತ್ತು ಅಂಬೇಡ್ಕರ್ ಭವನಕ್ಕಾಗಿ ಹೋರಾಟ; ದರೋಡೆ-ಕೋರ ಅಂಗುಲಿಮಾಲನನ್ನು ಮನುಷ್ಯನನ್ನಾಗಿಸಿದ ಬುದ್ಧ ಗುರುವಿನಂತೆ, ಇವರು ಶೋಷಕ ಭೂಮಾಲೀಕ ವಿಜಯಭಾಸ್ಕರ ರೆಡ್ಡಿಯನ್ನೂ ಮಣಿಸಿದ್ದು; ಎಲ್ಲೋಡಿನಲ್ಲಿ ಅಂತರ್ಜಾತಿ ವಿವಾಹಕ್ಕೆ ಅನುವು ಮಾಡಿಕೊಟ್ಟದ್ದು ಇತ್ಯಾದಿ.

'ದಲಿತ ಜನಾಂಗದಲ್ಲಿ ಸ್ವಾಭಿಮಾನ, ಸ್ವಾವಲಂಬನೆ, ಆತ್ಮಗೌರವ ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರ ಸಾಧನೆ ವಿಚಾರಗಳನ್ನು ಮಂಡಿಸುತ್ತ ಕಳೆದ ಮೂರು ದಶಕಗಳಿಂದ ರಾಜ್ಯದಲ್ಲಿ ದಸಂಸ ಶ್ರಮಿಸುತ್ತಿದೆ. ಇವರ ಯಶಸ್ಸಿಗೆ ಸಾವಿರಾರು ಮಂದಿ ಪ್ರಾಮಾಣಿಕ, ನಿಷ್ಠಾವಂತ ಕಾರ್ಯಕರ್ತರೇ ಕಾರಣ' ಎನ್ನುವ ಹಿರಿಯರಾದ ಪ್ರೊ. ಕೆ. ನಾರಾಯಣಸ್ವಾಮಿಯವರ ಮಾತಿನಂತೆ ಎಲ್ಲೋಡು ಆಂಜನಪ್ಪನವರೂ ಕೂಡ ಒಬ್ಬ ಪ್ರಾಮಾಣಿಕ, ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಎಷ್ಟೋ ಜನ ಇಂಥ ನಾಯಕರು ಈಗ ಕೋಟಿ ಬೆಲೆಯ ಮಹಲ್‌ಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ಇವರಿಗೆ ಒಂದು ಆಸ್‌ಬೆಸ್ಟಾಸ್ ಮನೆಯೆ ಗತಿಯಾಗಿತ್ತು; ಕೇವಲ ಶಾಖಾಹಾರಿಯಾಗಿದ್ದ ಇವರಿಗೆ 'ಸರಳ ಜೀವನ ಉನ್ನತ ಚಿಂತನ' ಬದುಕಿನ ಧ್ಯೇಯವಾಗಿತ್ತು. ಕಡೆಗಾಲದಲ್ಲಿ ಬಿಪಿ, ಶುಗರ್‌ನಿಂದ ಬಳಲಿ ಆಸ್ಪತ್ರೆ ಸೇರಿದ್ದರು. ಅಲ್ಲಿ ಕೂಡ ತನಗೆ ಡ್ರಿಪ್ಸ್ ಹಾಕಲು ತಂದ ಗ್ಲೂಕೋಸನ್ನು ಮೊದಲು ಪಕ್ಕದ ಬೆಡ್‌ನ ರೋಗಿಗೆ ಕೊಡಿ ಎಂದು ನರ್ಸ್‌ಗೆ ವಿನಂತಿಸಿದ ಮಾನವೀಯತೆ ಆಂಜನಪ್ಪನವರದು. ಹೀಗೆ ನಿಜಕ್ಕೂ ಬೌದ್ಧಭಿಕ್ಕುವೇ ಆಗಿದ್ದರು. 'ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ' ಎಂಬ ಮಂತ್ರಕ್ಕೆ ಬದಲಾಗಿ ಈಗ 'ಯುದ್ಧಂ ಶರಣಂ ಗಚ್ಛಾಮಿ, ವೈರಂ ಶರಣಂ ಗಚ್ಛಾಮಿ' ಎಂಬ ಗರ್ಜನೆ ಕೇಳಿಬರುತ್ತಿದೆ. ಇಂಥಲ್ಲಿ ಎಲ್ಲೋಡು ಆಂಜನಪ್ಪನವರ ನಿಜದ ನಡೆ ನಮ್ಮ ಅನುಸರಣೆಗೆ ಯೋಗ್ಯ ಎಂಬಂತಿದೆ.

ಹೋರಾಟದ ಬದುಕು

ಕೋಟಿಗಾನಹಳ್ಳಿ ರಾಮಯ್ಯನವರು ಮತ್ತು ಅನೇಕ ಒಡನಾಡಿಗಳು ತಮ್ಮ ನೆನಪಿನ ಉಗ್ರಾಣದಿಂದ ಎತ್ತಿತಂದು ಎಲ್ಲೋಡು ಆಂಜನಪ್ಪನವರ ಜೀವನ ಚಿತ್ರವನ್ನು ಕಟ್ಟಿಕೊಡಲು ಉತ್ಸಾಹದಿಂದ ಪ್ರಯತ್ನಿಸಿದ್ದಾರೆ ಈ ಪುಸ್ತಕದಲ್ಲಿ. ಇದರ ಓದು ಎಂದರೆ 'ದಸಂಸ ಕಾಲು ಶತಮಾನದ ಚರಿತ್ರೆಯ ಒಡೆದ ಬಿಂಬಗಳ' ಮೇಲೆ ಕಣ್ಣಾಡಿಸಿದಂತಾಗುತ್ತದೆ. ರಾಮಯ್ಯನವರು ಆಂಜನಪ್ಪನ ಜೋಳಿಗೆಯಿಂದ ಅನೇಕ ಮಾಹಿತಿಗಳನ್ನು ಹೆಕ್ಕಿ ತೆಗೆದಿದ್ದಾರೆ. ಅದರಲ್ಲಿ ಅಡಗಿದ್ದ ಕರಪತ್ರಗಳು, ಪೊಲೀಸು ದೂರುಗಳು, ಮನವಿ ಪತ್ರಗಳು ಇಸವಿವಾರು ಅನುಕ್ರಮಣಿಕೆಯಲ್ಲಿ ಜೋಡಿಸಿದಾಗ ಅವರ ಹೋರಾಟದ ಅನೇಕ ಪ್ರಸಂಗಗಳು, ಘಟನೆಗಳು, ಸಂಗತಿಗಳು ನಮಗೆ ತಿಳಿದುಬರುತ್ತವೆ. 1986ರಿಂದ 2010ರವರೆಗಿನ ಕಾಲುಶತಮಾನದ ದಲಿತ ಚಳುವಳಿಯ ಚರಿತ್ರೆಯನ್ನು ಈ ಒಡೆದ ಕನ್ನಡಿಯ ತುಂಡುಗಳನ್ನು ಜೋಡಿಸಿ ಕಟ್ಟುವ ಪ್ರಯತ್ನದಲ್ಲಿದ್ದಾರೆ ರಾಮಯ್ಯ. ಇದು ಬೃಹತ್ ದಲಿತ ಚಳುವಳಿ ಹಾಗೂ ಸಾಹಿತ್ಯ ನದಿಯ ಒಂದು ಕಿರುತೊರೆ ಎನ್ನಬಹುದು ಹಾಗೂ ಕರ್ನಾಟಕದ ಸಬಾಲ್ಟರ್ನ್ ಚರಿತ್ರೆಗೆ ಒಂದು ಮಾದರಿಯೂ ಆದೀತು.

ಸಂಗಾತಿ ಸಂಘಂ ಎಲ್ಲೋಡು ಆಂಜನಪ್ಪನವರ ನೆನಪಿನ ಸಮಾರಂಭದಲ್ಲಿ ಎಲ್ಲಿ ನೋಡಿದರೂ ಅವರ ಒಡನಾಡಿ ಸಂಗಾತಿಗಳ ಸಂಭ್ರಮವೇ ಸಂಭ್ರಮ. 'ಸುಡಿಯನ್ನು ನಡೆಯಾಗಿಸಿದ ಆಂಜನಪ್ಪ' ಎನ್ನುವ ಸಿ.ಜಿ. ಗಂಗಪ್ಪ, 'ಕಣ್ಣು ತೆರಸಿದ ಆಂಜನಪ್ಪಣ್ಣ' ಎನ್ನುವ ಇಸ್ಕೂಲಪ್ಪ ಅಲಿಯಾಸ್ ನರಸಿಂಹಪ್ಪ; 'ಅವರು ಹೆಂಡತಿ, ಮಕ್ಕಳು, ಮನೆ, ಆಸ್ತಿ ಬಗ್ಗೆ ಯೋಚಿಸಲೇ ಇಲ್ಲ' ಎನ್ನುವ ವೈ.ಎ. ಆದಿ ನಾರಾಯಣಪ್ಪ; 'ಆಂಜನಪ್ಪ ವ್ಯಕ್ತಿ ಅಲ್ಲ ಒಂದು ಶಕ್ತಿ' ಎನ್ನುವ ವೆಂಕಟನಾರಾಯಣ; 'ಅವರು ಮಿಲ್ಟ್ರಿ ಸಿಪಾಯಿ ಇದ್ದಂತೆ' ಎನ್ನುವ ವೈ.ಎ. ನಂಜಾರೆಡ್ಡಿ; 'ಮೂರು ತಿಂಗಳ ಕಾಲ ಆದಿನಾರಾಯಣ ಬೆಟ್ಟದ ಮೇಲೆ ತಪಸ್ಸಿಗೆ ಕೂತಿದ್ದ ಯೋಗಿ ಆತ' ಎನ್ನುವ ವೈ.ಎಂ. ಅಶ್ವತ್ಥಪ್ಪ; 'ನಮಗಿವರು ಎರಡನೇ ಅಂಬೇಡ್ಕರ್' ಎನ್ನುವ ಕೇಬಲ್ ವೆಂಕಟೇಶ್; 'ದಾರಿ ತೋರಿದ ಬುದ್ಧಿದೀಪ' ಎನ್ನುವ ಭೋಗೇನಹಳ್ಳಿ ಕೃಷ್ಣಪ್ಪ; 'ಅಸಾಧಾರಣ ಮನುಷ್ಯ ಆಂಜನಪ್ಪ' ಎನ್ನುವ ಜಿ.ವಿ. ಗಂಗಪ್ಪ –ಹೀಗೆ ಇವರೆಲ್ಲರೂ ಎದೆತುಂಬಿ ಆಂಜನಪ್ಪನವರ ಗುಣಗಾನ ಮಾಡಿರುತ್ತಾರೆ.



ಸಂಗಾತಿ ಸಂಘಂ

ಆಂಜನಪ್ಪ ನೆನಪಲ್ಲಿ

■ ಅಶ್ವತ್ಥಮ್ಮ

ಸಾಯುವುದಕ್ಕೆ ಎರಡು ದಿನ ಮೊದಲು ಆಸ್ಪತ್ರೆಯಲ್ಲಿ ವಿಪರೀತ ದಾಂದಲೆ ಮಾಡಿದರು. ಪಕ್ಕದ ಹಾಸಿಗೆಯಲ್ಲಿದ್ದ ರೋಗಿಗೆ ನಿಗಾ ಇಟ್ಟು ಚಿಕಿತ್ಸೆ ಕೊಡದೆ ಹೋದ ವೈದ್ಯರ ಮತ್ತು ನರ್ಸುಗಳ ಮೇಲೆ ರೇಗಾಡಿ ಚಿಕಿತ್ಸೆ ಕೊಡಿಸಿದರು. ಅವರ ಬಳಿ ಗ್ಲೂಕೋಸ್ ಬಾಟಲಿಗೆ ದುಡ್ಡಿಲ್ಲದ್ದನ್ನು ಕಂಡು ತಮಗೆ ಬರೆದುಕೊಟ್ಟಿದ್ದನ್ನೇ ತರಿಸಿ ಅವರಿಗೆ ಕೊಡಿಸಿದರು. ನನಗೂ ಹುಶಾರು ತಪ್ಪಿತು. ಹಾಸಿಗೆಯಲ್ಲಿ ತಮ್ಮ ಪಕ್ಕವೇ ಮಲಗಿಸಿಕೊಂಡು ಗ್ಲೂಕೋಸ್ ಹಾಕಿಸಿದರು. ಮನೆಗೆ ಹೋಗೋಣವೆಂದು ರಾದ್ಧಾಂತ ಮಾಡಿದರು.ಮಾರನೆಯ ದಿನ ಹೊರಟು ಹೋದರು.

ಆಕೆಗೆ ಕನ್ನಡ ಬಾರದು. ಆಕೆಯ ತೆಲುಗಿಗೆ ನಾನು ಹೊಂದಿ ಕೊಳ್ಳಬೇಕು. ಈಕೆ ಅಶ್ವತ್ಥಮ್ಮ. ಗತಿಸಿದ ಆಂಜನಪ್ಪನ ಮಡದಿ.

"ಮಗ ಬುದ್ಧ ಹುಟ್ಟಿದ ಮೇಲೆ ಒಂಬತ್ತು ತಿಂಗಳು ಬದುಕಿದ್ದ. ಸಂಘರ್ಷ ಎರಡನೆಯ ಮಗ. ನಾಲ್ಕು ವರ್ಷ. ಮೂರನೆ ಯವನು....... ಏಳು ತಿಂಗಳು. ಕೊನೆಯವಳು ಮಗಳು ಜೀವನ ಜ್ಯೋತಿ... ಮೂರು ತಿಂಗಳು.. ಎಲ್ಲ ಮಕ್ಕಳು ಅಗಲಿ ಹೋದವು. ಆಂಜನಪ್ಪ ಆ ಮಕ್ಕಳ ಹೆರಿಗೆಗೂ ಬರಲಿಲ್ಲ... ಮಣ್ಣಿಗೂ ಬರಲಿಲ್ಲ.ಈ ಮಕ್ಕಳಿರಲಿ ಅವರ ಅಪ್ಪ – ಅಮ್ಮನ ಮಣ್ಣಿಗೂ ಕೂಡ."

ಅಶ್ವತ್ಥಮ್ಮ ಹೇಳುತ್ತಾ ಹೋದಂತೆ ಆಂಜನಪ್ಪ ಬದುಕೆಂಬ ಲಂಕಿಣಿಯ ತೆರೆದ ಬಾಯಿಯ ಎದುರು ಆಕಾಶದೆತ್ತರ ಬೆಳೆಯುತ್ತಾ ಹನುಮಂತನೇ ಆಗುತ್ತಿದ್ದ. ಆಂಜನಪ್ಪನ ನೆನಪಿಗಾಗಿ ಅಶ್ವತ್ಥಮ್ಮ ಅವರನ್ನು ಮಾತಾಡಿಸಲು ಎಲ್ಲೋಡಿಗೆ ಬಂದಾಗ ಮನೆಗೆ ಬೀಗ ಹಾಕಿತ್ತು. ಆಕೆ ಹಿಂದೂಪುರಕ್ಕೆ ಖಾಯಿಲೆಯಾಗಿದ್ದ ತಮ್ಮನನ್ನು ಒಯ್ದಿದ್ದಳು.ವಾರ ಕಳೆದು ಬಂದಳು.'ಹತ್ತು ಸಾವಿರ ಖರ್ಚಾಯಿತು ಆಸ್ಪತ್ರೆಗೆ. ಒಂದು ಗಳಿಗೆ ತಡಮಾಡಿದ್ದರೆ ತಮ್ಮನನ್ನೂ ಕಳೆದುಕೊಳ್ಳಬೇಕಿತ್ತು' ಎಂದು ಮಾತಾಡಲು ಆರಂಭಿಸಿದಳು.ಎದೆಯಲ್ಲಿ ಹುದುಗಿಸಿಟ್ಟುಕೊಂಡಿದ್ದ ದುಃಖದ ಸರಮಾಲೆಯನ್ನೇ ಬಿಚ್ಚಿದಳು.

ಅಶ್ವತ್ಥಮ್ಮ ಆಂಜನಪ್ಪನ ಸ್ವಂತ ಅಕ್ಕನ ಮಗಳು.ಇವರ ಮದುವೆ ನಡೆದ ರೀತಿಯೂ ಒಂದು ವಿಚಿತ್ರವೇ. ಈಕೆಯ ಅಪ್ಪ 'ದಾರೀಲಿ ಹೋಗೋ ದಾಸಯ್ಯನಿಗೆ ಕೊಟ್ಟೇನು ಅವನಿಗೆ ಮಾತ್ರ ಹೆಣ್ಣು ಕೊಡಲ್ಲ' ಅಂದ ಮಾತು ಆಂಜನಪ್ಪನನ್ನು ಕೆರಳಿಸಿದೆ.ಆತ ದಾಸಯ್ಯನ ವೇಷ ಹಾಕಿಕೊಂಡು ಜಾಗಟೆ ಬಾರಿಸುತ್ತಾ ನಿಲುಗುಂಬದ ಮಾವನ ಮನೆ ಹಟ್ಟಿಯಲ್ಲಿ ನಿಂತಿದ್ದಾನೆ. ಜೊತೆಗೆ 'ವೆಂಕಟ್ರಮಣ ಸಾಮಿ ಗೋವಿಂದಾ.. ಆದಿನಾರಾಯಣಸ್ವಾಮಿ ಗೋವಿಂದಾ..'ಎನ್ನುವ ಗೋವಿಂದ ಘೋಷಣೆಗಳನ್ನೂ ಕೂಗಿದ್ದಾನೆ. ಅಶ್ವತ್ಥಮ್ಮ ಒಲೆಯ ಮೆಲೆ ಹಿಟ್ಟು ತೊಳಿಸುತ್ತಿದ್ದಾಳೆ. ಗೋವಿಂದ ಘೋಷಣೆ ಕೇಳಿ ಯಾರೋ ದಾಸಯ್ಯನೇ ಬಿಕ್ಷಕ್ಕೆ ಬಂದಿರಬೇಕೆಂದು ಬೊಗಸೆ ಹಸಿಟ್ಟು ಹಿಡಿದು ಭಿಕ್ಷೆ ಹಾಕಲು ಬಂದಿದ್ದಾಳೆ. ದಾಸಯ್ಯ ವೇಷಧಾರಿ ಆಂಜನಪ್ಪ ಎಂದು ತಿಳಿದು ಹಸಿಟ್ಟನ್ನು ಅಲ್ಲಿಯೇ ಚೆಲ್ಲಿ ಮತ್ತೆ ಅಡುಗೆ ಕೋಣೆ ಹೊಕ್ಕಿದ್ದಾಳೆ. ಆಂಜನಪ್ಪ ಆದರ್ಶಗಳ ಬಿಸಿಲುಗುದುರೆ ಏರಿ

ದಿಗ್ವಿಜಯಯಾತ್ರೆ ಕೈಗೊಂಡಾಗಲೆ ಅವರ ಮದುವೆಯೂ ನಡೆದಿದ್ದು. ಮದುವೆಗೆ ಅಶ್ವತ್ಥಮ್ಮನ ತಂದೆ-ತಾಯಿಗಳು ಒಪ್ಪಿಗೆ ಕೊಟ್ಟಿರಲಿಲ್ಲ. ಅಶ್ವತ್ಥಮ್ಮ ಇನ್ನೂ ಚಿಕ್ಕವಳು.ಆಗ ನಡೆದ ಮದುವೆ ಆಕೆಗೆ ನೆನಪಿದೆ.

"ದಾಸಯ್ಯನಂತೆ ವೇಷ ತೊಟ್ಟು ಬಂದ. ಕೊರಳಿಗೆ ಅರಿಶಿಣ ಕೊಂಬು ಕಟ್ಟಿ ಕರೆದೊಯ್ದ. ಕೊನೆಯವರೆಗೂ ನನ್ನ ಕೊರಳಲ್ಲಿ ಅರಿಶಿಣದ ಕೊಂಬೇ ಇದ್ದದ್ದು."ಇದು ಆಂಜಿನಪ್ಪನ ಆದರ್ಶದ ರೀತಿ. ಆತ ಸ್ಮಶಾನವಾಸಿ ಶಿವನೂ ಹೌದು. ಕಮರ್ಷಿಯಲ್ ಸಿನಿಮಾದ ನಾಯಕನೂ ಹೌದು. ಆಂಜಿನಪ್ಪನಿಗೆ ಕೊಂಚ ಜಮೀನಿತ್ತು.ಅಶ್ವತ್ಥಮ್ಮ ಆ ಜಮೀನಿನಲ್ಲಿ ತಮ್ಮಂದಿರ ಸಹಾಯದಿಂದ ಬೆಳೆ ತೆಗೆಯುತ್ತಿದ್ದಳು. ಆಂಜಿನಪ್ಪ ಮಣ್ಣಿಗೆ ಕೈ ಇಳಿಸದೆ ಸದಾ ದಸಂಸ ಸೇರಿ ಜನಶಕ್ತಿಯ ಬೆಳೆ ತೆಗೆಯುವುದರಲ್ಲಿದ್ದ.

"ನನ್ನನ್ನ 'ಏನಮ್ಮಾ' ಎಂದೇ ಆ ಸ್ವಾಮಿ ಕರೆಯುತ್ತಿದ್ದದ್ದು. ಮನೆಗೆ ಬಂದಾಗ ಒಬ್ಬರೇ ಬರುತ್ತಿರಲಿಲ್ಲ.ಸದಾ ಸಂಘದೋರ ಗುಂಪು.ಮನೆಯಲ್ಲಿ ಸೇರಕ್ಕಿ ಇಲ್ಲದೆ ಹೋದರೂ ಎಲ್ಲರಿಗೂ ಮಾಡಿ ಬಡಿಸಬೇಕಿತ್ತು.ಅದು ಒಂದು ದಿನದ ಕತೆಯಾಗಿರಲಿಲ್ಲ. ಯಾವಾಗ ಬಂದರೂ ಅಷ್ಟೆ. ಒಂದು ಸಾರಿ ಸೇರು ಅಕ್ಕಿ ಹಾಕಿ ಕಜ್ಜಾಯ ಮಾಡಿದ್ದೆ. ಮುವ್ವತ್ತು ಜನರನ್ನು ಹಿಂದಿಟ್ಟುಕೊಂಡು ಬಂದಿದ್ದರು. ಎಲ್ಲರಿಗೂ ಹಂಚಿದೆ.ಮನೆಯಲ್ಲಿ ನಮಗಿಲ್ಲದೆ ಹೋದರೂ ಎತ್ತಿಟ್ಟು ಅವರಿಗೆ ಬಡಿಸುತಿದ್ದೆ. ಮನೆಗೆ ಬರುತ್ತಿದ್ದದ್ದು ಹುಣ್ಣಿಮೆಗೋ ಅಮಾವಾಸ್ಯೆಗೋ... ಹೊರಡುವಾಗ ಅವರ ಬ್ಯಾಗಿಗೆ ಐನೂರೋ.. ಸಾವಿರ.. ಹಾಕಬೇಕಿತ್ತು. ಕೆಲವು ಸಾರಿ ಹೀಗೆ ಹಾಕಲು ಕಾಸಿಲ್ಲದೆ ಹೋದಾಗ ಮುನಿಸಿಕೊಂಡು ತಿರುಗಿಯೂ ನೋಡದೆ ನಡೆದೇ ಬಿಡುತ್ತಿದ್ದರು. ಈ ಕಾರಣಕ್ಕೇನೆ ಒಮ್ಮೊಮ್ಮೆ ನಮ್ಮ ನಡುವೆ ಜಗಳ ಆಗುತ್ತಿತ್ತು. ಆಗ ಅವರು ' ನೋಡಮ್ಮ ತಾಳಿ ಕಟ್ಟಿದ್ದಕ್ಕಾಗಿ ಇರುವ ಜಮೀನಿನಲ್ಲಿ ಅರ್ಧ ಭಾಗಮಾಡಿ ನಿನಗೆ ಕೊಡುತ್ತೇನೆ. ಇನ್ನರ್ಧವನ್ನು ನಾನು ಮಾರಿ ಸಂಘಟನೆಗೆ ಬಳಸಿಕೊಳ್ಳುತ್ತೇನೆ' ಎನ್ನುತ್ತಿದ್ದರು.

ಅವರಿಗೆ ಮನೆಗೆ ಬಂದಾಗ ಒಂದು ವಾರ ಕೂಡ ಇರಲು ಆಗುತ್ತಿರಲಿಲ್ಲ. ಸುತ್ತ ಮುತ್ತ ಹತ್ತಾರು ಹಳ್ಳಿಗಳೇ ಏಕೆ, ಜಿಲ್ಲೆಯಲ್ಲಿ ಎಲ್ಲೇ ದಲಿತರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿಗೆ ಹೋಗಿಬಿಡುತ್ತಿದ್ದರು.ನಾನೂ ಕೂಡ ಬೇಸಾಯದ ಕೆಲಸವಿಲ್ಲದಿದ್ದಾಗ ಅವರ ಜೊತೆಗೆ ಹೋಗುವುದನ್ನು ಆರಂಭಿಸಿದೆ. ನನಗೆ ಅವರು ಮಾಡುತ್ತಿರುವ ಕೆಲಸದಲ್ಲಿ ನ್ಯಾಯವಿದೆ ಅನ್ನಿಸಿತ್ತು. ನಾನೂ ದಸಂಸ ಕಾರ್ಯಕರ್ತಳೇ ಆಗಿಹೋದೆ. ಅವರ ಜೊತೆ ಹೋಗಿದ್ದಾಗ ಹಳ್ಳಿಗಳಲ್ಲಿ ಗಲಾಟೆ ಆಗಿದ್ದಿದೆ. ರೆಡ್ಡಿಗಳು ಗುಂಪುಕಟ್ಟಿ ಬಂದು ಹೊಡೆದಿದ್ದಿದೆ. ಅವರ ಜೊತೆ ನನಗೂ ಏಟುಗಳು ಬಿದ್ದಿವೆ. ದಿನ್ನಹಳ್ಳಿ ಹೋರಾಟದಲ್ಲಿ ಒಂದು ಮೈಲು ದೂರ ಅಟ್ಟಿಸಿಕೊಂಡು ಬಂದು ಹೊಡೆದರು. ರೆಡ್ಡಿ ಕತ್ತಿ, ಕಠಾರಿ ಹಿಡಿದು ನಮ್ಮ ಮನೆಗೇ ಬಂದು ಕೊಲೆ ಮಾಡುತ್ತಾರೆ ಎನ್ನುವ ಸುದ್ದಿಯನ್ನು ಸಂಘದವರೇ ಬಂದು ತಿಳಿಸಿದರು. ಮನೆಬಿಟ್ಟು ಬೇರೆಲ್ಲಾದರೂ ಹೋಗುವಂತೆ ಸಲಹೆ ಮಾಡಿದರು. ಆದರೂ ಅದೇನಾಗುತ್ತದೋ ಆಗಲಿ ಎಂದು ತೀರ್ಮಾನಿಸಿದೆವು. ಅವರೂ ಕದಲಲಿಲ್ಲ. ನಾನೂ ಕೂಡ. ಜತೆಗಿದ್ದವರು ಹೆದರಿ ಹೊರಟು ಹೋದರು. ಅವರಂದುಕೊಂಡಂತೆ ಏನೂ ಆಗಲಿಲ್ಲ. ಅವರಿಗೂ ನಮಗೂ ಆರು ತಿಂಗಳು ಬೀದಿ ಕಾಳಗ ನಡೆಯಿತು. ಆಮೇಲೆ ಅವರಿಗೇನೆ ನಾವು ಏನೆಂದು ಅರ್ಥವಾಯಿತು. ನಮ್ಮವರ ಛಲ ಕಂಡು ಅವರು ಮೆತ್ತಗಾದರು. ಕೊನೆಗೆ ನಮ್ಮ ಮನೆಗೇ ಬಂದು ತಪ್ಪಾಯಿತೆಂದು ಗೆಳೆಯರಾದರು.

ಇನ್ನೊಬ್ಬರ ಬಳಿ ಏನೂ ಇಲ್ಲದಾಗ ನಮ್ಮ ಬಳಿ ಮಾತ್ರ ಅದು ಇದ್ದಲ್ಲಿ ಅದನ್ನು ಅವರಿಗೆ ಹಿಂದೂ ಮುಂದೂ ನೋಡದೆ ಕೊಟ್ಟುಬಿಡಬೇಕು. ಇದು ಅವರ ಆದೇಶ. ಕೊಡದೆ ಇದ್ದರೆ ಜಗಳವೋ ಜಗಳ. ಬರು ಬರುತ್ತಾ ನಾನೂ ಅವರಂತೆಯೇ ಆಗಿ ಹೋದೆ. ಕೊನೆ ಕೊನೆಗೆ ನನಗೂ ದಲಿತ ಸಂಘದ ಹುಚ್ಚು ಹಿಡಿಯಿತು. ಎಲ್ಲಿ ಏನೇ ಕಾರ್ಯಕ್ರಮವಿದ್ದರೂ ಹೋಗದೆ ಇರಲಾಗುತ್ತಿರಲಿಲ್ಲ. ಮೂಗುನತ್ತು ಮಾರಿಯಾದರೂ ಬಸ್‌ಚಾರ್ಜ್ ಇಟ್ಟುಕೊಂಡು ಹೋಗುತ್ತೇನೆ.ಜನರ ಜೊತೆಗಿರುವಾಗ ಅವರ ಕಷ್ಟ ಸುಖ ಗೊತ್ತಾಗುತ್ತದೆ. ನನ್ನದರಕ್ಕಿಂತ ಅವರ ಬದುಕುಗಳು ಕಷ್ಟದವು ಅನ್ನಿಸುತ್ತವೆ. ನನಗೆ ತೋಚಿದಂತೆ ಸಮಾಧಾನ ಹೇಳುತ್ತೇನೆ. ಬೀದಿಗಿಳಿದು ಅವರ ಜೊತೆ ನಡೆಯುತ್ತೇನೆ.

ಅವರು ಇರುವಾಗಲೆ ಮಕ್ಕಳೊಬ್ಬರೂ ಉಳಿಯದ ಕೊರಗಿಗೆ.. ಒಂದು ದಿನ ಬಾಗೇಪಲ್ಲಿ ಪೊಲೀಸ್ ಠಾಣೆ ಎದುರು ಅಳುತ್ತಾ ಕೂತಿದ್ದೆ. ಅದುವರೆಗೆ ಗೆಡ್ಡೆ ಕಟ್ಟಿದ್ದ ದುಃಖವೆಲ್ಲಾ ಅಳುವಾಗಿ ಹರಿಯುತ್ತಿತ್ತು. ಆಗ ಒಬ್ಬ ಆಫೀಸರ್ ಮಹಿಳೆ ನಾನು ಅಳುತ್ತಿರುವುದು ಯಾಕೆಂದು ಜತೆಗಿದ್ದವರನ್ನು ಬಂದು ಕೇಳಿದಳು. ಕಾರಣ ಕೇಳಿದ ಮೇಲೆ ಯಾರೋ ಬೀದಿ ಬದಿ ಬಿಟ್ಟು ಹೋಗಿದ್ದ ಅನಾಥ ಮಗುವನ್ನು ನನಗೆ ಶಾಲುವಿನಲ್ಲಿ ಸುತ್ತಿ ಕೊಡಿಸಿದರು. ಆ ಮಗುವಿನ ಮೇಲೆ ಅವರಿಗೆ ಪ್ರಾಣವೇ ಇತ್ತು. ಏಳನೆ ತರಗತಿವರೆಗೆ ಓದಿಸಿದ್ದೇನೆ.ಅವಳಿಗೆ ಸ್ವಲ್ಪ ಬುದ್ಧಿ ಮಂದ. ಮನೆಯಲ್ಲೇ ಇದ್ದಾಳೆ.ಅವಳಿಗಾಗಿ ಬದುಕಿದ್ದೇನೆ.

ಅವರು ಸಾಯುವ ಮುನ್ನ ಆರೋಗ್ಯ ಕೆಟ್ಟಿತ್ತು.ಅವರಿಗೆ ಬಿ.ಪಿ. ಷುಗರ್ ಇತ್ತು. ಇದ್ದರೂ ಮಾತ್ರೆ ಕೂಡ ತಿನ್ನುತ್ತಿರಲಿಲ್ಲ. ಯಾವುದೇ ವಿಶೇಷ ಆಹಾರ ಬೇಕೆನ್ನುತ್ತಿರಲಿಲ್ಲ. ಹಬ್ಬ ಹರಿದಿನಗಳಲ್ಲೂ ಅಷ್ಟೆ. ಹಬ್ಬದ ಅಡುಗೆ ಬಗ್ಗೆ ಪ್ರಸ್ತಾಪಿಸಿದರೆ, "ನೀವೇನಾದರೂ ಮಾಡಿಕೊಳ್ಳಿ, ನನಗೆ ಹಿಟ್ಟು-ಗೊಜ್ಜು ಇದಿಷ್ಟೇ ಸಾಕು" ಎನ್ನುತ್ತಿದ್ದರು. ಪುಸ್ತಕಗಳೆಂದರೆ ಹುಚ್ಚು. ಒಮ್ಮೊಮ್ಮೆ ಪುಸ್ತಕಕ್ಕೆ ದುಡ್ಡು ಬೇಕಿದ್ದಾಗ ಜಗಳ ಆಡಿ ಕಿತ್ತುಕೊಂಡು ಹೋಗಿ ಪುಸ್ತಕ ತರುತ್ತಿದ್ದರು.

ಆರೋಗ್ಯ ತೀರಾ ಹದಗೆಟ್ಟಿತ್ತು. ಮೊದಲೆಲ್ಲಾ ಆಸ್ಪತ್ರೆ ಸುದ್ದಿ ಎತ್ತಿದರೆ ಎಗರಾಡುತ್ತಿದ್ದವರು ಅಂದು ಮೆತ್ತಗಾಗಿದ್ದರು. ಹೇಳಿದ ಕೂಡಲೆ ಒಪ್ಪಿದರು. ಯಾವತ್ತೂ ಇಲ್ಲದಂತೆ ಅಂದು 'ಚೀಲ ಬೇಡ, ಡೈರಿ ಮಾತ್ರ ಎತ್ತಿಕೋ' ಅಂದರು. ಹೆಗಲಿನಲ್ಲಿ ಬ್ಯಾಗಿಲ್ಲದ ಅವರನ್ನು ಕಲ್ಪಿಸಿಕೊಳ್ಳಲು ಕೂಡ ಆಗುತ್ತಿರಲಿಲ್ಲ. ನನಗೆ ನಂಬಲಾಗಲಿಲ್ಲ. 'ಎತ್ತಿಕೊಳ್ಳುತ್ತೇನೆ' ಎಂದೆ. 'ನಿನ್ನಿಷ್ಟ ನೀನೇ ಸರಿ ಇರಬಹುದು ಎತ್ತಿಕೋ, ನಿನಗಾದರೂ ಬೇಕಾಗಬಹುದು' ಅಂದರು. ನನಗೆ ಇದು ಸೋಜಿಗದಂತೆ ಕಂಡಿತು. 'ಯಾಕೆ ಹಾಗೆ ಹೇಳುತ್ತೀರಿ' ಅಂದೆ. 'ಮುಂದೆ ನಿನಗೇ ಅರ್ಥವಾಗುತ್ತದೆ ನಡೇ' ಅಂದರು.

ಸಾಯುವುದಕ್ಕೆ ಎರಡು ದಿನ ಮೊದಲು ಆಸ್ಪತ್ರೆಯಲ್ಲಿ ವಿಪರೀತ ದಾಂದಲೆ ಮಾಡಿದರು. ಪಕ್ಕದ ಹಾಸಿಗೆಯಲ್ಲಿದ್ದ ರೋಗಿಗೆ ನಿಗಾ ಇಟ್ಟು ಚಿಕಿತ್ಸೆ ಕೊಡದೆ ಹೋದ ವೈದ್ಯರ ಮತ್ತು ನರ್ಸುಗಳ ಮೇಲೆ ರೇಗಾಡಿ ಚಿಕಿತ್ಸೆ ಕೊಡಿಸಿದರು. ಅವರ ಬಳಿ ಗ್ಲೂಕೋಸ್ ಬಾಟಲಿಗೆ ದುಡ್ಡಿಲ್ಲದ್ದನ್ನು ಕಂಡು ತಮಗೆ ಬರೆದುಕೊಟ್ಟಿದ್ದನ್ನೇ ತರಿಸಿ ಅವರಿಗೆ ಕೊಡಿಸಿದರು. ನನಗೂ ಹುಶಾರು ತಪ್ಪಿತು. ಹಾಸಿಗೆಯಲ್ಲಿ ತಮ್ಮ ಪಕ್ಕವೇ ಮಲಗಿಸಿಕೊಂಡು ಗ್ಲೂಕೋಸ್ ಹಾಕಿಸಿದರು. ಮನೆಗೆ ಹೋಗೋಣವೆಂದು ರಾದ್ಧಾಂತ ಮಾಡಿದರು.ಮಾರನೆಯ ದಿನ ಹೊರಟು ಹೋದರು.

ನನಗೆ ಅವರ ಸಮಾಧಿ ಬಳಿ ಒಂದು ಚಿಕ್ಕ ರೂಮು ಕಟ್ಟಿಸಿ, ಅಲ್ಲಿ ಅವರ ಪುಸ್ತಕಗಳನ್ನೆಲ್ಲಾ ಇಡುವ ಆಸೆ. ಯಾರಾದರೂ ಬಂದು ಅಲ್ಲಿ ಉಳಿದು ಓದುತ್ತಾರಲ್ಲ... ಅದಕ್ಕೆ...


(ನಿರೂಪಣೆ : ಕೋಟಿಗಾನಹಳ್ಳಿ ರಾಮಯ್ಯ)

ನಿಮಗೆ ನೀವೇ ಬೆಳಕಾಗಿ

ಇಂಗ್ಲೀಷಿನಿಂದ ಕನ್ನಡಕ್ಕೆ:

■ ಡಾ.ಎಂ.ನಾರಾಯಣ ಸ್ವಾಮಿ

ಇಂಗ್ಲೀಷ್ ಕಾದಂಬರಿ ಕಾರರಾದ ಮುಲ್ಕ್ ರಾಜ್ ಆನಂದ್‌ರವರು, The untouchable, Coolie, The Village ಮುಂತಾದ ಕೃತಿಗಳ ಮೂಲಕ 1930ರ ಸುಮಾರಿಗೆ ಪ್ರಸಿದ್ಧಿಗೆ ಬಂದವರು. ಮಾರ್ಕ್ಸಿಸ್ಟ್ ಚಿಂತಕರಾದ ಇವರು, 1950ರ ಮೇ ತಿಂಗಳ ಒಂದು ಸಂಜೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರೊಂದಿಗೆ ಮುಂಬಯಿಯ ಕೊಲಾಬಾದಲ್ಲಿ ನಡೆಸಿದ ಮಾತುಕತೆಯ ವಿವರಗಳು ಹೀಗಿವೆ.



ಆನಂದ್: ನಮಸ್ಕಾರ, ಡಾ. ಅಂಬೇಡ್ಕರ್‌ರವರಿಗೆ.

ಅಂಬೇಡ್ಕರ್: ನನಗೆ ಬೌದ್ಧರ ಶುಭಾಶಯ ಹಿಡಿಸುತ್ತದೆ. "ಆಮ್ ಮಣಿ ಪದ್ಮಯೇ", ಅಂದರೆ ಕಮಲಗಳರಳಿ ಜಾಗೃತವಾಗಲಿ ಎಂದರ್ಥ.

ಆನಂದ್: ನಾನೂ ಅದನ್ನು ಒಪ್ಪುತ್ತೇನೆ. ನಾವೆಷ್ಟು ವಿವೇಚನಾರಹಿತರು! ಅವಿವೇಕಿಗಳು! ಪದಗಳ ಅರ್ಥವನ್ನು ಪ್ರಶ್ನಿಸಿ ತಿಳಿಯದೆ, ಸಾಂಪ್ರದಾಯಕವಾಗಿ ಉಪಯೋಗಿಸುತ್ತಿರುತ್ತೇವೆ. ನಮಸ್ಕಾರವೆಂದರೆ ನಾನು ಬಾಗಿ ವಂದಿಸುತ್ತೇನೆ ಎಂದರ್ಥ.

ಅಂಬೇಡ್ಕರ್: ಅದು ಮನುಷ್ಯರನ್ನು ಅಧೀರರನ್ನಾಗಿಸುತ್ತದೆ. 'ಕಮಲಗಳರಳಿ ಜಾಗೃತವಾಗಲಿ' ಎಂಬ ಬೌದ್ಧಧರ್ಮದ ಶುಭಾಶಯವು ಜ್ಞಾನೋದಯದ ಮತ್ತು ಪ್ರಭುದ್ಧತೆಯ ಸಂಕೇತವಾಗಿದೆ.

ಆನಂದ್: ಗೊಡ್ಡು ಸಂಪ್ರದಾಯಗಳು ಸಾಯುವುದೇ ಇಲ್ಲ. ಪ್ರಶ್ನಿಸದೆ ಅವುಗಳನ್ನು ಪಾಲಿಸುತ್ತಿರುತ್ತೇವೆ. ಆ ಬಗ್ಗೆಯೇ ಯೋಚಿಸೋಣ. ಹುಟ್ಟುವಾಗ ಯಾರೂ ಕೂಡ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಎಂಬ ಹಣೆಪಟ್ಟಿ ಧರಿಸಿ ಹುಟ್ಟಿರುವುದಿಲ್ಲ. ಹಿಂದೂಗಳು ತಮ್ಮ ಮಗುವಿಗೆ ಹೆಸರಿಡುವಾಗ ಸಂಸ್ಕೃತದ ಶ್ಲೋಕಗಳು ಪಠಣವಾಗುತ್ತವೆ. ಪವಿತ್ರವೆನ್ನುವ ದಾರವೊಂದನ್ನು ಮಗುವಿನ ದೇಹಕ್ಕೆ ಹಾಕಲಾಗುತ್ತದೆ. ಆಗ ಮಗು ಹಿಂದುವಾಗಿಬಿಡುತ್ತದೆ.

ಅಂಬೇಡ್ಕರ್: ಮೂರ್ಖತನ (Idiocy)

ಆನಂದ್: ಈಗ ನೀವು ಬಳಸಿದ ಖಜುಙಳಿಥಿ ಒಂದು ಗ್ರೀಕ್ ಪದ. ಹಾಗೆಂದರೆ ಒಂದು ವೃತ್ತದಲ್ಲಿ ವೃತಾ ಸುತ್ತುವುದು ಎಂದರ್ಥ.

ಅಂಬೇಡ್ಕರ್: ಪ್ರತಿಯೊಬ್ಬರೂ ಹಳೆಯ ಆಚರಣೆಗಳು, ಹವ್ಯಾಸಗಳು, ನಂಬಿಕೆಗಳು, ವಿಚಾರಗಳನ್ನು ಪ್ರಶ್ನಿಸಬೇಕು. ವಿದ್ಯಾರ್ಥಿಗಳು ಶಿಕ್ಷಕರನ್ನು ಪ್ರಶ್ನೆ ಕೇಳುವ ಶಿಕ್ಷಣ ಪದ್ಧತಿ ರೂಪುಗೊಳ್ಳಬೇಕು.

ಆನಂದ್: ಶಿಕ್ಷಕರನ್ನು ಪರಿಣತರನ್ನಾಗಿಸುವ ಉತಮ ಮಾರ್ಗ ಅದೇ. ಶಿಕ್ಷಕರಿಗೆ ಪಠ್ಯಕ್ರಮದಲ್ಲಿಲ್ಲದ ವಿಷಯಗಳು ಬಹಳಷ್ಟು ಸಂಧರ್ಭಗಳಲ್ಲಿ ತಿಳಿದಿರುವುದೇ ಇಲ್ಲ. ಪ್ರಶ್ನಿಸುವಿಕೆಯಿಂದಲೇ ಮಾನಸಿಕವಾಗಿ ಪ್ರಬುದ್ಧರಾಗಬಹುದು. ನಾನಿದನ್ನು ಹೆನ್ರಿ ಬೆರ್ಗ್‌ಸನ್ ಬರೆದ "Creative Evolution" (ಸೃಜನಾತ್ಮಕ ವಿಕಾಸವಾದ) ಓದಿ ತಿಳಿದೆ. ಹೆಗೆಲ್, ಕಾಂಟ್ ಮತ್ತು ಡೆಸ್ಕಾರ್ಟ್ ಅಂಥವರ ತತ್ವಶಾಸ್ತ್ರದ ಹೇಳಿಕೆಗಳು ಗೋಜಲು ಗೋಜಲಾಗಿದ್ದವು. "ಪ್ರಜ್ಞೆಯನ್ನು ಉನ್ನತ ಮಟ್ಟಕ್ಕೇರಿಸಿಕೊಳ್ಳಲು ತತ್ವಶಾಸ್ತ್ರಜ್ಞರ ಚಿಂತನೆಗಳನ್ನೂ ಪ್ರಶ್ನಿಸಬೇಕು, ಪ್ರತಿಭಟಿಸಬೇಕು" ಎಂದು ಬೆರ್ಗ್‌ಸನ್ ಹೇಳಿದ್ದಾನೆ.

ಅಂಬೇಡ್ಕರ್: ತಮ್ಮ ತೋಳಬಲದಿಂದ ದುಡಿಯುವ ವರ್ಗವನ್ನು ತುಚ್ಛರನ್ನಾಗಿ ಪರಿಗಣಿಸಲಾಗಿದೆ! ಚರ್ಮ ಸುಲಿಯುವವರನ್ನು, ಸಗಣಿ ಹೊರುವವರನ್ನು, ಹೊಲಗದ್ದೆಗಳಲ್ಲಿ ಕೂಲಿಯಾಳುಗಳಾಗಿರುವವರನ್ನು, ಎಲ್ಲರನ್ನೂ ಜೀತಕ್ಕೊಳಪಡಿಸಿ ಶೋಷಿಸಲಾಗಿದೆ. ಐದು ಸಾವಿರ ವರ್ಷಗಳ ನಂತರವೂ ಇದೆಲ್ಲಾ ಮುಂದುವರೆದಿದೆ. ಅಸ್ಪೃಶರು ದೇವಾಲಯ ಪ್ರವೇಶಿಸುವಂತಿಲ್ಲ. ಹಳ್ಳಿಯ ಬಾವಿಯಿಂದ ನೀರನ್ನು ಸೇದಿಕೊಳ್ಳುವಂತಿಲ್ಲ. ಅವರು ದೂರದ ಹಳ್ಳ ಕೊಳ್ಳಗಳಿಂದ ಕೊಳಕು ನೀರನ್ನು ತೆಗೆದುಕೊಳ್ಳಬೇಕು. ಅವರ ದನಗಳನ್ನು ಭೂಮಾಲಿಕರ ಜಮೀನಿನಲ್ಲಿ ಮೇಯಿಸುವಂತಿಲ್ಲ. ಹೊಲಸನ್ನು ಶುಚಿ ಮಾಡುವ ಕೆಲಸ ವಹಿಸಿಕೊಟ್ಟಿದ್ದಲ್ಲದೆ ಅಸ್ಪೃಶ್ಯರನ್ನೇ ಹೊಲಸಿನ ಹಾಗೆ ನೋಡಲಾಗುತಿದೆ. ಹಿಂದೂಗಳು ಪ್ರಾಣಿಗಳನ್ನು ಮುಟ್ಟುತ್ತಾರೆ. ಆದರೆ ಅಸ್ಪೃಶ್ಯರನ್ನು ಮುಟ್ಟುವುದಿಲ್ಲ!

ಆನಂದ್: ಸಂವಿಧಾನ ರಚನೆಯ ಸಂದರ್ಭದಲ್ಲಿ ತಾವು ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದೀರಾ?

ನನಗನ್ನಿಸಿದಂತೆ ನಿಮ್ಮ ಸಮಿತಿಯು ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ. ಆಶ್ಚರ್ಯವೆಂದರೆ, ಅದರ ಜೊತೆಗೇ ಆಸ್ತಿಯ ಹಕ್ಕನ್ನೂ ದಯಪಾಲಿಸಿದ್ದೀರಿ. ಶ್ರೀಮಂತರಿಗೆ ಇದೊಂದು ಭಾರೀ ವರದಾನವಾಗಿದೆಯಲ್ಲವೆ? ಬಡವರಲ್ಲಿಯೇ ಬಡವರಾದ ಅಸ್ಪೃಶ್ಯರಿಗೆ ಇದರಿಂದ ಅತ್ಯಂತ ಅನಾನುಕೂಲವಾಗಿದೆ.

ಅಂಬೇಡ್ಕರ್: ನಾವು ಸಂವಿಧಾನವನ್ನು ಜಾತ್ಯಾತೀತ ತತ್ವ, ಸಮಾಜವಾದ, ಪ್ರಜಾಪ್ರಭುತ್ವ ಇವುಗಳ ತಳಹದಿಯ ಮೇಲೆ ಕಟ್ಟಿದ್ದೇವೆ. ಮುಂದೆ ಸರ್ಕಾರ ತೆಗೆದುಕೊಳ್ಳಬಹುದಾದ ನಿರ್ಧಾರಗಳಿಂದಾಗಿ ಗೇಣಿದಾರರಿಗೆ, ಉಳುವವರಿಗೆ ಭೂಮಿ ಸಿಕ್ಕರೆ, ಆಗ ವ್ಯಕ್ತಿಯ ಹಕ್ಕುಗಳನ್ನು ಕಾಪಾಡಿದಂತಾಗಿ, ಶೋಷಣೆಗೆ ಕಿಂಚಿತ್ತೂ ಎಡೆಯಿರುವುದಿಲ್ಲ. ಬಹುತೇಕ ಅಸ್ಪೃಶ್ಯರು, ಹಾಗೆಯೇ ಕೆಲ ಸವರ್ಣೀಯರು ಮತ್ತು ಮುಸ್ಲಿಮರು ಭೂಹೀನರಾಗಿದ್ದಾರೆ.

ಆನಂದ್: ಹಾಗಿದ್ದರೆ, ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಬಹುದಿತ್ತು?

ಅಂಬೇಡ್ಕರ್: ಸಂವಿಧಾನ ರಚನಾ ಸಮಿತಿಯಲ್ಲಿ ನನಗಿದ್ದುದು ಒಂದು ಮತ ಮಾತ್ರ

ಆನಂದ್: ಅಂದರೆ, ನೀವು ಸಿಂಹಗಳೆದುರು ಕುರಿಮರಿಯಾದಿರಿ!

ಅಂಬೇಡ್ಕರ್: ನನ್ನ ದನಿಯಿದ್ದಷ್ಟೂ ಕೂಗಾಡಿ ಉತ್ತಮವಾದದ್ದನ್ನೇ ಆರಿಸಿಕೊಂಡೆ! ಆದರೆ ಈಗ ಗರ್ಜಿಸುತ್ತಿದ್ದೇನೆ!

ಆನಂದ್: ನ್ಯಾಯಾಧೀಶರು ಮೇಲ್ಜಾತಿ ಮತ್ತು ಮೇಲ್ವರ್ಗದ ಹಿಂದೂಗಳ ಪರವಾಗಿಯೇ ಸದಾ ಹೇಗೆ ತೀರ್ಪು ನೀಡುತ್ತಾ- ರೆ ನೋಡಿ. ನೀವೊಬ್ಬ ವಕೀಲರಾಗಿ ಇದನ್ನು ಗಮನಿಸಿದ್ದೀರಿ ಎಂದುಕೊಳ್ಳುವೆ.

ಅಂಬೇಡ್ಕರ್: ನಿಜ. ನೆಹರೂ ಸರ್ಕಾರದಲ್ಲಿ, ನೆಹರೂರವರು ಆಸ್ತಿಯ ಹಕ್ಕು ಮೂಲಭೂತ ಹಕ್ಕಾಗುವುದರ ವಿರುದ್ಧ ಅಸಮಾಧಾನದಿಂದಿದ್ದರು. ಆದರೆ, ಬಾಬು ರಾಜೇಂದ್ರ ಪ್ರಸಾದರು, ಈ ನೆಹರೂ ಭಾರತವನ್ನು ರಶಿಯಾ ಮಾಡಿಬಿಡುತ್ತಾರೆ ಎಂದುಕೊಂಡುಬಿಟ್ಟರು. ವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನದ ನಿರ್ದೇಶಕ ತತ್ವಗಳಡಿಯಲ್ಲಿ ಸೇರಿಸಲು ಒತ್ತಾಯಿಸಿದರು. ಇವನ್ನು ಪಾರ್ಲಿಮೆಂಟಿನಲ್ಲಿ ಹೋರಾಡಿ ಪಡೆದುಕೊಳ್ಳಬೇಕು.

ಆನಂದ್: ಇದು ಹೇಗೆ ಸಾಧ್ಯ?

ಅಂಬೇಡ್ಕರ್: ಪಾರ್ಲಿಮೆಂಟಿನಲ್ಲಿ ಸಮಾಜವಾದಿಗಳೇ ಒಂದು ದಿನ ಬಹುಮತವನ್ನು ಪಡೆದುಕೊಳ್ಳಬೇಕು. ಆಗ, ಹೆಚ್ಚಿನದನ್ನು ಸಾಧಿಸಬಹುದು.

ಆನಂದ್: ಮೇಲ್ಜಾತಿ ಹಿಂದೂಗಳು ಯಾವಾಗಲೂ ಮೀಸಲಾತಿಯನ್ನು ವಿರೋಧಿಸುತ್ತಾರೆ?

ಅಂಬೇಡ್ಕರ್: ನಾವು ಅಶಕ್ತರನ್ನು ಸಂಘಟಿಸಬೇಕು. ಅವರ್ಣೀಯರು, ಜಾತಿವಾದಿಗಳ ಲೆಕ್ಕಾಚಾರದಲ್ಲಿ ಅಸ್ಪೃಶ್ಯರಾಗಿರುವ ಮುಸ್ಲಿಮರು, ಗಿರಿಜನರು, ಸಮಾಜವಾದಿಗಳೊಂದಿಗೆ ಸೇರಿದರೆ, ಆಸ್ತಿಯ ಹಕ್ಕಿನ ರದ್ದತಿಗಾಗಿ ಹೋರಾಡಬಹುದು. ಭೂಮಾಲೀಕರಿಲ್ಲದ ಮೇಲೆ ಭೂರಹಿತ ಕಾರ್ಮಿಕರು ಇರುವುದಿಲ್ಲ. ಗುತ್ತಿಗೆ ಪದ್ಧತಿಯಲ್ಲಿ ಬೇಸಾಯ ಮಾಡುವ ಭೂರಹಿತ ಉಳುಮೆದಾರರೂ ಇರುವುದಿಲ್ಲ.

ಆನಂದ್: ಭೂ ಒಡೆತನಕ್ಕೆ ಸಂಬಂಧಿಸಿದಂತೆ ಸರ್ಕಾರಿ ಒಡೆತನವೂ ಅಪಾಯಕಾರಿಯಾಗಬಲ್ಲದು. ರಶಿಯಾದಲ್ಲಿ ಸ್ಟಾಲಿನ್ ಏನು ಮಾಡಿದ ಎಂಬುದು ನಿಮಗೂ ಗೊತ್ತಿದೆ. ಕಮ್ಯುನಿಸಂ ಹೆಸರಿನಲ್ಲಿ ಅಧಿಕಾರಶಾಹಿಯನ್ನು ಜನತೆಯ ಮೇಲೆ ಛೂಬಿಟ್ಟು ಹಿಂಸಿಸಿದ.

ಅಂಬೇಡ್ಕರ್: ನಾವು ವ್ಯಕ್ತಿ ಮೇಲೆ ಸವಾರಿ ಮಾಡುವುದನ್ನು, ಹಕ್ಕುಗಳನ್ನು ಕಸಿದುಕೊಳ್ಳುವುದನ್ನು ವಿರೋಧಿಸಬೇಕು. ವ್ಯಕ್ತಿಸ್ವಾತಂತ್ರ್ಯವೇ ಪ್ರಾಥಮಿಕ ಅಗತ್ಯವಾಗಬೇಕು. ಮೂಲಭೂತ ಹಕ್ಕುಗಳನ್ನು ನಾನು ಒತ್ತಾಯಿಸಿದಾಗ, ಇದೇ ನನ್ನ ಮನಸ್ಸಿನಲ್ಲಿತ್ತು.

ಆನಂದ್: ಹಾಗಾದರೆ, ನಾವು ಮೂಲಭೂತ ಹಕ್ಕುಗಳನ್ನು ಮರುಪರಿಶೀಲಿಸಲು ಪಾರ್ಲಿಮೆಂಟಿನ ಮೇಲೆ ಒತ್ತಡ ಹೇರಬೇಕು. ಖಾಸಗಿ ಒಡೆತನದ ಜೊತೆಗೆ ಸರ್ಕಾರಿ ಒಡೆತನದ ವಿರುದ್ಧವೂ ಹೋರಾಡಬೇಕು.

ಅಂಬೇಡ್ಕರ್: ಇಂದು ಭೂಮಾಲಿಕರು ತಮ್ಮ ಬಾಡಿಗೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಬಂಡವಾಳಶಾಹಿಗಳು ಕೂಲಿಯನ್ನು ಕಡಿಮೆ ಮಾಡಿ, ದುಡಿಮೆಯ ಅವಧಿಯನ್ನು ಹೆಚ್ಚುಮಾಡುತಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯು ಸರ್ವಾಧಿಕಾರಕ್ಕೆ ಕಾರಣವಾಗಿದೆ.......

ಆನಂದ್: ಜೀವನದ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸಂತೋಷದ ಹಕ್ಕು...... ಇವು ಕನಸಾಗಿಯೇ ಉಳಿದಿವೆ.

ಅಂಬೇಡ್ಕರ್: ಯುವಜನಾಂಗ ನಿರಂತರ ಹೋರಾಡುತ್ತಿರಬೇಕು ಅವರೇ ಸಂವಿಧಾನವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಲ್ಲರು.

ಆನಂದ್: ಫ್ರಾನ್ಸಿನ 1789ರ ಕ್ರಾಂತಿಯಂತಹ ಬಂಡಾಯವೇ ಬೇಕು, ಇದಕ್ಕೆ.

ಅಂಬೇಡ್ಕರ್: ಇದನ್ನು ನಿಮ್ಮಿಂದ ಕೇಳಲು ಆಶ್ಚರ್ಯವಾಗುತ್ತಿದೆ? ನಿಮ್ಮ ಕಾದಂಬರಿಯಲ್ಲಿ ಗಾಂಧಿಯನ್ನು ಅಸ್ಪೃಶ್ಯರ ವಿಮೋಚಕನೆಂದು ವಿಜೃಂಭಿಸಿಬಿಟ್ಟಿದ್ದೀರಿ.

ಆನಂದ್: ನಾನು ಆ ಮಹಾತ್ಮನ ಎತ್ತರಕ್ಕೆ ಬೆಳೆಯಲಾಗುವುದಿಲ್ಲ. ನಾವು ಹಿಟ್ಲರ್ ಮತ್ತು ಮುಸಲೋನಿಯನ್ನು ಎದುರಿಸಬೇಕಿತ್ತು. ನಾನು ಸ್ಪೈನಿಗೆ ಹೋಗಿ ಅಂತರರಾಷ್ಟ್ರೀಯ ಬ್ರಿಗೇಡನ್ನು ಸೇರಿ- ಕೊಂಡೆ. ಚಿಕಿತ್ಸಾಲಯದಲ್ಲಿ ರಕ್ತ ನೋಡಿ ಬೆವೆತುಹೋದೆ. ಚಿಕಿತ್ಸಾಲಯದಿಂದ ಹೊರಹೋಗಲು ನನಗೆ ಸೂಚಿಸಲಾಯಿತು.

ಅಂಬೇಡ್ಕರ್: ನಿಮಗೂ ಗೊತ್ತು. ಮಹಾತ್ಮನಾಗಬಯಸಿದ ಗಾಂಧಿ ಭಗವದ್ಗೀತೆಯಿಂದ ನಿರೂಪಿತವಾದ ವರ್ಣಾಶ್ರಮ ಪದ್ಧತಿಯನ್ನು ಬಿಟ್ಟುಕೊಡಲಿಲ್ಲ. ಹರಿಜನರೆಂದು, ದೇವರ ಮಕ್ಕಳೆಂದು ಕರೆಯುವ ಮೂಲಕ ಅವರನ್ನು ವೈಭವೀಕರಿಸಲು ಹೆಣಗಾಡಿದರು. ಆದ- ರೆ ಪರಿಶಿಷ್ಟರು ಇನ್ನಷ್ಟು ಅವಮಾನಕ್ಕೊಳಗಾಗಿ ದುಸ್ಥಿತಿಯಲ್ಲೇ ಇದ್ದಾರೆ.

ಆನಂದ್: ಅದರಿಂದಾಗಿಯೇ ನೀವು ಬೌದ್ಧಧರ್ಮವನ್ನು ಸ್ವೀಕರಿಸಿದಿರಾ?

ಅಂಬೇಡ್ಕರ್: ಅದೇ ಮುಖ್ಯವಾದ ಕಾರಣವಾಗಿತ್ತು. ಪರಿಶಿಷ್ಟ ಜಾತಿಯ ವ್ಯಕ್ತಿಯಾಗಿ ಉಳಿದಿದ್ದರೆ ಅವರ್ಣೀಯನ ಕೀಳು ಸ್ಥಾನವನ್ನು ಒಪ್ಪಿಕೊಂಡಂತೆ ಆಗುತ್ತಿತ್ತು. ಹಿಂದೂ ದೇವರಾದ ಬ್ರಹ್ಮನಲ್ಲಿ ಬುದ್ಧನಿಗೆ ನಂಬಿಕೆಯಿಲ್ಲ. ಇಂತಹ ಬ್ರಹ್ಮನನ್ನು ಬಲವಾಗಿ ತಿರಸ್ಕರಿಸುವ ಮನಸ್ಸು ಮಾತ್ರ ಮನುಷ್ಯರ ಹಕ್ಕು - ಸ್ವಾತಂತ್ರ್ಯಗಳನ್ನು ಕಟ್ಟಿಕೊಡಬಲ್ಲದು. ಆಗ ಮಾತ್ರ ನಂಬಿಕೆಗಳು, ಅದೃಷ್ಟಗಳು, ಕತೆಗಳನ್ನು ದೂರ ನೂಕಬಹುದು. ಜ್ಞಾನಾರ್ಜನೆಯನ್ನು ಪಡೆಯಬಹುದು. ಹಿಂದೂಗಳ ಜಾತಿ ಸೂಚಕ ದೇವರುಗಳಿಂದ, ಅವತಾರಗಳಿಂದ ದೂರವಿರಬಹುದು.

ಆನಂದ್: ಶೋಷಿತರಿಗೆ ನಿಮ್ಮ ಸಂದೇಶವೇನು?

ಅಂಬೇಡ್ಕರ್: ಹಿಂದೂಗಳು ಕುರಿ ಮೇಕೆಗಳನ್ನಷ್ಟೇ ಬಲಿಕೊಡುತ್ತಾರೆ. ಆದರೆ ನೀವು ಕುರಿಗಳಾಗಬೇಡಿ. ಸಿಂಹಗಳಾಗಿ. "ಅತ್ತ ದೀಪ ಭವ". ನಿಮಗೆ ನೀವೇ ಬೆಳಕಾಗಿ.

ಆನಂದ್: ಆನಂದನಿಗೆ ಬುದ್ಧ ಹೇಳಿದ್ದೂ "ನಿನಗೆ ನೀನೆ ದೀಪವಾಗು" ಎಂದೇ ತಾನೆ?

(ಕೃಪೆ: ಜನಪದ ಏಪ್ರಿಲ್ 2013)

ಒಂದು ಗಲ್ಲು ಶಿಕ್ಷೆ


■ ಮೂಲ: ಜಾರ್ಜ ಆರ್ವೆಲ್

■ ಅನುವಾದ: ಬಿ.ಶ್ರೀಪಾದ ಭಟ್

ಮಳೆಯಲ್ಲಿ ತೊಯ್ದ ಬರ್ಮದ ಜೈಲಿನ ಆವರಣದ ಒಂದು ಬೆಳಗಿನ ಜಾವ.ಎತರದ ಜೈಲು ಗೋಡೆಗಳ ಮೇಲೆ ಸಣ್ಣದಾದ ಬೆಳಕು ನರ್ತಿಸುತ್ತಿತ್ತು.ಪ್ರಾಣಿಗಳ ಪಂಜರದಂತಿರುವ ಉಕ್ಕಿನ ಸರಳುಗಳ ಸಣ್ಣ ಸಣ್ಣ ಸೆಲ್‌ಗಳ ಮುಂದೆ ನಾವೆಲ್ಲ ಕಾಯುತ್ತಿದ್ದೆವು.ಆ ಉಕ್ಕಿನ ಸರಳುಗಳೊಳಗೆ ಮುಂದಿನ ಕೆಲವು ವಾರಗಳೊಳಗೆ ಗಲ್ಲು ಶಿಕ್ಷೆಗೆ ಗುರಿಯಾಗಲಿದ್ದ ಖೈದಿಗಳು ಜೈಲಿನ ಕಂಬಳಿಯನ್ನು ಹೊದ್ದು ಸಣ್ಣದಾದ ಹರಟೆಯಲ್ಲಿ ತೊಡಗಿದ್ದರು.ಕೃಶ ಕಾಯದ,ಸಣ್ಣ ಆಕೃತಿಯ,ಚಂಚಲ ಕಣ್ಣುಗಳ ಹಿಂದೂ ಖೈದಿಯೊಬ್ಬನನ್ನು ಆ ಉಕ್ಕಿನ ಸರಳುಗಳ ಸೆಲ್‌ನಿಂದ ಹೊರ ಕರೆತಂದರು.ಈ ಖೈದಿಯು ದಟ್ಟವಾದ ಹುರಿಮೀಸೆಯನ್ನು ಬೆಳೆಸಿದ್ದ.ಆದರೆ ಆತನ ಕೃಶ ಶರೀರಕ್ಕೆ ಮತ್ತು ಆತನ ಆಗಿನ ಸ್ಥಿತಿಗೆ ಸ್ವಲ್ಪವೂ ಹೊಂದಿಕೆಯಾಗದ ಈ ದಟ್ಟವಾದ ಹುರಿಮೀಸೆ ಆತನ ವ್ಯಕ್ತಿತ್ವಕ್ಕೆ ಚಲನಚಿತ್ರದ ಹಾಸ್ಯ ಪಾತ್ರಧಾರಿಯ ಸ್ವರೂಪವನ್ನು ನೀಡಿತ್ತು. ಆತನನ್ನು ಸುತ್ತುವರಿದ ಆರು ಭಾರತೀಯ ಕಾವಲುಗಾರರು ಈ ಖೈದಿಯನ್ನು ನೇಣುಗಂಬಕ್ಕೆ ಅಣಿಗೊಳಿಸುತಿದ್ದರು.ಅವರಲ್ಲಿ ಇಬ್ಬರು ಬಂದೂಕುಧಾರಿಗಳು ಆ ಖೈದಿಯನ್ನು ಸುತ್ತುವರೆದಿದ್ದರೆ ಉಳಿದ ಕಾವಲುಗಾರರು ಆತನ ಎರಡೂ ಕೈಗಳನ್ನು ಹಿಂದಕ್ಕೆ ಮಡಚಿ,ಆತನ ಮುಂಗೈಗಳಿಗೆ ಕೋಳವನ್ನು ತೊಡಿಸುತ್ತಿದ್ದರು. ಆ ಆರೂ ಮಂದಿ ಬಂದೂಕುಧಾರಿ ಕಾವಲುಗಾರರು ಆ ಖೈದಿಯ ಭುಜದ ಮೇಲೆ ಬಳಸಿದಂತೆ ಕೈ ಹಾಕಿ ಆತನ ಸುತ್ತಲೂ ಘೇರಾಯಿಸುತ್ತಾ ಆತ ತಮ್ಮ ಸುಪರ್ದಿಯೊಳಗಿದ್ದಾನೆಂಬ ಭರವಸೆಯಿಂದಿದ್ದರು.ಈ ದೃಶ್ಯವು ಕೈಗೆ ಸಿಕ್ಕ ಜೀವಂತ ಮೀನು ಮರಳಿ ನೀರಿಗೆ ಹಾರದಂತೆ ಅದನ್ನು ಕಾಯುತ್ತಿರುವಂತಿತ್ತು.ಆದರೆ ಯಾವುದೇ ಪ್ರತಿರೋಧ ತೋರದೆ ಆ ಗಲ್ಲು ಶಿಕ್ಷೆಗೆ ಗುರಿಯಾದ ಖೈದಿಯು ಅತ್ಯಂತ ನಿರ್ಲಿಪ್ತನಾಗಿ,ನಿಶ್ಚಲ ಸ್ಥಿತಿಯಲ್ಲಿ ನಿಂತಿದ್ದ.ಎಂಟು ಘಂಟೆಯೆಂದು ನೆನಪಿಸುವಂತೆ ಆ ತೀವವಾದ ಗಾಳಿಯಿಂದ ಕಹಳೆಯ ಶಬ್ದವೊಂದು ತೇಲಿಬಂತು.ತನ್ನ ಮೊನಚಾದ ಬಡಿಗೆಯಿಂದ ಸಣ್ಣ ಸಣ್ಣ ಬೆಣಚು ಕಲ್ಲುಗಳೊಂದಿಗೆ ಆಟವಾಡುತ್ತಿದ್ದ ಜೈಲಿನ ಸೂಪರಿಂಡೆಂಟ್ ಆ ಸೈರನ್‌ನ ಶಬ್ದಕ್ಕೆ ತಲೆಯೆತ್ತಿದ.ಸೇನೆಯ ವೈದ್ಯನಾಗಿದ್ದ ಈ ಜೈಲಿನ ಸೂಪರಿಂಡೆಂಟ್ 'ಫ್ರಾನ್ಸಿಸ್ ಬೇಗನೇ ತಯಾರಾಗು!ಆಗಲೇ ಎಂಟು ಹೊಡೆಯಿತು. ಇಷ್ಟರಲ್ಲಾಗಲೇ ಈ ಖೈದಿಯು ಗಲ್ಲಿಗೇರಬೇಕಿತ್ತು.' ಎಂದು ಅಸಹನೆಯಿಂದ ಗೊಣಗುತ್ತಿದ್ದ.ಶ್ವೇತ ವಸ್ತವನ್ನು ಧರಿಸಿದ್ದ,ಕಪ್ಪನೆಯ ಮುಖ್ಯ ಜೈಲರ್ ಫ್ರಾನ್ಸಿಸ್ ತನ್ನ ಬಂಗಾರದ ಕನ್ನಡಕವನ್ನು ಸರಿಪಡಿಸಿಕೊಳ್ಳತ್ತ 'ಆಯ್ತು ಸರ್! ಎಲ್ಲವನ್ನೂ ಸಮಾಧಾನಕರವಾಗಿ ಅಣಿಗೊಳಿಸಲಾಗಿದೆ.ಹ್ಯಾಂಗ್‌ಮನ್ ಸಹ ತಯಾರಿದ್ದಾನೆ.ನಾವಿನ್ನು ಶುರು ಮಾಡಬಹುದು' ಎಂದು ಉತ್ತರಿಸಿದ.

'ಸರಿ ಹಾಗಾದರೆ.ಬೇಗ ನಡೆಯಿರಿ.ಗಲ್ಲಿಗೇರಿಸುವವರೆಗೂ ಉಳಿದ ಖೈದಿಗಳಿಗೆ ಬೆಳಗಿನ ಉಪಾಹಾರ ದೊರಕದು' ನಾವೆಲ್ಲರೂ ನಿಧಾನವಾಗಿ ನೇಣುಗಂಬದೆಡೆಗೆ ಹೆಜ್ಜೆ ಹಾಕತೊಡಗಿದೆವು. ಇಬ್ಬರು ಬಂದೂಕುಧಾರಿ ಕಾವಲುಗಾರರು ಆ ಖೈದಿಯ ಎರಡೂ ಕಡೆಗೆ ಸುತ್ತುವರೆದು ಎಚ್ಚರಿಕೆಯಿಂದ ಹೆಜ್ಜೆಯಿಡುತ್ತಿದ್ದರು.ನಾವೆಲ್ಲ ಇವರ ಹಿಂದೆ ಹೆಜ್ಜೆ ಹಾಕುತ್ತಿದ್ದೆವು.ಹಲವು ಮಾರು ದೂರ ಕ್ರಮಿಸುತ್ತಿದ್ದಂತೆಯೇ ಯಾವುದೇ ಆಜ್ಞೆ ಇಲ್ಲದೆ ನಮ್ಮ ಈ ಮೆರವಣಿಗೆ ಅನೀರೀಕ್ಷಿತವಾಗಿ ಸ್ಥಗಿತಗೊಂಡಿತು.ನಾವೆಲ್ಲ ನೋಡುತ್ತಿದ್ದಂತೆಯೇ ನಾಯಿಯೊಂದು ಬೊಗಳುತ್ತ ನಮ್ಮ ಮುಂದೆ ಪ್ರತ್ಯಕ್ಷವಾಯಿತು.ಇಷ್ಟೊಂದು ಜನರನ್ನು ಒಟ್ಟಿಗೆ ನೋಡಿ ಕ್ರೂರವಾಗಿ ದಿಟ್ಟಿಸುತ್ತ ನಮ್ಮ ಸುತ್ತಲೂ ಅಸಹನೆಯಿಂದ ಕುಪ್ಪಳಿಸತೊಡಗಿತು.ಕೆರಳಿದಂತಿದ್ದ ಈ ಕಂತ್ರಿ ನಾಯಿಯು ನಮ್ಮೆಲ್ಲರ ಊಹೆಗೂ ಮೀರಿ ಕೋಳಗಳಿಂದ ಬಂಧಿತನಾಗಿದ್ದ ಖೈದಿಯ ಮೇಲೆರೆಗಿ ಆತನ ಮುಖವನ್ನು ನೆಕ್ಕತೊಡಗಿತು.ಧಿಗ್ಭ್ರಮೆಗೊಂಡ ನಾವೆಲ್ಲ ನಿಶ್ಚಲರಾಗಿ ನಿಂತಿದ್ದೆವು.

ಜೈಲಿನ ಸೂಪರಿಂಟೆಂಟ್ ಸಿಟ್ಟಿನಿಂದ ಕೂಗಾಡತೊಡಗಿದ.ಬಂದೂಕುಧಾರಿ ಕಾವಲುಗಾರನೊಬ್ಬ ಬೆಣಚು ಕಲ್ಲುಗಳನ್ನು ತೂರುತ್ತ ಕಂತ್ರಿ ನಾಯಿಯನ್ನು ಅಲ್ಲಿಂದ ಓಡಿಸಲು ಯತ್ನಿಸುತ್ತಿದ್ದ.ಇಡೀ ಸನ್ನಿವೇಶವನ್ನು ಈ ಕಂತ್ರಿ ನಾಯಿಯು ತನ್ನೆಡೆಗೆ ಸೆಳೆದುಕೊಂಡು ಕೆಲಕಾಲ ಅಸಂಗತತೆಯನ್ನು ಸೃಷ್ಟಿಸಿತ್ತು. ಆದರೆ ಇಡೀ ಸನ್ನಿವೇಶದ ಕೇಂದ್ರವಾಗಿದ್ದ ಖೈದಿ ಮಾತ್ರ ಇದಾವುದರಿಂದಲೂ ವಿಚಲಿತನಾಗದೆ ನಿರ್ವಿಕಾರದಿಂದಿದ್ದ.ಬಹುಶಃ ಈ ಘಟನೆಯೂ ಸಹ ಗಲ್ಲಿಗೇರಿಸುವ ಪ್ರಕ್ರಿಯೆಯ ಭಾಗವೆಂದು ಆತನಿಗೆ ಅನಿಸಿರಬಹುದೇನೊ.ಕಡೆಗೆ ಆ ಕಂತ್ರಿ ನಾಯಿಯ ಕೊರಳ ಪಟ್ಟಿಗೆ ಕಾಲರನ್ನೊಂದು ಬಿಗಿದು ಜೊತೆಗೆ ಎಳೆದೊಯ್ಯಲಾಯಿತು.



ಇಷ್ಟಾದರೂ ಆ ಕಂತ್ರಿ ನಾಯಿಯು ಗುರುಗುಟ್ಟುತ್ತ,ನೆಗೆಯುತ್ತಾ ಕುಣಿಯುತಲೇ ಇತ್ತು. ನೇಣುಗಂಬ ಸುಮಾರು ನಲವತ್ತು ಮಾರು ದೂರದಲ್ಲಿತ್ತು. ಈ ಮೆರವಣಿಗೆಯನ್ನು ಹಿಂಬಾಲಿಸುತ್ತಿದ್ದ ನಾನು ನನ್ನ ಮುಂದೆ ನಡೆಯುತ್ತಿದ್ದ ಖೈದಿಯನ್ನು ಸೂಕ್ಷ್ಮವಾಗಿ ಗಮನಿಸಿದೆ. ತನ್ನ ಮೋಟುಗೈಯೊಂದಿಗೆ ಅಡ್ಡಾದಿಡ್ಡಿಯಾಗಿ ನಡೆಯುತ್ತಿದ್ದರೂ ಆತನ ಹೆಜ್ಜೆಯಲ್ಲಿ ಸ್ಥಿರತೆ ಇತ್ತು.ಮೊಣಕಾಲುಗಳು ಬಾಗಿದ್ದರೂ ಪ್ರತಿ ಹೆಜ್ಜೆಯನ್ನು ಎಚ್ಚರಿಕೆಯಿಂದ ಇಡುತ್ತಿದ್ದ.ನಡೆಯುವ ದಾರಿಯಲ್ಲಿ ಕೆಸರಿನ ಗುಂಡಿಗಳು,ಉಬ್ಬು ಬಂಡೆಗಳು ಎದುರಾದಾಗ ತನ್ನನ್ನು ಸುತ್ತುವರೆದಿದ್ದ ಬಂದೂಕಧಾರಿಗಳ ನಡುವೆಯೂ ಆ ಕೆಸರಿನ ಗುಂಡಿಗಳಲ್ಲಿ ಕಾಲಿಡದಂತೆ,ಉಬ್ಬು ಬಂಡೆಗಳನ್ನು ಎಡವದಂತೆ ಪಕ್ಕಕ್ಕೆ ಸರಿದು ನಾಜೂಕಾಗಿ ಮುನ್ನಡೆಯುತ್ತಿದ್ದ.ನಾನು ದಿಗ್ಭ್ರಮೆಗೊಂಡಿದ್ದೆ.ನೇಣುಗಂಬಕ್ಕೇರುತ್ತಿರುವ ವ್ಯಕ್ತಿ ತನ್ನ ಪಾದಗಳಿಗೆ ಕೆಸರು ಅಂಟಬಾರದೆಂದು, ಬಂಡೆಗಳನ್ನು ಎಡವಬಾರದೆಂದು ಎಚ್ಚರಿಕೆ ವಹಿಸುವ ದೃಶ್ಯವನ್ನು ಕಣ್ಣಾರೆ ಕಂಡಾಗ ಜೀವನವನ್ನು ತುಂಬಿಕೊಂಡಿರುವ ವ್ಯಕ್ತಿಯೊಬ್ಬನ ಜೀವವನ್ನು ಮೊಟುಕುಗೊಳಿಸುವ ನಮ್ಮ ಕೃತ್ಯದಲ್ಲಿ ಬಲು ದೊಡ್ಡ ದೋಷವಿದೆಯೆಂದು ನನ್ನ ಅಂತರಾತ್ಮ ಕೂಗುತ್ತಿತ್ತು.ಆ ಖೈದಿಯ ಕಣ್ಣುಗಳು ಬೆಣಚು ಕಲ್ಲುಗಳನ್ನು,ಕಂದು

ಗೋಡೆಗಳನ್ನು ಗಮನಿಸುತ್ತಿದ್ದವು.ಆತನ ಮಿದುಳು ಕೆಸರಿನ ಗುಂಡಿಗಳನ್ನು ಕುರಿತಾಗಿ ಎಚ್ಚರಿಸುತಿತ್ತು.ಆತ ಮತ್ತು ನಾವೆಲ್ಲ ಒಟ್ಟಾಗಿ ಒಂದೇ ಜಗತ್ತಿನಲ್ಲಿ ನಡೆಯುತ್ತಿದ್ದೆವು,ಕೇಳುತ್ತಿದ್ದೆವು,ಗ್ರಹಿಸುತ್ತಿದ್ದೆವು. ಆದರೆ ಮುಂದಿನ ಕೆಲವು ನಿಮಿಷಗಳಲ್ಲಿ,ಒಂದೇ ಒಂದು ಕ್ಲಿಕ್ಕಿನಲ್ಲಿ ಒಂದು ಜೀವ ಕಡಿಮೆಯಾಗುತ್ತದೆ,ಒಂದು ಜಗತ್ತು ಕಡಿಮೆಯಾಗುತ್ತದೆ

ಒಂದು ಸಣ್ಣ ಬಯಲಿನಲ್ಲಿ ನೇಣುಗಂಬವು ಪ್ರತ್ಯೇಕವಾಗಿ ನೆಲೆ ನಿಂತಿತ್ತು.ಮೇಲಿನ ಎರಡು ಉಕ್ಕಿನ ಕಂಬಗಳ ನಡುವೆ ಹಗ್ಗದ ಕುಣಿ-ಕೆಯೊಂದು ನೇತಾಡುತಿತ್ತು. ನೇಣುಗಂಬದ ಬಳಿ ಕಾಯುತ್ತಿದ್ದ ಬಿಳಿಯ ಸಮವಸ್ತ್ರದಲ್ಲಿರುವ ಹ್ಯಾಂಗ್‌ಮನ್ ದಾಸ್ಯದ ವಿನಯದ ಮೂಲಕ ನಮ್ಮನ್ನು ಸ್ವಾಗತಿಸಿದ.ಜೈಲರ್ ಫ್ರಾನ್ಸಿಸ್‌ನ ಆದೇಶದಂತೆ ಬಂದೂಕುಧಾರಿ ಕಾವಲುಗಾರರು ಖೈದಿಯನ್ನು ಅಡ್ಡಾದಿಡ್ಡಿಯಾಗಿ ಮೇಲೆತ್ತಿ ನೇಣುಗಂಬದ ಬಳಿ ನಿಲ್ಲಿಸಿದರು.ನಂತರ ಹ್ಯಾಂಗ್‌ಮನ್ ಮೇಲೇರಿ ನೇಣಿನ ಕುಣಿಕೆಯನ್ನು ಖೈದಿಯ ಕೊರಳ ಸುತ್ತ ಬಿಗಿಗೊಳಸಿದ.

ನಾವು ಕೆಲ ಮಾರುಗಳ ದೂರದಲ್ಲಿ ನಿಂತು ಕಾಯುತ್ತಿದ್ದೆವು.ಬಂದೂಕುಧಾರಿ ಕಾವಲುಗಾರರು ನೇಣುಗಂಬದ ಸುತ್ತ ಒಂದು ವೃತ್ತವಾಗಿ ಸುತ್ತುವರೆದರು.ಕುಣಿಕೆಯು ತನ್ನ ಕೊರಳಿನ ಸುತ್ತ ಬಿಗಿಗೊಳ್ಳತೊಡಗಿದಾಗ ಖೈದಿಯು "ರಾಮ!ರಾಮ!ರಾಮ!"ಎಂದು ಎತ್ತರದ ಧ್ವನಿಯಲ್ಲಿ ನಿರಂತರವಾಗಿ ರೋಧಿಸಲಾರಂಬಿಸಿದ. ಆದರೆ ಧ್ವನಿಯಲ್ಲಿ, ರೋಧನೆಯಲ್ಲಿ ಭಯವಿರಲಿಲ್ಲ.ಸಹಾಯಕ್ಕಾಗಿ ಮೊರೆತವಿರಲಿಲ್ಲ. ಬದಲಾಗಿ ಒಂದು ಬಗೆಯ ಗಂಟೆಯ ನಾದದಂತಿತ್ತು. ಧ್ವನಿಯಲ್ಲಿ ಲಯಬದ್ಧತೆಯಿತ್ತು.ಈ ಧ್ವನಿಗೆ ಹತ್ತಿರದಲ್ಲಿದ್ದ ನಾಯಿಯು ಊಳಿಡುವಿಕೆಯ ಮೂಲಕ ಪ್ರತ್ಯುತ್ತರಿಸುತಿತ್ತು.ನೇಣುಗಂಬದ ಬಳಿ ನಿಂತಿದ್ದ ಹ್ಯಾಂಗ್‌ಮನ್ ಕಪ್ಪನೆಯ ಮುಸುಗನ್ನು ಹೊರತೆಗೆದು ಖೈದಿಯ ಮುಖದ ಮೇಲೆ ಹೊದಿಸಿದ.ಆ ಮುಸುಗನ್ನು ತೂರಿ-ಕೊಂಡು "ರಾಮ!ರಾಮ!ರಾಮ!" ಶಬ್ದವು ಕೇಳಿಸುತ್ತಿತ್ತು.

ಹ್ಯಾಂಗ್‌ಮಾನ್ ನೇಣುಗಂಬದಿಂದ ಕೆಳಗಿಳಿದು ಬಂದು ಮೀಟುಗೋಲನ್ನು ಧೃಡವಾಗಿ ಬಳಸಿ ನಿಂತುಕೊಂಡ.ಖೈದಿಯಿಂದ ಎಲ್ಲಿಯೂ ತೊದಲದೆ ರೋದನೆ ಮುಂದುವರೆದಿತ್ತು.ಸೂಪರಿಂಡೆಂಟ್ ತನ್ನ ಬಡಿಗೆಯನ್ನು ನೆಲಕ್ಕೆ ತಟ್ಟುತ್ತ ಖೈದಿಯ ರೋದನವನ್ನು ಎಣಿಸುತ್ತಿದ್ದ.ಒಂದು,ಎರಡು.. ಬಹುಶಃ ನೂರರವರೆಗೆ.ಅಲ್ಲಿರುವ ಪ್ರತಿಯೊಬ್ಬರ ಬಣ್ಣ ಬದಲಾಗುತ್ತಿತ್ತು.

ನಮ್ಮೆಲ್ಲರ ಮನಸಿನಲ್ಲಿ ತಲ್ಲಣಗಳುಂಟಾತೊಡಗಿತು 'ದಯವಿಟ್ಟು ಮುಗಿಸಿಬಿಡಿ!ಕೊನೆಗೊಳಸಿ ಜಿಗುಪ್ಸೆ ಹುಟ್ಟಿಸುವ ಈ ರೋದನೆಯನ್ನು'!

ಹಠಾತ್ತಾಗಿ ಸೂಪರಿಂಟೆಂಡೆಂಟ್ ತಲೆಯೆತ್ತಿ ತನ್ನ ಬಡಿಗೆಯನ್ನು ಗಾಳಿಯಲ್ಲಿ ಆಡಿಸುತ್ತ " ನಡೆಯಿರಿ " ಎಂದು ಆವೇಶದಿಂದ ಅಬ್ಬರಿಸಿದ. ಅಗ ಝುಣಗುಟ್ಟುವ ಮೌನ,ನಂತರ ನೀರವ ಮೌನ. ಖೈದಿಯು ಅಸ್ತಂಗತನಾಗಿದ್ದ,ಮತ್ತು ನೇಣಿನ ಕುಣಿಕೆಯು ಅಲ್ಲಿಯೇ ತಿರುಗುತ್ತಿತ್ತು.ನಾನು ನಾಯಿಯನ್ನು ಕಳಚಿದೆ.ಆಗ ಕೂಡಲೆ ನಾಯಿಯು ನಾಗಲೋಟದಿಂದ ನೇಣುಗಂಬದ ಹಿಂದಕ್ಕೆ ಓಡಿತು. ಅಲ್ಲಿ ನಿಂತು ಬೊಗಳಲಾರಂಬಿಸಿತು.ನಂತರ ಬಯಲಿನ ಮೂಲೆಗೆ ಹಿಮ್ಮೆಟ್ಟಿತು.ಅಲ್ಲಿನ ಕಸದ ನಡುವೆ ನಿಂತು ನಮ್ಮೆಡೆಗೆ ಭಯಭೀತನಾಗಿ ದೃಷ್ಟಿಸತೊಡಗಿತು.ನಾವೆಲ್ಲ ನೇಣುಗಂಬದ ಸುತ್ತ ಚಲಿಸುತ್ತ ಖೈದಿಯ ದೇಹವನ್ನು ಪರೀಕ್ಷಿಸತೊಡಗಿದೆವು.ಆ ಖೈದಿಯು ಬಂಡೆಗಲ್ಲಿನಂತೆ ನಿಧಾನವಾಗಿ ತಿರುಗುತ್ತಾ,ತನ್ನ ಕಾಲಬೆರಳನ್ನು ಕೆಳಮುಖವಾಗಿ ಗುರಿಯಿಡುತ್ತಾ ನೇತಾಡುತ್ತಿದ್ದ.

ಸೂಪರಿಂಡೆಂಟ್ ತನ್ನ ಬಡಗಿಯೊಂದಿಗೆ ನೇತಾಡುತ್ತಿದ್ದ ದೇಹದ ಬಳಿಗೆ ಸಾಗಿ "ಆತ ಸರಿಯಾಗಿದ್ದಾನೆ" ಎಂದು ಉದ್ಗರಿಸಿ ನೇಣುಗಂಬದಿಂದ ಮರಳಿ ಹಿಂದಕ್ಕೆ ಬಂದು ನೀಳವಾಗಿ ಉಸಿರೆಳೆದುಕೊಂಡ'. ಹಠಾತ್ತಾಗಿ ಆತನ ಮುಖದಿಂದ ವ್ಯಾಕುಲತೆ ಮರೆಯಾಯಿತು.ತನ್ನ ಕೈಗಡಿಯಾರವನ್ನು ನೋಡುತ್ತಾ ಗೊಣಗಿದ " ಎಂಟು ನಿಮಿಷ ತಡವಾಯ್ತು.ಬೆಳಗಿನ ಜಾವಕ್ಕೆ ಇಷ್ಟು ಸಾಕು"

ಕಾವಲುಗಾರರು ಬಂದೂಕುಗಳನ್ನು ಕಳಚಿಟ್ಟು ಅಲ್ಲಿಂದ ಹೊರನಡೆದರು.ತಾನು ದುರ್ವತನೆಯಿಂದ ನಡೆದುಕೊಂಡೆ ಎನ್ನುವ ಪಾಪಪ್ರಜ್ಞೆಯಿಂದ ಕಂತ್ರಿ ನಾಯಿಯು ಅವರನ್ನು ಹಿಂಬಾಲಿಸಿತು.

ನಾವು ನೇಣುಗಂಬದ ಬಯಲಿನ ಜಾಗದಿಂದ ಹೊರನಡೆದು,ಕಾರಗೃಹದ ಸೆಲ್‌ಗಳನ್ನು ಮತ್ತು ಅದರೊಳಗೆ ಕಾಯುತ್ತಿರುವ ಖೈದಿಗಳನ್ನು ದಾಟಿಕೊಂಡು ಜೈಲಿನ ಮಧ್ಯಭಾಗಕ್ಕೆ ಬಂದು ತಲುಪಿದೆವು.ಅಷ್ಟರಲ್ಲಾಗಲೇ ಅಪರಾಧಿಗಳು ಕಾವಲುಗಾರರ ನಿರ್ದೇಶನದಡಿಯಲ್ಲಿ ತಮ್ಮ ಬೆಳಗಿನ ಉಪಹಾರವನ್ನು ಸೇವಿಸುತ್ತಿದ್ದರು. ಅವರ ಅಲ್ಯುಮೀನಿಯಂ ತಟ್ಟೆಗಳಿಗೆ ಅನ್ನ ಮತ್ತು ಸಾಂಬಾರನ್ನು ಬಡಿಸುತ್ತಿದ್ದರು.ಗಲ್ಲುಶಿಕ್ಷೆಯ ನಂತರ ಅಲ್ಲಿ ಒಂದು ಬಗೆಯ ಲವಲವಿಕೆಯ, ಮನೆಯ ವಾತಾವರಣ ನಿರ್ಮಾಣಗೊಂಡಿತು. ಕೆಲಸವನ್ನು ಮುಗಿಸಿದ ನಿರಾಳತೆಯ ಭಾವವನ್ನು ಪ್ರತಿಯೊಬ್ಬರ ಮುಖದಲ್ಲೂ ನೋಡಬಹುದಾಗಿತ್ತು.

ಅಲ್ಲಿ ನನ್ನ ಬಳಿ ಸುಳಿದಾಡುತ್ತಿದ್ದ ಹುಡುಗನೊಬ್ಬ ಮುಗುಳ್ನಗುತ್ತಾ" ತನ್ನ ಕ್ಷಮಾದಾನದ ಅಪೀಲನ್ನು ವಜಾಗೊಳಿಸಿದ ಸುದ್ದಿಯನ್ನು ಕೇಳಿ ಅವನು (ನೇಣುಗಂಬಕ್ಕೇರಿದ ವ್ಯಕ್ತಿ) ತನ್ನ ಸೆಲ್ ಒಳಗೆ ಉಚ್ಚೆ ಹೊಯ್ದುಕೊಂಡದ್ದು ನಿಮಗೆ ಗೊತ್ತೆ ಸರ್.ದಯವಿಟ್ಟು ಈ ಸಿಗರೇಟನ್ನು ತೆಗೆದುಕೊಳ್ಳಿ.ಇದು ಯುರೋಪಿಯನ್ ಕ್ಲಾಸ್‌ದು ಸರ್. ಕೇವಲ ಎರಡು ರೂಪಾಯಿ ಮಾತ್ರ" ಎಂದು ಗೋಗರೆಯತೆ-ೂಡಗಿದ್ದ.ಆಗ ಎಲ್ಲರೂ ನಕ್ಕರು,ಯಾತಕ್ಕೆಂದು ಗೊತ್ತಿಲ್ಲದೆ.

ಸೂಪರಿಂಟೆಂಡೆಂಟ್ ಜೊತೆಗೆ ನಡೆಯುತ್ತ ಜೈಲರ್ ಪ್ರಾನ್ಸಿಸ್ ತೀವ್ರ ವಾಚಾಳಿತನದಿಂದ ಹೇಳುತ್ತಿದ್ದ ' ಎಲ್ಲವೂ ಸುಸೂತ್ರವಾಗಿ ನಡೆಯಿತು ಸರ್!ಇದು ಸರಳವಾಗಿ ಮುಗಿದುಹೋದ ಕಥೆ.ಕೆಲವೊಮ್ಮೆ ಏನಾಗುತ್ತಿತ್ತು ಗೊತ್ತೇ?ವೈದ್ಯನಾದವನು ನೇಣುಗಂಬದ ಕೆಳಕ್ಕೆ ತೆರಳಿ ನೇತಾಡುತ್ತಿದ್ದ ಖೈದಿಯ ಕಾಲುಗಳನ್ನು ಎಳೆದೆಳೆದು ಸತ್ತಿದ್ದಾನೆಂದು ಖಾತರಿಪಡಿಸಿಕೊಳ್ಳಬೇಕಾಗುತ್ತಿತ್ತು.ಇದು ಬಹಳ ರೇಜಿಗೆ ಹುಟ್ಟಿಸುತಿತ್ತು ಸರ್'. 'ನಿಜಕ್ಕೂ ಹಾಗೆಯೇ ? ಹಾಗಿದ್ದರೆ ಇದು ಬಹಳ ಕೆಡುಕಾದದ್ದು' ಎಂದು ಸೂಪರಿಂಟೆಂಡೆಂಟ್ ಉತ್ತರಿಸಿದ.

'ಹಿಂದೊಮ್ಮೆ ಏನಾಯಿತೆಂದರೆ ನೇಣುಗಂಬಕ್ಕೇರಬೇಕಾಗಿದ್ದ ಖೈದಿಯೊಬ್ಬ ತನ್ನ ಸೆಲ್‌ನ ಸರಳುಗಳನ್ನು ಬಿಗಿಯಾಗಿ ಹಿಡಿದು-ಕೊಂಡಿದ್ದ.ಅದರಿಂದ ಅವನನ್ನು ಬಿಡಿಸಲು ಆರು ಕಾವಲುಗಾರರು ಬೆವರಿಳಿಸಬೇಕಾಯಿತು.ನಾವು 'ಸ್ನೇಹಿತನೇ ನಿನ್ನ ಈ ವರ್ತನೆಯಿಂದ ನಮಗೆಲ್ಲ ಕೊಡುತ್ತಿರುವ ತೊಂದರೆಗಳನ್ನು ನೀನು ಅರ್ಥ ಮಾಡಿಕೊಳ್ಳಬೇಕೆಂದು' ಆ ಖೈದಿಗೆ ಹೇಳಿದೆವು. ಆದರೆ ಆತ ನಮ್ಮ ಮಾತನ್ನೇ ಕೇಳುವ ಸ್ಥಿತಿಯಲ್ಲಿರಲಿಲ್ಲ'

ನಾನು ಗಹಗಹಿಸಿ ನಗುತ್ತಿರುವುದು ನನ್ನ ಗಮನಕ್ಕೆ ಬಂತು. ಎಲ್ಲರೂ ನಗುತ್ತಿದ್ದರು. ಸೂಪರಿಂಟೆಂಡೆಂಟ್ ' ನನ್ನ ಬಳಿ ವಿದೇಶಿ ಮದ್ಯವಿದೆ.ಬನ್ನಿ ' ಎಂದು ಕರೆಯುತ್ತಿದ್ದ.

ನಾವೆಲ್ಲ ಕಾರಾಗೃಹದ ಹೆಬ್ಬಾಗಿಲನ್ನು ದಾಟಿಕೊಂಡು ಹೊರಗಿನ ಬಯಲಿಗೆ ಬರುತ್ತಿರುವಾಗ "ನೇತಾಡುತ್ತಿರುವ ಅವನ ಕಾಲುಗಳನ್ನು ಎಳೆದು" ಎಂದು ಉದ್ಗರಿಸುತ್ತ ಬರ್ಮಾದ ಮಾಜಿಸ್ಟ್ರೇಟ್ ಗಹಗಹಿಸಿ ನಗತೊಡಗಿದ.ನಾವೆಲ್ಲ ನಗತೊಡಗಿದೆವು.ಆ ಸಮಯದಲ್ಲಿ ಜೈಲರ್ ಫ್ರಾನ್ಸಿಸ್ ನೀಡಿದ ವಿವರ ನಿಜಕ್ಕೂ ತಮಾಶೆಯಾಗಿತ್ತು.ನಾವೆಲ್ಲ ನಗುತ್ತ,ನಲಿಯುತ್ತ ಕುಡಿಯುತ್ತಿದ್ದೆವು.ನೂರು ಮಾರು ದೂರದಲ್ಲಿ ಸತ್ತ ವ್ಯಕ್ತಿ ನೇತಾಡುತ್ತಿದ್ದ.

(1931ರಲ್ಲಿ "ಜಾರ್ಜ ಅರ್ವೆಲ್" ಬರ್ಮಾ ಜೈಲಿನಲ್ಲಿ ಕ್ಲರ್ಕ ಆಗಿದ್ದಾಗ ನಡೆದ ಘಟನಯನ್ನಾಧರಿಸಿ ಬರೆದದ್ದು.)

ಕ್ಯಾಮಾರಾವೇ ಸಿನಿಮಾ ಮಾಡುವಂತಿದ್ದರೇ...

■ ಶಾಂತರಾಜು

ಯಾಂತ್ರಿಕವಾದ ನಿರ್ಜೀವ ಚಿತ್ರಗಳನ್ನು ಬಚ್ಚಿಟ್ಟುಕೊಂಡು, ನಮ್ಮಂತೆ ಜೀವವಿರುವಂತೆ ಕತಲೆಯಲ್ಲಿ ತೋರಿಸುವ, ತೋರಿಸಿ ಅಳಿಸುವ-ನಗಿಸುವ-ಪ್ರಚೋದಿಸುವ ಮಾಯಾವಿ ಕ್ಯಾಮಾರಾವೇ ಸಿನಿಮಾ ಮಾಡುವಂತಿದ್ದರೇ...? ಬಹುಶಃ ಈ ಕಾಲಘಟ್ಟದ ಅನೇಕ ನಿರ್ದೇಶಕರು 'ಜಾಬ್‌ಲೆಸ್' ಆಗಿರಬೇಕಿತ್ತೇನೊ...? ಈ ಬಯಕೆಯ ಚಿಂತನೆ ಇಷ್ಟೆ; ತಂತ್ರಜ್ಞಾನವೊಂದು ಹೊಸ ಆಯ್ಕೆ ಅಥವಾ ಸಮಾಜದ ಕೋರೆಗಳನ್ನು ತಿದ್ದುವ ಬದಲು ಮೌಢ್ಯದ ಪರಮಾವಧಿಗೆ ಹೊತ್ತೊಯ್ಯುತಿರುವ ಸಾಧನವಾಗುತ್ತಿರುವುದರಿಂದ. ಸಿನಿಮಾವೊಂದು ಮನುಕುಲದ ಮುನ್ನಡಿಗೆ ಹೊಸ ಭಾಷ್ಯ ಕೊಡುವ ಸಾಧ್ಯತೆಗಿಳಿದ್ದಾಗ್ಯೂ, ಕೇವಲ ಭ್ರಮಾತ್ಮಕ ರಂಜನೆ ಮುಖ್ಯವಾಗಿಸುವ ಸಮೂಹ ಸನ್ನಿಯ ಯಂತ್ರಿಚಾಲಿತ ಕ್ರಿಯೆಯಾಗಿಬಿಟ್ಟಿದೆಯೇನೋ ಎಂದೆನಿಸುತ್ತದೆ.

ಸಿನಿಮಾ ಕೇವಲ ಒಂದು ವ್ಯಕ್ತಿಯ ಅವಶ್ಯಕತೆಯೂ ಅಲ್ಲ. ಒಬ್ಬ ಬರಹಗಾರ ಅಥವಾ ನಿರ್ದೇಶಕನ ಕೈಚಳಕವೂ ಅಲ್ಲ. ಒಂದೇ ವ್ಯಕ್ತಿಯ ಅಭಿವ್ಯಕ್ತಿ, ಬರವಣಿಗೆ ಅಥವಾ ಚಿತ್ರಕಲೆಯಲ್ಲಿ ಸಾಧ್ಯವಾಗಬಲ್ಲದು. ಆದರೆ ಸಿನಿಮಾ ಒಂದು ಗುಂಪಿನ ಆಂತರ್ಯದ ಅಭಿವ್ಯಕ್ತಿಯ ಮೂರ್ತ ರೂಪದ ಫಲ; ದೃಶ್ಯಬರಹ. ಬರಹಗಾರನಿಂದಿಡಿದು, ಲೈಟ್‌ಮ್ಯಾನ್‌ನವರೆಗೆ ಎಲ್ಲರೂ ಮುಖ್ಯವೇ. ಚಿತ್ರಮುದ್ರಿತದ ಯಂತ್ರಗಳಾದ ಕ್ಯಾಮಾರ ಮತ್ತು ಪ್ರತಿಫಲಿಸುವ ಪ್ರೊಜೆಕ್ಟರ್‌ಗಳು ನಾನಾ ಅವತಾರಗಳನ್ನು ಎತ್ತುತ್ತಲೇ ಹೊಸ ಆವಿಷ್ಕಾರಗಳೆಲ್ಲದರ ಏಟಿಗೆ ಸಿಕ್ಕಿ, ಒಮ್ಮೆ ನಜ್ಜುಗುಜ್ಜಾಗಿ ಕೆಲವೊಮ್ಮೆ ಜೀರೋ ಸೈಜಿಗಿಳಿದು, ಟಚ್‌ಸ್ಕ್ರೀನ್ ಸಂಚಾರಿ ದೂರವಾಣಿಯಲ್ಲಿ ಮಿಂದಿ ಜಂಗಮವಾಗಿಬಿಟ್ಟಿವೆ. ಆದರೆ ಸಿನಿಮಾದ ಬೌದ್ಧಿಕ ಪರಧಿ ಮಾತ್ರ ಇನ್ನೂ ಕುಗ್ಗುತ್ತಲೇ ಹೋಗುತ್ತಿದೆ ಎಂಬುದು ಅಷ್ಟೇ ಅವಮಾನಿತ ವಿಷಯ. ಕೇವಲ ಸಂಭಾಷಣೆಯಿಂದ ಅಥವಾ ದೃಶ್ಯ ವೈಭವದಿಂದ ಸಿನಿಮಾ ಮಾಡಲು ಸಾಧ್ಯ ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ. ಆದರೆ ಇವೆಲ್ಲವನ್ನೂ ಸಿನಿಮಾ ಎನ್ನಲಾಗುವುದಿಲ್ಲ. ಸಂಭಾಷಣೆಯೇ ಮುಖ್ಯವಾದರೆ, ಅದು ಆಡಿಯೋ ಸಿಡಿ ಮಾಡಲು ಸೂಕ್ತವಾದ ವಸ್ತುವಾಗಬಹುದು. ಹಾಡುಗಳು ಸುಮಧುರವಾಗಿದ್ದರೆ, ಅದು ಮ್ಯೂಜಿಕ್ ಆಲ್ಬಮ್ ಮಾಡಲು ಸೂಕ್ತ. ಇದಕ್ಕೆ ಭಿನ್ನವಾಗಿ ಅನೇಕ ಪ್ರಯೋಗಗಳಾಗುತ್ತಿವೆ. ಅವುಗಳನ್ನು ಗ್ರಹಿಸುವುದು ಮುಖ್ಯವಾದಗಲೇ, ಕೆಲವೊಂದು ಹೊಸತನ, ಹೊಸ ಚಿಗುರು, ಭರವಸೆ, ಹೊಸ ವರಸೆ, ಒಮ್ಮೊಮ್ಮೆ ಹೊಸ ತಿಕ್ಕಲುತನಗಳನ್ನು ಜೀರ್ಣಿಸಿಕೊಂಡು, ನವ ತಲೆಮಾರಿನೊಂದಿಗೆ ಸಂವಹಿಸಲು ಸಾಧ್ಯ ಜೊತೆಗೆ ನಮ್ಮ ಅಕ್ಕಪಕ್ಕದವರ ಸಾಧನೆಯನ್ನು ಗಮನಿಸಿಸುವುದು ಅಷ್ಟೇ ಮುಖ್ಯ.

ಜಾಗತಿಕ ಸಿನಿಮಾಕ್ಕೊಂದು ಆಯಾಮ ದೊರೆತೇ ಬಿಟ್ಟಿತೆಂಬ ಹೊತ್ತಿನ ಮುನ್ನ ಘಳಿಗೆ, ಸ್ಟಾಲಿನ್‌ನ ಕೈಯಿಂದ ಹತ್ಯೆಗೊಳಗಾದದ್ದು ಒಂದು ಐತಿಹಾಸಿಕ ದುರಂತವಾದರೆ, ಸಿನಿಮಾದ ಅಸ್ಥಿಪಂಜರವನ್ನು ಹಿಡಿದು, ದೇಹವನ್ನು ತನಗೆ ಬೇಕಾದಂತೆ ಸರ್ಜರಿ ಮಾಡಿ ಪಸರಿಸಿದ್ದು ಹಾಲಿವುಡ್. ಹೀಗೆ ಸಿನಿಮಾ, ಬಲುಬೇಗ ಜಗತ್ತಿನ ಅಘೋಷಿತ ದೊರೆಯ ಸಿನಿಮಾ ತೊಟ್ಟಿಲೆಂಬ ಹಾಲಿವುಡ್‌ನ ಮಾಣಿಕ್ಯವೀರರಿಂದ ಶುರುವಾಗಿ, ಇಂದಿನ ನಮ್ಮ ಪಕ್ಕದಳ್ಳಿಯ ಪುಡಾರಿ ಪೋಕರಿ ರಿಯಲ್ ಎಸ್ಟೇಟ್ ಕುಳದವರವರೆಗೂ ಸಿಕ್ಕಿ ಎಲ್ಲರಾಯ್ದೆಯ ಬೀದಿ ಸೂಳೆಯಾದಳೆ ಹೊರೆತು, ಅವಳ ಮನಸನ್ನು ಮುಟ್ಟಿ ತಟ್ಟಿದವರಾರು ಇಲ್ಲವೇನೋ ಎಂದೆನಿಸುತ್ತದೆ. ವೇಶ್ಯೆಯೊಬ್ಬಳಿಗೂ ಅನೇಕ ಕನಸು-ಕಸುವುಗಳಿವೆಯೆಂಬ ಮಾತೇ ಅನೇಕರಿಗೆ ಅಪಥ್ಯದ ವಿಷಯವಾಗಿದ್ದರೂ, ಕೆಲ ಉತ್ಸಾಹಿ, ಪ್ರಯೋಗಶೀಲ ಸಿನಿಮಾಕರ್ತರಿಂದ ನವಸಾಧ್ಯತೆಗಳ ಮಾಯಕನ್ನಡಿಯಾಗಿರುವುದು, ಬತ್ತದೊರತೆಯ ಸಿಹಿ ಮೂಲದ ನಂಬುಗೆ. ಪ್ರಸ್ತುತ ಭಾರತೀಯ ಸಂದರ್ಭದಲ್ಲಿ, ತಮಿಳು ಸಿನಿಮಾ ಜಗತ್ತು ಇಂಥಹವರ ಮೊದಲ ಸಾಲೆಂದರೆ ಎಳ್ಳಷ್ಟೂ ತಪ್ಪು ಹುಡುಕುವವರೂ ಕಡಿಮೆ ಎನ್ನಬಹುದು.

ಇಡೀ ದೇಶವೇ, ಒಂದು ಹಂತಕ್ಕೆ ಜಗತ್ತೇ ಬೆರಗಾಗಿ ನೋಡುತ್ತಿರುವ ಪ್ರಯೋಗಗಳನ್ನು ತಬ್ಬಿ ಇಬ್ಬಳಿಗೆಯಲ್ಲಿ ಅಳೆದಳೆದು, ಮೊಗೆಮೊಗೆದು ಕೊಡುತ್ತಿರುವುದು ತಮಿಳು ಸಿನಿಮಾ ಜಗತ್ತು. ಪರನೆಲದ ನೂರ್-ಕೋಟಿಯ ಪಲ್ಲಕ್ಕಿಗಿಂತ, ಅದರ 'ಅವತಾರ'ವೊಂದಕ್ಕಿಂತ, ತನ್ನದೇ ನೆಲದ ಮಣ್ಣಿನ ಘಮಲ ಇನ್ನೂ ಹಳಸದೇ ಹಾಗೇ ಇರುವುದನ್ನೂ ಹಿಡಿದಿಡಿದು ಮೂಗಿಗೆ ರಾಚುವಂತೆ ತೋರಿಸಿ, ಈ ನೆಲದ ಅಸಂಖ್ಯ ಸಾಧ್ಯತೆಗಳ ಕೂಸಾಗಿ ಬೆಳದಿರುವ ಹೊಸ ಫಸಲನ್ನು ನೋಡಲು ಅದಾರಿಗೆ ಖುಷಿಯಾಗದು?

ಸಸಿಕುಮಾರ್(ಸುಬ್ರಮಣ್ಯಪುರಂ), ಪಾಂಡಿರಾಜ್(ವಂಶಮ್, ಮರಿನಾ), ಬಾಲಾಜಿ ಸಕ್ತಿವೇಲು(ಕಾದಲ್), ಬಾಲಾ(ಸೇತು, ನಾನ್ ಕಡವಳ್, ಪಿತಾಮಗನ್), ಛೇರನ್(ಆಟೋಗ್ರಾಫ್,ಭಾರತಿ ಕಣ್ಣಮ್ಮ), ವೆಟ್ರಿಮಾರನ್(ಆಡುಕುಳ್ಂ), ಮಿಷ್ಕಿನ್(ಯುದ್ಧ್ಂ ಸೆಯ್ಯಿ, ಅಂಜಾತೆ), ಸಮುದ್ರಖಣಿ(ನಾಡೋಡಿಗಳ್, ಪೋರಾಲಿ), ಪ್ರಭು ಸಾಲೋಮನ್(ಮೈನಾ), ಸರ್ಗುನಮ್(ವಾಗೈ ಸುಡವ), ಸುಸೀನ್‌ತಿರನ್(ಅಜಗಿರಿಸ್ವಾಮಿಯಿನ್ ಕುದರೈ), ವಸಂತಬಾಲನ್(ಅಂಗಡಿ ತೆರು)...ಅಬ್ಬಾ ಎಂತಹ ಫಸಲು! ಒಂದು ಸಿನಿಮಾ ಪೈರು ಇನ್ನೊಂದಕ್ಕಿಂತ ಭಿನ್ನ, ಆಳೆತ್ತರ! ಮತ್ತೊಂದು ಅದಕ್ಕಿಂತ ಭಿನ್ನ, ಆಳನ್ನೂ ಮೀರಿದೆತ್ತರ...!!. ಒಂದು ನವಿಲನ್ನು ನಾಚಿಸುವ ಮೊತ್ತೊಂದು ನವಿಲಿನಾಟ...ನೋಡುವವರ ಕಣ್ಣಿಗೆ ಅಂದದಾಟ. ಈ ನವಿಲಿನಾಟ ತಮಿಳು ಸಿನಿಮಾಗೆ ಮಾತ್ರವೇ ಅನ್ವಯಿಸುತದೆಯೇ ಹೊರೆತು, ಪಕ್ಕದ ಕನ್ನಡ ಸಿನಿಮಾಕ್ಕಲ್ಲ. ಕನ್ನಡ ಸಿನಿಮಾಗಳೇನಿದ್ದರೂ ನಾಚಿಸಿಕೊಳ್ಳುವ ಸರದಿಯಲ್ಲಿ ಮಾತ್ರ ನಿಲ್ಲುವ ಪಡಿಯಚ್ಚಿನ ದೃಶ್ಯ ಸರಮಾಲೆಯಷ್ಟೇ. ಕೇವಲ ಮೈಗಳ್ಳರ-ಅಪ್ರಾಪ್ತ ವಯಸಿನ ಅನುಭವಜನ್ಯ ಕಥಾನಕಗಳೇ ಸರಕಾಗುವುದು ಸಿನಿಮಾವೆಂದು ತಪ್ಪಾಗಿ ಭಾವಿಸಿದ್ದರೇ ಬಹುಶಃ ಅವರ ಸಿನಿಮಾದ ಗ್ರಹಣವನ್ನೆ ಪ್ರಶ್ನಿಸಬೇಕಾಗುತ್ತದೆ. ಇಂಥಹ ಪ್ರಯತ್ನಗಳು ಸಿನಿಮಾದ ಸಾಧ್ಯತೆಯನ್ನೇ ಬದಿಗಿಟ್ಟಂತೆ. ಸಂಭಾಷಣೆಯೇ ಇಲ್ಲದ ಸಿನಿಮಾ ಮಾಡಿದ್ದು, ಮಾಡುತ್ತಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಬಹಳಷ್ಟಿವೆ. ಇದಕ್ಕೂ ಘಾತಕವಾದ ಜಾತಿಯಾದರಿತ



ಗುಂಪು ಇನ್ನೊಂದು ಅಪಾಯವನ್ನು ಕನ್ನಡ ಸಿನಿರಂಗದಲ್ಲಿ ಸೃಷ್ಟಿಸುತ್ತಿದೆ. ಮೇಲ್ಜಾತಿಯವರೆಲ್ಲಾ ಒಂದೆಡೆ ಸೇರಿ ಸಿನಿಮಾದ ಎಲ್ಲಾ ವಿಭಾಗಗಳನ್ನು ಹಿಡಿದಿದ್ದರೆ, ಹಿಂದುಳಿದವರೂ ಏನೂ ಕಡಿಮೆ ಇಲ್ಲವೆನ್ನುವಂತೆ ಸಿನಿಮಾ ಸೃಷ್ಟಿ ಕಾರ್ಯದಲ್ಲಿ ತೊಡಗಿದ್ದಾ-ರೆ. ಯೋಗರಾಜ್ ಭಟ್ಟರ ಕ್ಯಾಂಪ್ ಅಥವಾ 'ಕೆಂಪೆಗೌಡ', 'ಸಂಗೊಳ್ಳಿ ರಾಯಣ್ಣ'ದಂಥಹ ಚಿತ್ರಗಳಿಂದ ಇದು ಇನ್ನೂ ಚೆನ್ನಾಗಿ ವೇದ್ಯವಾಗುತ್ತದೆ.

ಕಾದಲ್, ಪಿತಾಮಗನ್‌ನಿಂದ ಶುರುವಾಗಿ ಭಿನ್ನ ನೆಲೆಯ ಹೊಸ ದೃಷ್ಟಿಕೋನದ ಒಂದು ಬಳಗವೆ ಸೃಷ್ಟಿಯಾದದ್ದು, ತನ್ನದೇ ಪ್ರೇಕ್ಷಕವರ್ಗವನ್ನು ಸೃಷ್ಟಿಸಿಕೊಂಡಿದ್ದು ಈ ಮೇಲಿನ ಸಿನಿಮಾಗಳ ಯಶಸ್ಸನ್ನು ನಿಚ್ಚಳಗೊಳಿಸಿದವು. ನಿರ್ದೇಶಕ ಬಾಲಾ, ಅಮೀರ್‌ರಂಥವರ ಹತ್ತಿರ ಸಹ ನಿರ್ದೇಶಕರಾಗಿದ್ದ ಬಹುತೇಕರು 2000ದ ನಂತರ ಪ್ರತ್ಯೇಕ ನಿರ್ದೇಶಕರಾದರು. ಇವರಲ್ಲಿ ಸಸಿಕುಮಾರ್- ಸಮುದ್ರಖಣಿಯರ ಹೆಸರನ್ನು ಪ್ರಸ್ತಾಪಿಸಲೇಬೇಕು. ನಟ-ನಿರ್ದೇಶಕ-ನಿರ್ಮಾಪಕ ಶಶಿಕುಮಾರ್ ತಾನು ಬೆಳೆದಂತೆಯೇ ಇತರರಿಗೂ ಅವಕಾಶ ನೀಡಿ ಮೇಲೆತ್ತುವ ಕಾರ್ಯ ಮಾಡುತ್ತಿರುವುದು ಯಾರೇ ಆದರೂ ಮೆಚ್ಚಲೇಬೇಕಾದ ಸಂಗತಿ. ತಮ್ಮದೇ ಚೊಚ್ಚಲ ಸಿನಿಮಾ ಸುಬ್ರಮಣ್ಯಪುರಂ ಸೇರಿದಂತೆ, ಅತೀ ಮೆಚ್ಚುಗೆ ಮತ್ತು ಯಶಸ್ವಿಯಾದ ಪಸಂಗ, ಈಸಾನ್, ಪೋರಾಲಿ, ಸುಂದರಪಾಂಡ್ಯನ್ ಚಿತ್ರಗಳನ್ನು ನಿರ್ಮಿಸಿ ಒಂದು ಬಳಗವನ್ನೇ ಕಟ್ಟುವ ಕಾರ್ಯ ಮಾಡುತ್ತಿರುವುದು ಹರಿಯುವ ಸಿನಿಮಾ ನದಿಯ ಹೊಸ ಸೇತುವೆಯಂತೆ. ಸಮುದ್ರ ಖಣಿ, ಎಸ್.ಆರ್.ಪ್ರಭಾಕರನ್ ಈ ಸೇತುವೆ ಸದಾ ಬಳಕೆಯಲ್ಲಿರುವಂತೆ ಮಾಡಲು ಸಿದ್ಧವಾಗಿರುವ ಕುಶಲಿಗಳು. ನಿರ್ಮಾಣದೊಂದಿಗೆ ನಟರೂ ಆದ ಸಸಿಕುಮಾರ್ ಸ್ವತಃ ನಟನೆ ಮಾಡಿರುವ ಸಿನಿಮಾಗಳಾಳವು ಅತೀ ರಂಜನೆಯಂಬಂಥಹ ಯಾವ ಅಂಶವನ್ನು ಹೊಂದಿರುವುದಿಲ್ಲ. ನೈಜ ಮತ್ತು ಪಾತ್ರವೇ ತಾನಾಗಿ ನಟಿಸುವ ಕಲೆ ಸಸಿಕುಮಾರ್‌ಗೆ ಒಲಿದುಬಿಟ್ಟಿದೆ. ದೊಡ್ಡ ನಟರ ಕ್ಲೀಷೆಗಳಿಲ್ಲದ ಮನಮುಟ್ಟುವಂತೆ ನಟಿಸುವ ಕಲಾವಿದ



ಸಸಿಕುಮಾರ್. ಸ್ವತಂತ್ರವಾಗಿ ನಿರ್ದೇಶಕ, ನಟ-ರಾದರೂ, ಸಮುದ್ರ ಖಣಿ ಮತ್ತು ಸಸಿಕುಮಾರ್ ಒಂದು ರೀತಿಯ ಕೊಡು ಕೊಳ್ಳು ಸಂಬಂಧವನ್ನು ಸ'ವ'ಂಥ'Fವಾಗಿ ನಿರ್ವಹಿಸುತಿದಾರೆ. ಚಿತ್ರ-ಕ್ಕೆ ಬಂಡವಾಳದೊಂದಿಗೆ, ನಟನೆಯಲ್ಲೂ ಇವರುಗಳು ಒಟ್ಟಾಗಿ ಸಿನಿಮಾ ಮಾಡುತ್ತಾರೆ. ಇವರನ್ನು ಸೂರಿ ಮತ್ತು ಯೋಗರಾಜ್ ಭಟ್ ಜೊತೆ ಇಟ್ಟು ನೋಡುವುದು ಹಾಸ್ಯಸ್ಪದ ವಾಗಿಬಿಡಬಹುದು.

ಚಿತ್ರ ನಿರ್ಮಾಣದ ಎಲ್ಲಾ ವಿಭಾಗದಲ್ಲೂ ತೊಡಗಿಕೊಳ್ಳುವುದು ಚೇರನ್ ಅಥವಾ ಸಸಿಕುಮಾರ್‌ರ ಭಿನ್ನ ಹಾದಿಯೇನಲ್ಲ. ಕಮಲ್ ಹಾಸನ್, ನಟ-ನಿರ್ದೇಶಕ- ನಿರ್ಮಾಪಕ ಕೊನಗೆ ವಿತರಕನೂ ಆದ ಮಾದರಿ ನಮ್ಮ ಮುಂದಿದೆ. 'ಭಾರತಿ ಕಣ್ಣಮ್ಮ' ಚಿತ್ರದ ಮೂಲಕ ಬೆಳ್ಳಿಬೆಳಕಿನ ಭರವಸೆಯ ನಿರ್ದೇಶಕನಾದ ಚೇರನ್ ಇಡೀ ತಮಿಳು ಸಿನಿಮಾದಲ್ಲಿ ದೂರವಾಗುತ್ತಿದ್ದ ಸಾಮಾಜಿಕ ಆಯಾಮಕ್ಕೆ ಒತ್ತು ಕೊಟ್ಟು ತನ್ನದೇ ಪ್ರೇಕ್ಷಕ ವರ್ಗವನ್ನು ಸೃಷ್ಟಿಸಿಕೊಂಡವ. ಈತನ ಸಿನಿಮಾಗಳು, ಮಾಸಿದಂತಹ ನಮ್ಮೊಳಗಿನ ಭಾವನೆಗಳನ್ನು ಕೆದುಕುತ್ತಾ, ಸರಿಯಾದದನ್ನು ತೆ-ೂೕರುತ್ತಾ, ಅಷ್ಟೇ ಸೂಕ್ಷ್ಮವಾಗಿ ಸಮಸ್ಯೆಯ ಆಳವನ್ನು ಮುಟ್ಟುತ್ತವೆ. ಮೊದಲ ಚಿತ್ರ 'ಭಾರತಿ ಕಣ್ಣಮ್ಮ'ದಲ್ಲಿ ಜಾತಿಯಿಂದಾಗಿ ಒಂದಾಗದ ಜೋಡಿಗಳ ಕಥೆಯಾದರೆ, 'ಪಾಂಡವರ್ ಭೂಮಿ' ಹಳ್ಳಿಯ ಸಣ್ಣತನದಿಂದಾಗುವ ಅನಾಹುತ-ವಿನಾಶದ ಸುತ್ತ ಕೇಂದ್ರಿತ. ಹಾಗೇ ಚೇರನಗ್‌ಗೆ ತುಂಬು ಯಶಸ್ಸನ್ನು ಕೊಟ್ಟ 'ಆಟೋಗ್ರಾಫ್' ನಮ್ಮದೇ ಭೂತದ ಹಿಡಿಗನ್ನಡಿಯಷ್ಟು ಆತ್ಮೀಯವಾಗಿ ತೋರುತ್ತದೆ. ಚೇರನ್‌ನ ಸಿನಿಮಾಗಳು ಎಷ್ಟೋ ಬಾರಿ ತೀರಾ ಬಯೋಗ್ರಾಫಿಕಲ್ ಎಂದೆನಿಸಿದರೂ, ನಮ್ಮಗಳನ್ನು ಸೂಕ್ಷ್ಮವಾಗಿಸುವತ್ತ ಒಂದು ಹೆಜ್ಜೆ ಎಂಬದಂತು ಸತ್ಯ. ಹೊರಲಾರದ ನೋವೊಂದನ್ನು ಸದಾ ಹೊತ್ತು, ಭಾರ ತಾಳದೆ ಬೆನ್ನು ಬಾಗಿ ಗೂನಾಗಿ, ಈ ಗೂನಿಗೆ ಇವೇ ಕಾರಣ ಎಂದು ತೋರುವ ಎಮೋಷನಲ್ ಅಡ್ವೆಂಚರಿಸ್ಟ್ ಚೇರನ್.

ಮೇಲೆ ಹೆಸರಿಸಿದ ಎಲ್ಲಾ ತಮಿಳು ಚಿತ್ರಗಳು ಸರಳಾತಿ ಸರಳ ಎಂಬ, ಕೆಲವೊಮ್ಮೆ ನಮ್ಮ ಓಣಿಯ ಹುಡುಗನ ಅಥವಾ ನಮ್ಮನೆಯ ಹೆಣ್ಣಗಳ ಕಥೆಯನ್ನೇ ಹೋಲುವಷ್ಟು ಆತ್ಮೀಯವಾಗಿ ಚಿತ್ರಿತವಾಗಿರುತ್ತವೆ. ಇಲ್ಲಿ ತಂತ್ರಜ್ಞಾನದ ಅಬ್ಬರಕ್ಕಿಂತ ನೈಜತೆಯ ಪುನಃಸೃಷ್ಟಿ ಮುಖ್ಯವೇ ಹೊರೆತು, ಮಿಕ್ಕೆಲ್ಲವೂ ಗೌಣ. ದೊಡ್ಡ ಸೆಟ್ಟು, ಮಾಸ್ ಪಂಚಿಂಗ್ ಡೈಲಾಗ್, ಸ್ಟಾರ್ ನಟರು... ಇವರೆಲ್ಲರನ್ನೂ ಮೀರಿ ಸಿನಿಮಾಕ್ಕೆ ಕಥೆ-ನಿರ್ದೇಶಕನೇ ಮುಖ್ಯವೆಂಬುದುನ್ನು ಮರು ಸಾಬೀತು ಪಡಿಸುತ್ತಿರುವುದು ಈ ಮೇಲೆ ಹೆಸರಿಸಿದ ಸಿನಿಮಾಕಾರರ ಪಡೆ. ಇವರ ಒಟ್ಟು ಸಿನಿಮಾವನ್ನು ಸೇರಿಸಿ ತೆಗೆದ ಬಜೆಟ್, ಬಹುಶಃ ಎನ್.ಶಂಕರ್ ಮಾಡುವ ಒಂದು ಸಿನಿಮಾಕ್ಕೂ ಸಾಲುವುದಿಲ್ಲವೇನೋ(?). ಅಷ್ಟು ಕಡಿಮೆ ಬಜೆಟ್‌ನದ್ದಾಗಿರುತ್ತವೆ. ಒಬ್ಬ ಸಾಮಾನ್ಯ ಕೂಲಿಕಾರ, ಒಂದು ಜಟಕಾ ಕುದು-ರೆ ಹೊಡೆಯುವವ, ಪಾನಿಪುರಿ ಗಾಡಿ ತಳ್ಳುವವ...ಹೀಗೆ ಯಾರು ಬೇಕಾದರು ಸಿನಿಮಾದ ಪ್ರಧಾನ ಪಾತ್ರಧಾರಿಗಳಾಗುವುದರಿಂದ, ದೊಡ್ಡ ನಟ-ನಟಿಯರ ಅವಶ್ಯಕತೆ ಇಲ್ಲ. ಹಾಗಾಗಿ ಸಿನಿಮಾದ ಬಹುದೊಡ್ಡ ಹಣವು ಉಳಿತಾಯವಾಗುತ್ತದೆ.

ಮೊದಲೆಲ್ಲ ಒಂದು ಚಿತ್ರದ ಮುಖ್ಯ ಭೂಮಿಕೆಯಲ್ಲಿ ಕುಟುಂಬ ಅಥವಾ ದೈವಭಕನಿದ್ದರೂ, ಚಿತ್ರ ಸಾಮಾಜಿಕ ಸಂಬಂಧಗಳ ಎಳೆಯನ್ನು ಬಿಟ್ಟುಕೊಡುತ್ತಿರಲಿಲ್ಲ. ಒಂದು ವ್ಯಕಿಯ ಜೀವನ ಕೇವಲ ಅವನದೇ/ಅವಳದೇ ಆಗದೇ ಇಡೀ ಹಳ್ಳಿ-ಸಮುದಾಯದ ಕುರುಹೂ ಆಗಿರುತ್ತಿತ್ತು. ಉದಾಹರಣೆಗೆ, ಬಂಗಾರದ ಮನುಷ್ಯ, ಮುನಿಯನ ಮಾದರಿ. ಪ್ರಸ್ತುತ ಕಾಲಘಟ್ಟದಲ್ಲಿ ಸಿನಿಮಾವೊಂದು ಸಮೂಹ ಪ್ರಜ್ಞೆಯ ಬದಲು ಒಂದು ವ್ಯಕ್ತಿಯ ರೋಚಕತೆಯನ್ನು ಬಿಂಬಿಸಲು ಬಳಕೆಯಾಗುತ್ತಿದೆ. ಬಹುತೇಕ ಇಂದಿನ ಕನ್ನಡ ಸಿನಿಮಾಗಳು ಇದಕ್ಕೆ ಉದಾಹರಣೆಯಾಗಬಹುದು. ಇದರ ಬಹುದೊಡ್ಡ ಅಪಾಯವೆಂದರೆ ಸಿನಿಮಾ ವ್ಯಕ್ತಿ ಕೇಂದ್ರವೂ ಆಗುತ್ತಿರುವುದು... ಆ ವ್ಯಕ್ತಿ ಹೇಳಿದ್ದೇ ವೇದವಾಕ್ಯವಾಗುತಿರುವುದು... ಉಡಾಫೆತನ, ಸೋಮಾರಿತನ, ಭಟ್ಟಂಗಿತನವೇ ಮುಖ್ಯವಾಗಿ ಮಾನವೀಯ ಮೌಲ್ಯಗಳೆಲ್ಲ ವ್ಯಂಗ್ಯದ ವಸ್ತುವಾಗುತ್ತಿರುವುದು ಮತ್ತೊಂದು ಚೋದ್ಯ. ಈ ಕುಚೋದ್ಯಕ್ಕೆ ಕಾರಣಗಳನ್ನು, ಸಿನಿಮಾ ಮಾಧ್ಯಮ ನಿಯಂತ್ರಿಕ ವ್ಯಕ್ತಿ ಮತ್ತು ಅವರ ಸಮುದಾಯದ ನೆಲೆಯಲ್ಲಿ ನೋಡಿದರೆ ಅರ್ಥವಾಗಿಬಿಡುತದೆ. ಒಂದೆಡೆ ಯೋಗರಾಜ ಭಟ್ಟರು ಮತ್ತು ಸೂರಿ ಉಡಾಫೆತನವನ್ನೇ ಚಿತ್ರವೆಂದು ಬಿಂಬಿಸುವುದು ಸಿನಿಮಾ ಎಂದುಕೊಂಡಿದ್ದರೆ ಬಹುಶಃ ಅವರ ಗುರುಕುಲದ ತಪ್ಪಿರಬೇಕು ಅಥವಾ ಅವರ ಭೌದ್ಧಿಕ

ಕಾರ್ಖಾನೆಯಲ್ಲಿ ಯಾವುದೋ ಊನವಿರಬೇಕು. ಅವರ ಶಿಷ್ಯ ಪಡೆ ನಿರ್ಮಿಸುತ್ತಿರುವ ಚಿತ್ರಗಳಾದ 'ಅದ್ದೂರಿ' 'ಅಂಬಾರಿ'ಗಳು ಇದಕ್ಕೆ ಭಿನ್ನವೇನಲ್ಲ. ಈ ಇಬ್ಬರ ಜೋಡಿಗಳ ಹಾದಿ ತಮಿಳಿಗಿಂತ ಬಲು ದೂರದಾದಿ. ತಮ್ಮ ತರಾವರಿ ಅನುಭವ ಗುಚ್ಛವನ್ನೇ ಅನೇಕ ಕಿರುಸಂಗತಿ, ಉಪಕಥೆಯಿಂದ ಕಥೆ ಹೆಣೆದು, ಸಾಮಾಜಿಕ ಅವಶ್ಯಕತೆಗಳೆಲ್ಲವನ್ನೂ ಗೇಲಿ ಮಾಡುತ್ತಾ, ಉಥಾಪೆತನವು ಒಂದು ಕಸವುವೆಂದು ಬಿಂಬಿಸುವುದರಲ್ಲಿ ಭಟ್-ಸೂರಿ ಸಿದ್ಧಹಸ್ತರು. ಪ್ರೀತಿ-ಪ್ರೇಮ-ಉಡಾಳತೆಯ ಹಳಸಿದ ಪಂಚಾಮೃತದಿಂದ ಅವನ್ನೇ ಬಳಸಿಕೊಂಡು ಹಾವಾಡಿಗನೊಬ್ಬ ಡಬ್ಬಿಯಲ್ಲಿಯ ಹಲ್ಲಿಲ್ಲದ, ನಿಶ್ಶಕ್ತಿಯಿಂದ ಬಳಲಿದ ಹಾವನ್ನು ತೋರಿಸಿ ಗಂಟೆಗಟ್ಟಲೆ ಮಾತಾಡಿ, ಮೋಡಿ ಮಾಡಿ ಹಣವಸೂಲಿ ಮಾಡುವಂತೆ, ಪ್ರೇಕ್ಷಕರನ್ನು ಮೋಡಿಮಾಡುತ್ತಿದ್ದಾರೆ. ಆದರೆ ತಮಿಳಿನ ನಿರ್ದೇಶಕರು ಕುಶಲಿಗಳು. ಹಳಸಿದ ಪಂಚಾಮೃತದಿಂದಲೇ ಮದ್ಯ ತಯಾರಿಸಿ, ನಾಟಿ ಔಷಧಿ ಮಾಡುವ ಕುಶಲಿಗಳು.

ಇತ್ತೀಚೆಗೆ ಕೆಲ ಕನ್ನಡ ಸಿನಿಮಾಗಳು ಹಾಸ್ಯದ ತಗಡನ್ನು ಹೊದ್ದು, ಅತೀ ಸರಳವೆನಿಸಿದರೂ ನೋಡಿಸಿಕೊಳ್ಳುವ ವರಸೆಯನ್ನು ಪ್ರದರ್ಶಿಸುತ್ತಿರುವುದು ಧನಾತ್ಮಕ ಬೆಳವಣಿಗೆ. 'ಗೊಂಬೆಗಳ ಲವ್', 'ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ', 'ಸೈಬರ್ ಯುಗದೊಳ್', ಉತ್ತಮ ಪ್ರಯತ್ನದಿಂದಾಗಿ ಬೇರೆಬೇರೆಯದೇ ಆಗಿ ನಿಂತು ಯಶಸ್ವಿಯಾದವು. 80ರ ದಶಕದಿಂದೀಚೆಗೆ ಕಲಾತ್ಮಕ ಚಿತ್ರಗಳೆಂದೆನಿಸಿಕೊಂಡು ಪ್ರೇಕ್ಷಕರಿಗಿಂತ, ಪ್ರಶಸ್ತಿ ಪಾಲಕರ ಮೆಚ್ಚುಗೆಗೆ ತಯಾರಾಗುತ್ತಿದ್ದ ಚಿತ್ರಗಳಿಗಿಂತ ಇವು ಭಿನ್ನವಾಗಿಯೂ, ಎಲ್ಲ ವರ್ಗದ ಪ್ರೇಕ್ಷರನ್ನೂ ಮುಟ್ಟಿ ಅಳ್ಳಾಡಿಸುವ ಗುಣಗಳನ್ನು ಪಡೆದುಕೊಂಡಿವೆ.

'ಗೊಂಬೆಗಳ ಲವ್' ಚಿತ್ರದಲ್ಲಿ ಒಂದು ತಬ್ಬು, ಫೈಟು, ಮುತ್ತು, ಮೊಲೆ, ಹೊಕ್ಕಳ ಪ್ರದರ್ಶನ ದೃಶ್ಯಗಳಾವುವು ಇಲ್ಲದೇ ಸಿನಿಮಾವೊಂದು ಗೆಲ್ಲತ್ತದೆ ಎಂದು ತೋರಿಸಿರುವುದನ್ನು ಮೆಚ್ಚಿ ಪ್ರೋತ್ಸಾಹಿಸಲೇಬೇಕಾದ ಪ್ರಯತ್ನ. ಕಥೆ ಇದ್ದು, ಕನಸಿದ್ದು ನೋಡುವ ಪ್ರೇಕ್ಷಕರಿಲ್ಲದೇ ಇದ್ದದ್ದು ಖೇದಕರ ಸಂಗತಿ. ಇದೇ ಸಂದರ್ಭದಲ್ಲಿ ಬಿಡುಗಡೆಯಾದ ಚಿತ್ರ 'ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ' ಚಿತ್ರ ಮೇಲಿನದೆಲ್ಲವನ್ನೂ ವಾಚ್ಯವಾಗಿ ತೋರಿಸಿಬಿಡುತ್ತದೆ. ಅವರವರ ಮನಕ್ಕೆ ಎಂಬಂತಿರುವ ಸಂಭಾಷಣೆಗಳು ಹಲವು ದಿನನಿತ್ಯದ ಸಂಗತಿಗಳನ್ನೇ ಕಥೆಯಾಗಿಸಿ ತೋರಿಸಿ ಗೆಲ್ಲುತ್ತದೆ. ಇದೆಲ್ಲದರ ಮಧ್ಯೆಯೂ ಈ ಚಿತ್ರವನ್ನು ಮೆಚ್ಚಲೇಬೇಕು. ಈ ವಿಮರ್ಶೆಯಷ್ಟು ಸುಲಭವಾದದ್ದಲ್ಲ, ಒಂದು ದೃಶ್ಯವನ್ನು ಕಟ್ಟುವುದು. ಹಾಗೆ ನೋಡಿದರೆ, ಚಿತ್ರವೊಂದರ ಪ್ರಯತ್ನವನ್ನೇ ನಾವು ಅಭಿನಂದಿಸಬೇಕಾಗುತ್ತದೆ. ಏಕೆಂದರೆ ಅದರ ಶ್ರಮದ ಅರಿವನ್ನು ಬಲ್ಲ ಯಾರೇ ಆದರೂ ಸಿನಿಮಾವೊಂದನ್ನು ಸಂಪೂರ್ಣವಾಗಿ ತಿರಸ್ಕರಿಸುವುದಿಲ್ಲ. ಇಂದು ಸೂಪರ್ ಹಿಟ್ ಆಗಿರುವ ಈ ಸಿಂಪಲ್ಲಾಗಿ ಒಂದ್ ಲವ್ ಸ್ಟೋರಿ ಚಿತ್ರವೇ ಇದಕ್ಕೆ ಸಾಕ್ಷಿ.ಆದರೆ ನಮ್ಮ ಸಿನಿಮಾ ಪಂಡಿತರು ಮಾತ್ರ ಮುಂಗಾರು ಮಳೆಗೆ ಹಾಸಿದ ರತ್ನಗಂಬಳಿಯನ್ನು ಈ ಚಿತ್ರಕ್ಕೆ ಹಾಸಲು ತೋರುತ್ತಿರುವ ಜಿಪುಣತನಕ್ಕೆ ಕಾರಣವೇನು ??

ತಮಿಳಿನ ಎಸ್.ಶಂಕರ್‌ನ ಬಹುತೇಕ ಚಿತ್ರಗಳಲ್ಲಿ ನಾಯಕ ಸಮಾಜವನ್ನು ತಿದ್ದುವ ಒಂದು ಪಾತ್ರಧಾರಿ. ಈ ಪಾತ್ರಧಾರಿಯನ್ನು ಸಿಂಗರಿಸಲು ಶಂಕರ್‌ರವರು ಬಳಸದ ತಂತ್ರಜ್ಞಾನವಿಲ್ಲ, ಒಂದು ಶಾಟ್‌ಗೆ ಬಳಸುವ ಕ್ಯಾಮಾರಗಳಿಗೆ ಲೆಕ್ಕವಿಲ್ಲ(ಬಾಯ್ಸ್ ಚಿತ್ರದ ಹಾಡೊಂದಕ್ಕೆ 60ಕ್ಕೂ ಹೆಚ್ಚು ಕ್ಯಾಮಾರಗಳನ್ನು ಬಳಸಿದ್ದರಂತೆ). ಇನ್ನುಳಿದಂತೆ ತಮಿಳು ಚಿತ್ರರಂಗ ಇಡೀ ದೇಶವೇ ತಿರುಗಿ ನೋಡುವಂತಹ ಪ್ರಯೋಗಗಳಿಂದ ಹೆಸರು ಮಾಡುತ್ತಿದೆ. ಸತ್ಯಕ್ಕೆ ಹತ್ತಿರವಾಗಿ, ಭ್ರಮಾತ್ಮಕ ತಿಕ್ಕಲುತನಗಳಿಲ್ಲದೆ, ಹೊಸ ಮುಖಗಳಿಂದ, ನವಿರಾದ ಕಥಾಗುಚ್ಛಗಳಿಂದ ಪ್ರೇಕ್ಷಕರನ್ನು ಸೆಳೆಯುತ್ತಿದೆ. 'ಸುಬ್ರಮಣ್ಯಪುರ್‌ಂ', 'ಮೈನಾ'ದೊಂದಿಗೆ ಮುಖ್ಯಧಾರೆಯ ಗಮನಸೆಳೆದ ಈ ಸಿನಿನಡಿಗೆ 'ವಾಗೇ ಸುಡವಾನ್', 'ಅಂಗಾಡಿ ತಿರುವು', 'ಅಳಗಿರಿಸ್ವಾಮಿ ಕುದುರೈ', 'ಕೇಸ್ ನಂ 18/9' ಮುಂತಾದ ಚಿತ್ರಗಳಿಂದ ಆತ್ಮೀಯವೂ ಅನುಕರಣೆಯೂ ಆದದ್ದು ಚಿತ್ರರಂಗಕ್ಕೆ ಬೇಕಿದ್ದ ನಮ್ಮದೇ ಮಣ್ಣಿನ ವಾಸನೆಯ ಹಿಡಿ ಪಾಠವಾಗಿರುವುದಲ್ಲದೆ ಮತ್ತು ಯಶಸ್ವಿ ಚಿತ್ರಗಳ ರೀಮೇಕ್‌ನಲ್ಲಿ ಮಗ್ನರಾಗಿರುವ ಕನ್ನಡದ ಗೆದ್ದಲಿಡಿದ ಬುರುಡೆಗಳಿಗೆ ಆತ್ಮಾವಲೋಕನದ ಪಾಠವೂ ಆಗಲಿ.

ಅಮ್ಮ ಮಾಡಿದ ಸಾದು

■ ಎನ್.ಗೋವಿಂದಪ್ಪ

ನಮ್ಮ ಮನೆಯಲ್ಲಿ ನಾವು ಎಂಟು ಮಕ್ಕಳು. ಮೂರು ಹೆಣ್ಣಿನ ನಂತರ ನಾನಾದರೆ ನನ್ನ ನಂತರ ಮೂರೆಣ್ಣು ಆನಂತರ ತಮ್ಮ. ಹಳ್ಳಿಯಲ್ಲಿಯೆ ವಾಸವಾಗಿದ್ದ ನಾವು ಮನೆಯ ಒಳ ಹೊರಗಿನ ಹೊಲತೋಟದ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆವು. ಅಡುಗೆಗೆ ನೀರು ತರುವುದು, ಸೌದೆ ಹೊಂದಿಸಿಕೊಡುವುದು, ಸೇದು ಬಾವಿಯಿಂದ ನೀರು ತರಲು ಹೋಗುವಾಗ ಹಗ್ಗವನ್ನು ಹೊತ್ತುಕೊಂಡು ತಾಯಂದಿರ ಜೊತೆ ಹೋಗುವುದು, ಪಾತ್ರೆಪಗಡೆಗಳನ್ನು ತೊಳೆಯುವಾಗ ನೀರೆರೆಯುವುದು, ನೀರೊಲೆಗೆ ಬೆಂಕಿ ಹಾಕುವುದು, ಮಜ್ಜಿಗೆ ಕಡೆದು ಕೊಡುವುದು. ಮಕ್ಕಳಿಗೆ ಸ್ನಾನ ಮಾಡಿಸುವಾಗ ಬಾಯಿಗೆ ನೀರೂಗದಂತೆ ಜಾಗ್ರತೆಯಾಗಿ ನೀರುಯ್ಯುವುದು, ಮಕ್ಕಳನ್ನು ಆಟವಾಡಿಸಿಕೊಂಡು ಅಮ್ಮನನ್ನು ಕೆಲಸಕ್ಕೆ ಬಿಡುವುದು, ಕಂದಮ್ಮಗಳು ಅಳುತ್ತಿದ್ದರೆ ಜೋಳಿಗೆ/ತೊಟ್ಟಿಲಿಗೆ ಹಾಕಿ ತೂಕುವುದು, ತೋಟಕ್ಕೆ ಹೋಗಿ ಕಾಯಿ-ಪಲ್ಯೆ ತರುವುದು. ದನಕರುಗಳಿಗೆ ಕಲಗಚ್ಚು ನೀರಿಡುವುದು, ಹುಲ್ಲು ಹಾಕುವುದು, ಸಗಣಿ-ಗಂಜಲ ಬಾಚುವುದು, ಹಾಲು ಕೊಟ್ಟು ಬರುವುದು ಇತ್ಯಾದಿ.

ಅಮ್ಮ ಬೆಳಗಿನ ಕೆಲಸವನ್ನೆಲ್ಲಾ ಮುಗಿಸಿ ಸುಮಾರು ಮೂರ್‍ನಾಲ್ಕು ಘಂಟೆಯ ಹೊತ್ತಿಗೆ ಮಕ್ಕಳಿಗೆ ಸ್ನಾನ ಮಾಡಿಸುವ ಕೆಲಸ ಇಟ್ಟುಕೊಳ್ಳುತ್ತಿದ್ದಳು. ನೀರೊಲೆಯಲ್ಲಿ ಕಾಯಿಸಿದ ಸುಡು-ಸುಡು ನೀರನ್ನು ಬಕೆಟ್ಟಿಗೆ ತುಂಬಿ ತಂದಿಟ್ಟು ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮೈ-ಕೈ ತಿಕ್ಕಿ ಸ್ನಾನ ಮಾಡಿಸುವಾಗ ನೀರನ್ನು ಉಯ್ಯಲು ಹೇಳುತ್ತಿದ್ದಳು. ಮಗುವಿಗೆ ನೀರು ಉಯ್ಯಲು ನಾಮುಂದು ತಾಮುಂದು ನುಗ್ಗುತ್ತಿದ್ದೆವು. ಕಂದಮ್ಮಗಳಿಗೆ ನೀರು ಉಯ್ಯಲು ಅದೇನೋ ಖುಷಿ. ಮಗುವಿನ ಸ್ನಾನ ಆದ ನಂತರ ಉಳಿದ ನೀರಿನಲ್ಲಿ ನಮಗೂ ಸ್ನಾನವಾಗುತ್ತಿತ್ತು. ಕಂದಮ್ಮನ ಮೈಒರೆಸಿ ಸೂರ್ಯ ಕಿರಣಗಳಿಗೆ ಮೈಒಡ್ಡಿ, ನಿಗಿ ನಿಗಿ ಕೆಂಡಗಳ ಮೇಲೆ ಸಾಮ್ರಾಣಿ ಹಾಕಿ, ಗಮ ಗಮ ಪೌಡರ್ ಬಳಿದು, ಒಣಗಿದ ಬಟ್ಟೆ ತೊಡಸಿ, ಹಣೆಗೊಂದು ಕೆನ್ನೆಗೊಂದು ಸಾದಿನ ಕರಿ ಬೊಟ್ಟನ್ನು ದೊಡ್ಡದಾಗಿ ದುಂಡಾಕಾರವಾಗಿ ಇಡುತ್ತಿದ್ದಳು.

ನಾವು ಕೆನ್ನೆ ತೋರಿಸಿ ತಮಗೂ ಇಡಲು ಹೇಳುತ್ತಿದ್ದೆವು. ಈ ಎಲ್ಲಾ ಕೆಲಸಗಳಲ್ಲೂ ಖುಷಿಯಿಂದ ಪಾಲ್ಗೋಳುತಿದ್ದೆವು. ಸಾದು ಕಂದನ ಮುಖಕ್ಕೆ ಎಷ್ಟು ಚೆನ್ನಾಗಿ ಒಪ್ಪಿರುತ್ತಿತ್ತೆಂದರೆ, ಪೂರ್ಣ ಚಂದಿರನ ಮುಖದ ಮೇಲಿನ ಕಲೆಯಂತೆ ಸುಂದರ.

ಸಾದನ್ನು ಒಂದು ತೆಂಗಿನ ಖಾಲಿ ಚಿಪ್ಪಿನಲ್ಲಿ ಶೇಖರಿಸಿಡಲಾಗಿತ್ತು. ಅಮ್ಮ ಸಾದಿನ ಚಿಪ್ಪಿಗೆ ಒಂದು ತೊಟ್ಟು ಮೊಲೆ ಹಾಲನ್ನು ಚಿಮ್ಮಿಸಿ ಬೆರಳಿನಿಂದ ತೇದು ಬಾಯಲ್ಲಿ ಒಲುವಲಾಯಿ..... ಒಲುವಲಾಯಿ.....

ಎನ್ನುತ್ತಾ, ಹಚ್ಚಿದ ಸಾದನ್ನು ಕೆಡಿಸಿಕೊಳ್ಳದಿರಲೆಂದು ಪುಸಲಾಯಿಸುತ್ತಾ ಕಂದನ ಎರಡೂ ಕೈಗಳನ್ನು ಒಂದು ಕೈಯಿಂದ ಮೃಧುವಾಗಿ ಹಿಡಿದು, ಮತ್ತೊಂದು ಕೈಯ ಬೆರಳಿನಿಂದ ಸಾದು ಬೊಟ್ಟಿಡುವುದು. ಅದನ್ನು ಮಗು ಮತ್ತೆ ಮತ್ತೆ ಕೆಡಿಸಿಕೊಳ್ಳುವುದನ್ನು ಕಂಡು ಖುಷಿಯಾಗುತ್ತಿತ್ತು. ಅಮ್ಮ ಎಷ್ಟೇ ಚೆನ್ನಾಗಿ ದುಂಡಗೆ ಸಾದಿಡಲು ಹೋದರೂ ಅದು ಕಂದನ ಚಡಪಡಿಕೆಯಿಂದ ತುಸು ಪಕ್ಕಕ್ಕೇ ಹೋಗುತ್ತಿತ್ತು. ಸರಿಯಾಗಿ



ಸಾದಿಟ್ಟು ಓರೆಯಾಗಿ ದಿಟ್ಟಿಸಿ ನೋಡಿ ಸರಿಯಾಗಿದೆ ಎಂದು ಸಮಾದಾನ ಪಟ್ಟುಕೊಳ್ಳುವಷ್ಟರಲ್ಲೇ ಕೈಯಾಡಿಸಿ ಅಳಿಸಿಕೊಂಡದ್ದೇ ಹೆಚ್ಚು. ಹಾಗೆಲ್ಲಾ ಒಂದು ದಿನವಾದರೂ ಸರಿಯಾಗಿ ಉಳಿಸಿಕೊಳ್ಳಲಿಲ್ಲ ಎಂದು ಹುಸಿ

ಕೋಪ ತೋರುತ್ತಿದ್ದಳು. ಕೆಲವೊಮ್ಮೆ ಸಾದಿನ ಚಿಪ್ಪಿಗೆ ನೀರೆ- ರೆದು ಕೊಡುವಾಗ ಸಾದು ತೇಯಲು ಹೋಗಿ ಮುಖವೆಲ್ಲಾ ಮಸಿ ಮಾಡಿಕೊಂಡಿದ್ದು ಉಂಟು.

ಸಾದು ಮುಗಿಯುತ್ತಾ ಬಂದಂತೆ ಅಮ್ಮ ಸಾದು ಮಾಡಬೇಕೆಂದು ಹೇಳುತ್ತಿದ್ದಳು. ಸಾದನ್ನು ಹೇಗೆ ಮಾಡುತ್ತಾರೆಂಬ ಕೂತೂಹಲ ನನ್ನಲ್ಲಿ ಮೊದಲಿನಿಂದಲೆ ಇತ್ತು. ಹಾಗಾಗಿ ಸಾದನ್ನು ಹೇಗೆ ಮಾಡುವುದು, ಯಾವಾಗ ಮಾಡುತೀಯೆ? ಎಂದು ಕೇಳುತ್ತಿದ್ದೆ. ಆಗೆಲ್ಲಾ ಅದೇನು ಸಾಮ್ರಾಜ್ಯ ಬಿಡೊ ಮಾಡೋಣ ಎನ್ನುತ್ತಿದ್ದಳು. ಹೀಗೆ ಹೇಳುವಾಗಲೆಲ್ಲಾ ನನ್ನ ಕೂತೂಹಲ ಹೆಚ್ಚಾಗುತ್ತಲೇ ಇತ್ತು. ಆ ದಿನ ಬಂದೆ ಬಂತು. ತೆಂಗಿನ ಚಿಪ್ಪಿನಲ್ಲಿ ಲೇಹ್ಯದಂತೆ ಗಟ್ಟಿಯಾಗಿರುವ ಸಾದಿಗೆ ನೀರು ಹಾಕಿ ತೇದೊಡನೆ ಬೆಣ್ಣೆಯಂತೆ ಮೃದುವಾಗಿ ಕ್ಷಣ ಮಾತ್ರದಲ್ಲೇ ಗಟ್ಟಿಯಾಗುತ್ತಿತ್ತು.

ಇದನ್ನೇ ತಿಂಗಳಾನುಗಟ್ಟಲೆ ಬಳಸಲಾಗುತ್ತಿತ್ತು. ಅಮ್ಮ ಬೊಗಸೆ ತುಂಬ ತೊಳೆದ ರಾಗಿ ಮತ್ತು ಸಾಮೆಯನ್ನು ಒಂದು ಬಾಣಲೆಗೆ ಹಾಕಿ ಹುರಿಯತೊಡಗಿದಳು. ಅದು ಕಪ್ಪಗೆ ಕರಕಲಾಗುವವರೆಗೂ ಉರಿದಾದ ಮೇಲೆ ತರಿ ತರಿ ಇರದಂತೆ ನುಣುಪು ಮಾಡಲಾಯ್ತು. ಸ್ವಲ್ಪವೆ ನೀರನ್ನು ಹಾಕಿ ಸಣ್ಣ ಉರಿಯಲ್ಲಿ ಕೊತ-ಕೊತನೆ ಕುದಿದು ಒಂದು ಹಂತಕ್ಕೆ ಬಂದಾಗ ತೆಳು ಶುಭ್ರ ಬಟ್ಟೆಯಲ್ಲಿ ಹಾಕಿಕೊಂಡು ಶೋದಿಸಿ ಚಿಪ್ಪಿಗೆ ಸುರಿಯಲಾಯ್ತು. ತಣ್ಣಗಾಗುತ್ತ ಸಾದು ಗಟ್ಟಿಯಾಯ್ತು. ಇದು ಮಹಾನ್ ವಿದ್ಯೆಯೆಂದು ಯಾರಿಗೂ ಅನಿಸದಿದ್ದರೂ, ಸಾದು ತಯಾರಿಸುವುದು ಒಂದು ಕಲೆಯೇ ಅಗಿತ್ತು. ಎಲ್ಲರಿಗೂ ಬರುತ್ತಿರಲಿಲ್ಲ. ಅಕ್ಕ-ಪಕ್ಕದ ಮನೆಗಳವರೂ ಅಮ್ಮನ ಕೈಯಿಂದ ಸಾದು ಮಾಡಿಸಿ ಹೊಯ್ಯುತ್ತಿದ್ದರು. ದೊಡ್ಡ ಪ್ರಮಾಣದಲ್ಲಿ ಸಾದನ್ನು ಜಾಲಿ ಕಾಯಿಗಳನ್ನು ಕುಟ್ಟಿ ಬೇಐಇಸಿ ಮಾಡುತ್ತಿದ್ದರು.

ತನ್ನ ಕಂದನ ಹಣೆ ಮತ್ತು ಗಲ್ಲಗಳಿಗೆ ಯಾವುದೇ ಸೋಂಕು ಉಂಟುಮಾಡದೆ ಮೊಗದ ಅಂದವನ್ನು ನೂರ್ಮಡಿಗೊಳಿಸಿ ದೃಷ್ಟಿ ತಾಕದಂತೆ ಮಾಡುತ್ತಿದ್ದ ಆ ಸಾದಿನ ಬೊಟ್ಟನ್ನು ಇಂದಿಗೂ ಮರೆಯಲಾಗದು. ಅಮ್ಮ ಸಾದು ತಯಾರಿಸಲು ತೆ- ೂರುತ್ತಿದ್ದ ಕಾಳಜಿ ಮುತುವರ್ಜಿ ಮೆಚ್ಚುವಂಥದ್ದು. ಸಾದು ಮಕ್ಕಳ ಮುಖಾರವಿಂದದ ಕಾಂತಿಯನ್ನು ಹೆಚ್ಚಿಸುತ್ತಿತ್ತು. ಬಾಣಂತಿಯರು ಕೆಂಪು ಕುಂಕುಮದ ಬದಲಿಗೆ ಕಪ್ಪು ಸಾದನ್ನು ದೃಷ್ಟಿ ತಾಕದಿರಲೆಂದು ಹಣೆಗೆ ಹಚ್ಚುತ್ತಿದ್ದರು. ವಿದವೆಯರು ವಿಭೂತಿಗೆ ಬದಲಾಗಿ ಸಾದನ್ನು ಇಟ್ಟುಕೊಳ್ಳುತ್ತಿದ್ದರು. ಇತ್ತೀಚೆಗೆ ಕಾಡಿಗೆ ಹೆಸರಿನಲ್ಲಿ ನೂರಾರು ಕಪ್ಪುಗಳು ಮಾರುಕಟ್ಟೆ ಪ್ರವೇಶಿಸಿದ್ದು ಸಾದಿನ ತಯಾರಿಕೆ ಬಳಕೆ ಮಾಯವಾಗಿದೆ.

ಮಕ್ಕಳ ಹೊಟ್ಟೆಗೆ ಹಾಕುವ ಅತಿ ಉಷ್ಣವಾದಾಗ ಒಕ್ಕುಳಿಗೆ, ತಲೆಗೆ, ಮೈಗೆ, ಅಭ್ಯಂಜನಕ್ಕೆ ಹಚ್ಚುವ ಚಿಟ್ಟರಳೆಣ್ಣೆಯನ್ನು ಕೇಳಿಕೊಂಡು ಕೂಡ ಹಳ್ಳಿಯ ಹೆಂಗಸರು ನಮ್ಮ ಮನೆಗೆ ಬರುತ್ತಿದ್ದುದುಂಟು. ಅಂತಹ ಹರಳೆಣ್ಣೆ ತಯಾರಿಸುವುದರಲ್ಲಿಯೂ ಅಮ್ಮ ನಿಷ್ಣಾತೆ. ಹೊಲಗಳ ಅಕ್ಕಡಿ ಸಾಲುಗಳಲ್ಲಿ ಬೆಳೆಯುತ್ತಿದ್ದ ಚಿಟ್ಟರಳನ್ನು ಸಂಗ್ರಹಿಡುತ್ತಿದ್ದ ಅಮ್ಮ ಅವುಗಳನ್ನು ಬೆಚ್ಚಗೆ ಮಾಡಿ ಒರಲಿಗೆ ಹಾಕಿ ಕುಟ್ಟಿ ನೀರಿನೊಂದಿಗೆ ಚೆನ್ನಾಗಿ ಕುದಿಸಿ ತಣ್ಣೀರನ್ನು ಹೊಯ್ದು ಆರಲು ಬಿಡುತ್ತಿದ್ದಳು. ಆರುತ್ತಾ ಆರುತ್ತಾ ಮೇಲ್ಭಾಗದಲ್ಲಿ ಬೆಳ್ಳಗೆ ಕೆನೆ ಕಟ್ಟಿಕೊಳ್ಳುತ್ತಿದ್ದಾಗ ಅದನ್ನೆಲ್ಲಾ ಒಂದು ಬಾಣಲೆಗೆ ಹಾಕಿ ಒಂದು ಹದಕ್ಕೆ ಬೇಯಿಸಿದಾಗ ಗಮಗಮನೆ ಹರಳೆಣ್ಣೆ ಸಿದ್ದವಾಗುತ್ತಿತ್ತು. ಮನೆಯಲ್ಲಿ ಹದವಾಗಿ ಬೇಯಿಸಿದ ಎಣ್ಣೆಯಾದ್ದರಿಂದ ಮಕ್ಕಳಿಗೂ ದೊಡ್ಡವರಿಗೂ ಬಳಸಲಾಗುತ್ತಿತ್ತು.

ಹಾಗೇ ಅಮ್ಮನ ಸ್ವ-ಮೇಡ್ ಪ್ರಾಡಕ್ಟ್ ಅಂದರೆ, ಅದು ಕಾಗದದಿಂದ ಮಾಡಿದ ದಾನ್ಯ ಶೇಖರಣೆ ಮಾಡುವ ಪುಟ್ಟಿಗಳು. ಪರೀಕ್ಷೆಗಳು ಮುಗಿದು ಫಲಿತಾಂಶ ಬಂದಾದ ಮೇಲೆ ಕೆಲಸಕ್ಕೆ ಬಾರದ ಹಳೆ ಪುಸಕ, ಬರೆದಾದ ನೋಟ್ ಪುಸ್ತಕಗಳನ್ನು ಸಣ್ಣ ಸಣ್ಣ ಚೂರುಗಳಾಗಿ ಹರಿದು ಒಂದು ದೊಡ್ಡ ಪಾತ್ರೆಗೆ ಸುರಿಯಲಾಗುತ್ತಿತ್ತು. ಅನ್ನ ಮಾಡುವಾಗ ಬಸಿಯುವ ಗಂಜಿಯನ್ನು ಅದಕ್ಕೆ ಹಾಕುತ್ತಾ ನಾಲ್ಕೈದು

ದಿನಗಳ ಮಟ್ಟಿಗೆ ನೆನೆಸಿಟ್ಟು, ಮೆಂತ್ಯ ಕಾಳಿನೊಂದಿಗೆ ಹದಕ್ಕೆ ಬರುವಂತೆ ರುಬ್ಬಿ ಮುದ್ದೆ ಮಾಡಿಟ್ಟುಕೊಳ್ಳಲಾಗುತಿತ್ತು. ಬೇಕಾದ ಅಳತೆಯ ತಾಮ್ರ ಅಥವಾ ಇತ್ತಾಳೆ ಹಂಡೆ-ಕೊಳಗಕ್ಕೆ ತೆಳು ಪಂಚೆ ಬಟ್ಟೆಯನ್ನು ಹೊದಿಸಿ ಅದರ ಮೇಲೆ ಹದವಾಗಿ ರೊಟ್ಟಿಯಂತೆ ತಟ್ಟಿ ಮುರ್‍ನಾಲ್ಕು ದಿನ ಒಣಗಲು ಬಿಟ್ಟರೆ, ಪುಟ್ಟಿ ಸಿದ್ಧವಾಗುತ್ತಿತ್ತು. ಒಂದಷ್ಟು ಬಣ್ಣ ಬಳಿದರೆ ದಾನ್ಯ ಸಂಗ್ರಹಿಸುವ ಪುಟ್ಟಿ ರೆಡಿ. ನೀರು, ಮಳೆಗೆ ಬೀಳದಿದ್ದಲ್ಲಿ ಹಲವಾರು ವರ್ಷಗಳ ಬಾಳಿಕೆ ಖಂಡಿತ.

.....17

ಮರೆಯಲಾಗದ ಆರ್ಯ-ದ್ರಾವಿಡ ಸಂಘರ್ಷ

■ ಸಂದೇಶ್ ರತ್ನಪುರಿ

'ಆರ್ಯ-ದ್ರಾವಿಡ' ಹೆಸರು ಕೇಳಿದೊಡನೆ ಸಿ.ಬಸವಲಿಂಗಯ್ಯರ 'ಗಾಂಧಿ ಅಂಬೇಡ್ಕರ್' ನಾಟಕದ ನೆನಪಾಗಿ ರೋಮಾಂಚಿತವಾದರೂ ಮಂಡ್ಯ ಜಿಲ್ಲೆಗೆ ಸೇರಿದ ಪಾಂಡವಪುರದಿಂದ ತುಸು ದೂರದಲ್ಲಿ ಜನವಸತಿ ಪ್ರದೇಶಕ್ಕೆ ಬಹುದೂರದಲ್ಲಿ ಇರುವ 'ಕಾಗೆಮಂಟಿ' ಎಂಬ ಹಾಳುಗುಡ್ಡದಲ್ಲಿ ಪೂರಾ ರಾತ್ರಿ ನಾಟಕ ಇದೆ-ಯೆಂಬ ವಿಚಾರವೇ ಉತ್ಸಾಹಕ್ಕೆ ಭಂಗ ತಂದದ್ದು ಸುಳ್ಳಲ್ಲ. ಆದರೆ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಿರಿಯ ಸಹಪಾಠಿಯಾಗಿದ್ದ ಆ ದಿನಗಳಲ್ಲೆ ರಂಗ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ ಗಿರೀಶ್ ಮಾಚಳ್ಳಿ ನಿರ್ದೇಶನದ ನಾಟಕವೆಂದಾಗ ನೋಡಲೇಬೇಕಾದದ್ದೆನಿಸಿತು. ಹಲವಾರು ಮಿತ್ರರೂ ಸಹ ತಮ್ಮ ಮಾತುಕತೆಯಲ್ಲಿ 'ಆರ್ಯ-ದ್ರಾವಿಡ' ನಾಟಕ ಕಟ್ಟುವ ಪ್ರಕ್ರಿಯೆಯಲ್ಲಿ ಗಿರೀಶ್‌ರ ತಂಡದ ಪರಿಶ್ರಮವನ್ನು ಬಿಚ್ಚಿಟ್ಟಾಗ, ಜೊತೆಗೆ ನಾಗರೀಕತೆಯ ಹುಟ್ಟಿನ ಇತಿಹಾಸದೊಂದಿಗೆ, ನಾಡಿನ ಮೂಲನಾಗರೀಕರ ಮೇಲೆ ವಿದೇಶಿ ಆರ್ಯರ ದುರಾಕ್ರಮಣದ ಕಥನದ ನಿರೂಪಣೆ ನಾಟಕದ ಮುಖ್ಯ ಆಶಯವೆಂದಾಗ ನಾಟಕ ನೋಡಲೇಬೇಕೆಂಬ ತಹತಹಿಕೆ ಶುರುವಾಗಿತ್ತು.

ನಾಟಕದ ದ್ವಿತೀಯ ಪ್ರದರ್ಶನ ವೀಕ್ಷಿಸಲು ಸಜ್ಜಾಗುತ್ತಿದ್ದಾಗ ಕಾಕತಾಳೀಯವೆಂಬಂತೆ ಅದರ ಹಿಂದಿನ ರಾತ್ರಿಯೆ ಕಾರ್ಯನಿಮಿತ್ತ ಕಾಗೆಮಂಟಿಗೆ ತೆರಳಿ ನಾಟಕದ ರಂಗಸ್ಥಳಗಳ ವಿನ್ಯಾಸವನ್ನು ನೋಡಿದಾಗ ರಂಗ ತಂಡದ ಪರಿಶ್ರಮ ಎದ್ದು ಕಂಡಿತು. ಜನವಸತಿಯಿಂದ ದೂರಾಗಿ ಹಾಳುಗುಡ್ಡವಾಗಿದ್ದ ಕಾಗೆಮಂಟಿಯನ್ನು ಸತತ ಎರಡು ವರ್ಷಗಳಿಂದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಸಮೂಹವಾಗಿರುವ ತಮ್ಮ ತಂಡದ ಸಹಕಾರದಿಂದ ನಿರ್ದೇಶಕರು ದ್ರಾವಿಡರ ಮೂಲ ನಾಗರೀಕ ಸಮಾಜದಂತೆಯೇ ಕಡೆದದ್ದನ್ನು ಕಂಡು ನಿಬ್ಬೆರಗಾಗುವ ಸರದಿ ನನ್ನದಾಗಿತ್ತು.

ಯೋಜನೆಗನುಗುಣವಾಗಿ ಮರುದಿನದ ಸಂಜೆ ಗೆಳೆಯನೊಂದಿಗೆ ಮೈಸೂರಿನಿಂದ ಬೈಕ್‌ನಲ್ಲಿಯೆ 8 ಗಂಟೆ ಸುಮಾರಿಗೆ ಕಾಗೆಮಂಟಿಗೆ ತೆರಳಿದರೆ ನಾಟಕ ಪ್ರಿಯರ, ಜೊತೆಗೆ ನಿಜ ಇತಿಹಾಸ ತಿಳಿಯಲು ತವಕಿಸುತ್ತಿರುವ ಬಹುದೊಡ್ಡ ಜನಸಮೂಹವೇ ಅಲ್ಲಿ ನೆರೆದಿತ್ತು. ಟಿಕೇಟ್ ಪಡೆದು ಪಾರ್ಲಿಮೆಂಟ್ ಭವನದ ಮಾದರಿಯಲ್ಲಿದ್ದ ಪ್ರವೇಶದ್ವಾರದಿಂದ ಒಳನಡೆದಾಗ ಹೆಜ್ಜೆಗಳು ವರ್ತಮಾನದಿಂದ ಹಿಮ್ಮುಖವಾಗಿ ಸರಿದಂತೆ ಭಾಸವಾಗತೊಡಗಿತು. ಅದಾಗಲೇ ಹಲವಾರು ಮಂದಿ ಒಳಗೆ ಸೇರಿ ಸಿದ್ಧಸೂತ್ರವನ್ನು ಮುರಿದಂತಿದ್ದ ಪ್ರೇಕ್ಷಕರ ಸ್ಥಳದಲ್ಲಿ ಜಮಾಯಿಸಿದ್ದರು. ಆರ್ಯರ ಆಗಮನದ ಮೊದಲು ಹಾಗೂ ಆಕ್ರಮಣದ ನಂತರ ದ್ರಾವಿಡರ ವಾಸದ ನೆಲೆಗಳ ರಂಗ ಪರಿಕಲ್ಪನೆಯೆ ಜೀವದಳೆದು ಬೆರಗಾಗಿಸುತ್ತಿತ್ತು.

ನಾಟಕದ ಆರಂಭಕ್ಕೆ ಮೊದಲು ನಾಡಿನ ಹಲವಾರು ಪ್ರಜ್ಞಾವಂತ ವಿಚಾರವಾದಿಗಳು ನಾಟಕದ ಆಶಯವನ್ನು ಬಿಚ್ಚಿಡುವುದರ ಜೊತೆಗೆ ಪ್ರೇಕ್ಷರು ಆರ್ಯ-ದ್ರಾವಿಡವನ್ನು ಅರ್ಥೈಸಿಕೊಳ್ಳುವ ಬಗೆ ಹೇಗೆಂದು ಪೀಠಿಕೆ ಹಾಕಿಕೊಟ್ಟರು.

ನಂತರದಲ್ಲಿ ಶುರುವಾದದ್ದೆ ದ್ರಾವಿಡರ ಯಶೋಗಾಥೆ. ಆರ್ಯ ದುರಾಕ್ರಮಣದ ಕಥೆ. ಹರಪ್ಪ-ಮೆಹೆಂಜೋದಾರೋಗಳಲ್ಲಿ ನಲೆಗೊಂಡಿದ್ದ ಸಿಂಧೂ ನಾಗರೀಕತೆಯ ಮೂಲನಿವಾಸಿಗಳಿಂದ ನಾಗ ಜನಾಂಗ ಅಥವಾ ದ್ರಾವಿಡರು ರೂಢಿಸಿಕೊಂಡಿದ್ದ ಮಾತೃಪ್ರಧಾನ ಸಂಸ್ಕೃತಿಯ ಘನತೆ, ಹೆತ್ತಯ್ಯ-ಹೊತ್ತಯ್ಯಗಳೆಂಬ ಸೂತ್ರಧಾರಿ ರೂಪದ ದ್ರಾವಿಡ ಹಿರಿಯರು ತಮ್ಮ ಉಪಸ್ಥಿತಿಯಲ್ಲೇ ನಡಿಗೆಯ ಪಾತ್ರಗಳಾಗಿ ದ್ರಾವಿಡರ ಪ್ರಕೃತಿ ಆರಾಧನೆಯ ಶ್ರೇಷ್ಠತೆಗಳನ್ನು ಸಾದರಪಡಿಸುತ್ತಾ ನಡೆದರು.

ಹೀಗೆ ಸಹಬಾಳ್ವೆ-ಸುಸಂಸ್ಕೃತ ಬದುಕಿನ ಸಂಗಮದಲ್ಲಿ ಪ್ರಕೃತಿಯ ಒಡನಾಟದೊಂದಿಗೆ ಮೃಣನೆಂಬ ದ್ರಾವಿಡೋತ್ತಮನ ನಾಯಕತ್ವದಲ್ಲಿ ಸ್ವಚ್ಛಂದ ಬದುಕನ್ನು ಸಂಭ್ರಮಿಸುತಿದ್ದ ದ್ರಾವಿಡರ ನೆಲಕ್ಕೆ, ಜಾನುವಾರುಗಳಿಗೆ ಮೇಟನ್ನರ ಮತ್ತು ಮಧ್ಯೇಷ್ಯಾದಿಂದ ಭಾರತದೆಡೆಗೆ ಬಂದ ಮದ್ಯ ಮತ್ತು ಮಾಂಸಪ್ರಿಯ ಜನ ಆರ್ಯಜನಾಂಗ ಪ್ರವೇಶಿಸುತ್ತದೆ. ಮುಂದುವರೆದಂತೆ ಮುಗ್ಧ ದ್ರಾವಿಡ ಧರೆಯನ್ನು ಕಬಳಿಸಲು ಕುತಂತ್ರ ಆರ್ಯರು ನಡೆಸುವ ಸಂಚುಗಳು ವಿಶದವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಆರ್ಯರ ಸಂಚಿನಿಂದ ದ್ರಾವಿಡ ಮುಖಂಡನಾದ ಮೃಣ ಶಿವನಾಗಿ ಬದಲಾಗಿ ಆರ್ಯರ ರುದ್ರದೇವನಾಗಿ ರೂಪಾಂತರಗೊಂಡ ಐತಿಹಾಸಿಕ ದುರಂತದ ರೌರವ ಚಿತ್ರಣ ಮನತಾಗುತದೆ. ಸಾಮಾನ್ಯನಿಗೆ ಅಸಮಾನ್ಯತೆಯನ್ನು ಆರೋಪಿಸಿ ದೈವತ್ವದ ಪಟ್ಟ-ಕೇರಿಸಿ ನಿರ್ವೀರ್ಯಗೊಳಿಸಿದ ಆರ್ಯರ ಸಂಚು ಸಶಕ್ತವಾಗಿಯೆ ಪ್ರೇಕ್ಷಕ ಗಣಕ್ಕೆ ಧಾಟಿತು.

ನಾಟಕದ ನಡಿಗೆ ಮುಂದುವರೆದಂತೆ ದ್ರಾವಿಡ ನಾಯಕರುಗಳಾದ, ಮಹಿಷಾಸುರ, ಬಲಿ ಮುಂತಾದವರನ್ನು ದುಷ್ಟ ಆರ್ಯರು ಸಂಚಿನಿಂದ ಹಣಿದ ಬಗೆಯನ್ನು ಕಲಾವಿದರು ಸಶಕ್ತವಾಗಿ ಅಭಿವ್ಯಕ್ತಿಸಿದರು.

ನಾಟಕದ ನಡಿಗೆ ಬಿರುಸಾದಂತೆ ಬೌದ್ಧಧಮ್ಮದ ಮಹಾನ್ ಪೋಷಕರಾದ ಮೌರ್ಯ ದೊರೆಗಳ ಪ್ರಜಾಭಿಮುಖಿ ಆಡಳಿತ, ಭಾರತದಲ್ಲಿ ಬಹುಸಂಖ್ಯಾತರಾಗಿದ್ದ ನಿರುಪದ್ರವಿ, ಮುಗ್ಧ ಜೀವನ್ಮುಖಿ ಬೌದ್ಧಬಿಕ್ಕುಗಳ ಮೇಲೆ ದುಷ್ಟ ಶಂಕರಾಚಾರ್ಯನ ಪಡೆ-ಯ ಅಟ್ಟಹಾಸದಿಂದಾಗಿ ಬೌದ್ಧದಮ್ಮ ಭಾರತದಲ್ಲಿ ಅವಸಾನದತ್ತ ಸಾಗಿದ ದುರಂತ ವ್ಯಥೆ, ಜೀವವಿರೋಧಿ ಭ್ರಷ್ಟ ಮನುಧರ್ಮ ಶಾಸದ ರಚನೆ ಮತ್ತು ರಚಿಸಿದ ಮನುವಿನ ಹೀನತನಗಳ ಪರಿಚಯವನ್ನು ಪ್ರೇಕ್ಷಕರಿಗೆ ಮಾಡಿಸಿ ಕೊಳಕು ಹಿಂದುಧರ್ಮವನ್ನು ಬೆತ್ತಲಾಗಿಸಲು ಪರಮ ನೀಚ ಆರ್ಯರ ಭೋಗಲಾಲಸೆಗಳೆ ಪ್ರಧಾನವಾಗಿದ್ದ ಯಜ್ಞ-ಯಾಗಗಳಲ್ಲಿ ನಡೆಯುತ್ತಿದ್ದ ಪ್ರಾಣಿವಧೆ, ಸುರಪಾನ, ಅಶ್ವಮೇದಯಾಗವೆಂಬ ಧೂರ್ತ ಯಜ್ಞದಲ್ಲಿ ಸ್ತ್ರೀಯರ ಮೇಲಾಗುತ್ತಿದ್ದ ಪರಮವಿಕೃತ ಲೈಂಗಿಕ ದೌರ್ಜನ್ಯದ ಪರಾಕಾಷ್ಠೆಗಳನ್ನು ನೈಜವಾಗಿ ಕಟ್ಟಿಕೊಟ್ಟ 'ಆರ್ಯ-ದ್ರಾವಿಡ'ದ ಶ್ರಮ ನಿಜಕ್ಕೂ ಅಭಿವಂದನಾರ್ಹ.

ಶತಮಾನಗಳು ಕಳೆದಂತೆ, ಚೈತ್ರಗಳು ಅಳಿದಂತೆ ನಾಡಿನ ನಿಜದೊರೆಗಳಾದ ದ್ರಾವಿಡರು ಗುಲಾಮರಾಗಿ ಬದಲಾದ ನೋವಿನ ಚಿತ್ರಣ ನಾಟಕದುದ್ದಕ್ಕೂ ಪ್ರವಹಿಸಿ ನೆರೆದಿದ್ದ ಪ್ರೇಕ್ಷಕರಲ್ಲಿ ವಾಸ್ತವತೆಯ ಕೋಲ್ಮಿಂಚೊಂದು ಹಾಯಲು ಕಾರಣವಾಗಿದ್ದ ಮುಚ್ಚಿದ ಹಾಳೆಗಳ ಹಿಂದಿರುವ ನಿಜ ಇತಿಹಾಸ ಮತ್ತು ಅದನ್ನು ಬಿಚ್ಚಿಟ್ಟ ಪರಿಪಕ್ವ ರಂಗಾಭಿನಯ.

ಚಲನಶೀಲತೆಯ ಪ್ರತೀಕವಾದ ನದಿಯೊಂದು ಕಡಲ ಮಡಿಲು ಸೇರುವವರೆಗೂ ವಿರಮಿಸದ ರೀತಿಯಲ್ಲಿ ನಿರ್ದೇಶಕರು ನಾಟಕದ ಓಘಕ್ಕೆ ಧಕ್ಕೆ ಬಾರದಂತೆ ಮಾನವತಾವಾದಿ ಬಸವನ ಅನುಭವ ಮಂಟಪದ ಮೂಲಕ ಹಾಯ್ದು, ಸಮಾಜದ ಜಾತಿಪ್ರಜ್ಞೆಯನ್ನು ಓರೆಗೆ ಹಚ್ಚುತ್ತಲೆ ಸ್ವಾತಂತ್ರ್ಯಪೂರ್ವ ಭಾರತದ ಕಾಲಘಟ್ಟಕ್ಕೆ



ದಾಪುಗಾಲು ಇಡುತ್ತಾರೆ.

ನಾಡಿನ ನೊಂದವರಿಗೆ ಅಕ್ಷರ ಸಂಸ್ಕೃತಿಯಿಂದ ಬಹುದೂರವಿದ್ದ ಶೋಷಿತರಿಗೆ 'ಅರಿವಿ'ನ ಮಹತ್ವ ಸಾರಿದ ಮಹಾತ್ಮ ಜ್ಯೋತಿಬಾಫುಲೆ ಮತ್ತು ಸಾವಿತ್ರಿಬಾಯಿ ಫುಲೆ, ಅಸ್ಪೃಶ್ಯರ ಅಕ್ಷರದ ಕನಸಿಗೆ ರೆಕ್ಕೆ ಕಟ್ಟಿದ ಶಾಹು ಮಹಾರಾಜ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಮಾನವೀಯ ಮುಖಗಳು, ಅಲ್ಲಿಯವರೆಗೂ ಆರಂಭದಿಂದ ಆರ್ಯರ ದೌರ್ಜನ್ಯ-ದಬ್ಬಾಳಿಕೆಗಳನ್ನೇ ವೀಕ್ಷಿಸಿ ಅಸಮಾನತೆಯ ವಿರುದ್ಧ ಕುದಿಯುತ್ತಿದ್ದ ಪ್ರೇಕ್ಷಕ ವರ್ಗಕ್ಕೆ ಓಯಸಿಸ್ ಅನುಭವ ದಕ್ಕಿಸಿಕೊಡುವಲ್ಲಿ ಯಶ್ವಸಿಯಾದವು.

'ಆರ್ಯ-ದ್ರಾವಿಡ' ಸಂಘರ್ಷದ ಮುಂದುವರಿಕೆಯಲ್ಲಿ ನಾಡಿನ ಶೋಷಿತರ ಸ್ವಾಭಿಮಾನದ ಮಹಾನ್ ದನಿ ಅಂಬೇಡ್ಕರರ ಪ್ರವೇಶ ಸುದೀರ್ಘ ಅವಧಿಯ ಕಾರಣಕ್ಕಾಗಿ ಶಕ್ತಿಯೊಂದು ಪ್ರವೇಶಿಸಿದಂತಾಗಿ ಉಲ್ಲಸಿತರಾಗತೊಡಗಿದರು. ಬ್ರಾಹ್ಮಣರು ಮತ್ತು ಬನಿಯಾಗಳ ಕುತಂತ್ರದ ಕೂಸಾದ 'ಪೂನಾ ಒಪ್ಪಂದ' ದಲಿತರ ಸ್ವಾಭಿಮಾನ ಮರುಗಳಿಕೆಗೆ ಬಾಬಾಸಾಹೇಬರ ಅವಿರತ ಹೋರಾಟ, ಹೋರಾಟದ ಫಲ ದಕ್ಕದಂತೆ ಮಾಡಲು ಸ್ವಾತಂತ್ರ್ಯ ಚಳುವಳಿಯ ಮುಂದಾಳು 'ಮಹಾತ್ಮ'ರ ಕುತಂತ್ರಗಳು ನೈಜವಾಗಿ ಅನಾವರಣಗೊಂಡವು.

ನಾಟಕದ ಒಟ್ಟಂದಕ್ಕೆ ಮುಕುಟಪ್ರಾಯವಾಗಿ ಬಾಬಾ ಸಾಹೇಬರ ಸಂವಿಧಾನ, ಸಂವಿಧಾನದ ಆಶಯಗಳ ನಿರೂಪಣೆ ನಾಡಿನ ದಮನಿತ ವರ್ಗಕ್ಕೆ ಭರವಸೆಯ ಬೆಂಗಾವಲು ಬೆಳಕಾದದ್ದರ ನಿಜ ಚರಿತೆ ಅನಾವರಣಗೊಳಿಸಿದ್ದು ನಿರ್ದೇಶಕರ ಸೂಕ್ಷ್ಮ ಸಹೃದಯತೆಯ ಪ್ರತಿಬಿಂಬ

ಇಷ್ಟು ಮಾತ್ರ ಹೇಳಿ, ಐತಿಹಾಸಿಕ ನಾಟಕ ಕಟಿದ ಸೃಜನಶೀಲ 'ಚಾರ್ವಾಕ ಬಳಗ'ದ ಕುರಿತು ಹೇಳದಿದ್ದರೆ ದ್ರೋಹವಾದೀತು. ಎಳೆವಯಸ್ಸಿನ, ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ಯುವ ಪಡೆ ಗಿರೀಶ್ ಮಾಚಳ್ಳಿಯವರ ಐತಿಹಾಸಿಕ ನಾಟಕದ ಕನಸಿಗೆ ಬೆನ್ನೆಲುಬಾಗಿ ನಿಂತದ್ದು ಅಭಿನಂದನೀಯ. 'once in a life time' ಎನ್ನುವಂತೆ ಪ್ರೇಕ್ಷಕರು ನಾಟಕದ ಅಂತ್ಯದಲ್ಲಿ ಧನ್ಯತಾಭಾವ ಪ್ರದರ್ಶಿಸಿದ್ದು ನಾಟಕದ ಅಮೋಘ ಯಶಸ್ಸಿಗೆ ಸಾಕ್ಷಿಯಾಗಿ ದಾಖಲಾದದ್ದು ವಾಸ್ತವ.

ಕಾರ್ಮಿಕರು ಮತ್ತೆ ಮತ್ತೆ ನೆನೆಯಬೇಕಾದ ನೇತಾರ

■ ಡಾ.ಎಸ್.ನರೇಂದ್ರಕುಮಾರ್

ಮೇ ಒಂದು ಕಾರ್ಮಿಕರ ದಿನಾಚರಣೆ. ವಿಶ್ವದಾದ್ಯಂತ ಕಾರ್ಮಿಕರ ಬಗೆಗಿನ ಅಸಂಖ್ಯಾತ ವಿಚಾರಗಳು ಅಂದು ಚರ್ಚೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರ ಹಕ್ಕುಗಳಿಗಾಗಿ ತಮ್ಮನ್ನು ತೊಡಗಿಸಿಕೊಂಡ ಅನೇಕಾನೇಕ ನೇತಾರರನ್ನು ನೆನಪಿಸಿಕೊಳ್ಳಲಾಗುತ್ತದೆ. ಭಾರತವೂ ಇದಕ್ಕೆ ಹೊರತಲ್ಲ. ಕಾರ್ಮಿಕರ ವಿಮೋಚನೆಗಾಗಿ ತೆತ್ತುಕೊಂಡ ಹಲವಾರು ಚಿಂತಕರನ್ನು ನೆನೆಯುವ ಈ ಹೊತ್ತಿನಲ್ಲಿ ಡಾ. ಅಂಬೇಡ್ಕರ್ ಅವರನ್ನು ಸಹ ನೆನಪಿಸಿಕೊಳ್ಳಬೇಕಾಗಿದೆ.

ಬಹುಪಾಲು, ದಲಿತರ ಬಿಡುಗಡೆಯ ನಾಯಕರೆಂಬ ಚೌಕಟ್ಟಿನಲ್ಲಿ ಹೆಚ್ಚಾಗಿ ಗುರುತಿಸಲ್ಪಡುವ ಅರ್ಥೈಸಲ್ಪಡುವ ಏಕರೂಪಿ ವಿಶ್ಲೇಷಣೆ ಅಂಬೇಡ್ಕರ್ ಅವರ ಬಗೆಗೆ ಈವರೆಗೆ ನಡೆದುಹೋದದ್ದರಿಂದ, ಇದನ್ನೂ ಮೀರಿದ ಅಂಬೇಡ್ಕರ್ ಅವರ ಹೋರಾಟ ಹಾಗೂ ವಿಚಾರಧಾರೆಗಳನ್ನು ಗ್ರಹಿಸಲು ಸರಿಯಾಗಿ ಸಾಧ್ಯವಾಗುತ್ತಿಲ್ಲ. ಆದರೆ ದಲಿತರೇ ಮಾತ್ರವಲ್ಲ, ಅಸಂಖ್ಯಾತ ಶೋಷಿತರ ಹಾಗೂ ಮಹಿಳಾ ಬಿಡುಗಡೆಗೆ ಹೇಗೆ ಅಂಬೇಡ್ಕರ್ ಪರಿಶ್ರಮವಿದೆಯೋ ಹಾಗೆಯೇ ಕಾರ್ಮಿಕರ ಬಿಡುಗಡೆಗೂ ಅಂಬೇಡ್ಕರ್ ಶ್ರಮಿಸಿದ್ದು ವಿಶೇಷ.

ಜಗತ್ತಿನ ಬೇರೆ ಬೇರೆ ಪ್ರದೇಶಗಳಿಗಿಂತ ಭಾರತ ಹೇಗೆ ಕಾರ್ಮಿಕರ ಹಿನ್ನೆಲೆಯಲ್ಲಿ ಸಂಕೀರ್ಣತೆಯಿಂದ ಕೂಡಿದೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕಾದ ಅಗತ್ಯದ ಹೊಸದೃಷ್ಟಿ ನೀಡಿದವರು ಅಂಬೇಡ್ಕರ್. ವಿದೇಶಿಕೇಂದ್ರಿತ ವರ್ಗನೆಲೆಯಲ್ಲೇ ಭಾರತದ ಕಾರ್ಮಿಕರ ಸ್ಥಿತಿಗತಿಗಳನ್ನು ಅರ್ಥೈಸುವ ಬಗೆಗೆ ಅಂಬೇಡ್ಕರ್ ಅವರಿಗೆ ತೀವ್ರ ವಿರೋಧವಿತ್ತು. ಕಾರ್ಮಿಕರ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಹಿನ್ನೆಲೆಯ ಬಹುಪಾಲು ಭಾರತೀಯ ಚಿಂತಕರು ಭಾರತವನ್ನು ನೋಡುವ ದೃಷ್ಟಿಕೋನಕ್ಕೂ ಅಂಬೇಡ್ಕರ್ ಅವರು ಕಂಡಿರುವ ಬಗೆಗೂ ವ್ಯತ್ಯಾಸವಿದೆ. ತಾರತಮ್ಯವೆಂಬುದು ಭಾರತದಲ್ಲಿ ಜಾತಿ ಶ್ರೇಣೀಕರಣದೊಂದಿಗೇ ಶ್ರಮ ಶ್ರೇಣೀಕರಣವನ್ನೂ ಒಳಗೊಂಡಿದ್ದು, ಈ ಶ್ರೇಣೀಕರಣ ಕಾರ್ಮಿಕರ ನಡುವೆ ಜಾತಿಯಾಧಾರಿತ ಶಾಶ್ವತ ವರ್ಗ ವಿಭಾಗಗಳನ್ನು ಸೃಷ್ಟಿಮಾಡಿದೆ ಎಂಬುದನ್ನು ಅಂಬೇಡ್ಕರ್ ಸ್ಪಷ್ಟವಾಗಿ ತಿಳಿಸಿದರು.

ಜಾತಿ ಕಾರಣದ ಶ್ರಮ ತಾರತಮ್ಯವನ್ನು ಸರಿಯಾಗಿ ಗ್ರಹಿಸದ ಆದರೆ ಕಾರ್ಮಿಕರ ಪರ ಹೋರಾಟ ರೂಪಿಸುವ ಭಾರತದ ಸಮಾಜವಾದಿಗಳ ಬಗೆಗೆ ಅಂಬೇಡ್ಕರ್ ಸಾತ್ವಿಕ ಸಿಟ್ಟಿನಿಂದ ಮಾತನಾಡಿರುವುದು ಗಮನಾರ್ಹ: "ಅವರು ಈ ನೆಲದ ವಾಸ್ತವತೆಯಿಂದ ಬಹಳ ದೂರದಲ್ಲಿದ್ದಾರೆ. ಈ ಜಗತ್ತಿನಲ್ಲಿ ಎರಡು ವರ್ಗಗಳಿವೆ. ಶ್ರೀಮಂತರು-ಬಡವರು. ಶೋಷಕರು-ಶೋಷಿತರು, ಮಧ್ಯಮ ವರ್ಗವೂ ಇದೆ. ಆದರೆ ಅದು ತೀರಾ ಸಣ್ಣದು. ಶ್ರೀಮಂತರ ಸಿರಿತನ ಬಡವರ ಬವಣೆಯಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು, ಇಂಥ ಸಂಘಟನೆ ಮಾತ್ರ ಬಡವರನ್ನು, ಶ್ರಮಿಕರನ್ನು ಪ್ರತಿನಿಧಿಸಲು ಯೋಗ್ಯ ಹಾಗಾದಾಗ ಎಲ್ಲರೂ ಎಲ್ಲವನ್ನೂ ಹಂಚಿಕೊಳ್ಳಬಹುದು. ಆಗ ಮಾತ್ರ ಸಂಪತ್ತನ್ನು ಉತ್ಪಾದಿಸುವ ಜನ ಹಸಿವೆಯಿಂದ ಸಾಯುವುದಿಲ್ಲ" ಎಂದು ತಿಳಿಸಿದ್ದಾರೆ.

ಅಲ್ಲದೆ ಆರ್ಥಿಕ ಸಮಾನತೆ ಸಾಧಿಸಿದರೆ ಎಲ್ಲವೂ ಸರಿಯಾಗುತ್ತದೆ ಎಂದೇ ನಂಬಿದ ಸಮಾಜವಾದಿಗಳನ್ನು ಕುರಿತು "ಆರ್ಥಿಕ ಸಮಾನತೆ ತರಲು ಅಧಿಕಾರವಿರಬೇಕು. ಈ ಅಧಿಕಾರ ಕೂಡ ದುಡಿಯುವ ವರ್ಗದ ಕ್ರಾಂತಿಯಿಂದ ಬರಬೇಕಾದದ್ದೆ. ಆದರೆ ಈ ಕ್ರಾಂತಿಯನ್ನು ಮಾಡಲು ಭಾರತದ ದುಡಿಯುವ ವರ್ಗದವರೆಲ್ಲರೂ ಜೊತೆಗೂಡುತ್ತಾರೆಯೇ? ಬೇರೆಲ್ಲಾ ಸರಿಯಿದ್ದು ಕ್ರಾಂತಿಯ ನಂತರ ಎಲ್ಲರೂ ಸಮಾನರು ಜಾತಿ-ವರ್ಣ ಭೇದಗಳಿರುವುದಿಲ್ಲ ಎಂದಾದ-ರೆ ಶೋಷಿತರೆಲ್ಲರೂ ಸಮಸಮಾಜ ತರುವ ಈ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಇದಕ್ಕೆ ಕೇವಲ ಸಮಾಜವಾದಿಯೊಬ್ಬನ ಭರವಸೆಯೊಂದೇ ಸಾಕಾಗುವುದಿಲ್ಲ" ಎಂದೂ ಮಾರ್ಮಿಕವಾಗಿ ಅಭಿಪ್ರಾಯಪಟ್ಟಿದ್ದಾರೆ. ಜಾತಿಯ ಕಾರಣವಾಗಿ ಶ್ರಮಿಕರು ಒಂದಾಗದ ನಿಜಸ್ಥಿತಿಯ ಬಗೆಗೆ ಅಂಬೇಡ್ಕರ್ ತೀವ್ರ ವಿಷಾದ ವ್ಯಕ್ತಪಡಿಸುತ್ತಾರೆ. ಶ್ರಮಿಕರು ತಮ್ಮ ತಮ್ಮ ಜಾತಿಪ್ರಜ್ಞೆಯನ್ನು ಮೀರಿ ಸಂಘಟಿತರಾಗಿ ಹೋರಾಡಿದರೆ ನ್ಯಾಯ ದೊರೆಯುತ್ತದೆಂಬ ನಂಬಿಕೆ ಅಂಬೇಡ್ಕರ್ ಅವರದಾಗಿತ್ತು. ಈ ಕಾರಣವಾಗಿಯೇ ತೀರಾ ನಿರ್ಲಕ್ಷ್ಯಕ್ಕೆ ಒಳಗಾದ ಶ್ರಮಿಕರನ್ನು ಸಂಘಟಿಸಲು, ಅವರ ಪರವಾಗಿ ನ್ಯಾಯಬದ್ಧ ಹೋರಾಟ ರೂಪಿಸಲು ಸ್ವತಃ ತಾವೇ ಪರಿಶ್ರಮಿಸಿದರು.

ಜಾತಿಯಾಧಾರಿತ ಶ್ರಮ ಶ್ರೇಣೀಕರಣ ವ್ಯವಸ್ಥೆಯಲ್ಲಿ ಹೆಚ್ಚಿನ ಶೋಷಿತರು, ಸಹಜವಾಗಿ ಈ ನೆಲದ ತಳಸಮುದಾಯಗಳೆಂದು ಕಡೆಗಣಿಸಲ್ಪಟ್ಟ ಜನಸಮುದಾಯಗಳಾಗಿವೆ. ಇಂತಹ ಸಮುದಾಯಗಳನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಸತತವಾಗಿ ಶ್ರಮಿಸಿದರು. ಈ ನಿಟ್ಟಿನಲ್ಲಿ 1936ರಿಂದ 1946ರ ಅವಧಿಯು ಅವರು ಕಾರ್ಮಿಕರ ಪರ ಅರ್ಥಪೂರ್ಣ ಹೋರಾಟವನ್ನು ರೂಪಿಸಿದ ಕಾಲಘಟ್ಟವೆಂದೇ ಗುರುತಿಸಲು ಸಾಧ್ಯ. 1936ರಲ್ಲಿ ಅಂಬೇಡ್ಕರ್ 'ಸ್ವತಂತ್ರ ಕಾರ್ಮಿಕ ಪಕ್ಷ' (Independent Labour Party) ಎಂಬ ರಾಜಕೀಯ ಸಂಘಟನೆಯನ್ನು ಹುಟ್ಟು ಹಾಕಿದರು. ಆದರೆ ಅಂಬೇಡ್ಕರ್ ಅವರಿಗೆ ಇದೊಂದು ರಾಜಕೀಯ ಪಕ್ಷ ಮಾತ್ರವೇ ಆಗಿರಲಿಲ್ಲ. ಈ ಮೂಲಕ ಎಲ್ಲಾ ಹಿನ್ನೆಲೆಯ ಕಾರ್ಮಿಕರ ಹಿತರಕ್ಷಣೆ ಮಾಡುವುದು ಅವರ ಬಹುದೊಡ್ಡ ಕಾಳಜಿಯಾಗಿತ್ತು. ಹಾಗಾಗಿ ಈ ಅವಧಿಯಲ್ಲಿ ಸಣ್ಣ ರೈತರು, ಕೃಷಿ ಕೂಲಿ ಕಾರ್ಮಿಕರು, ಜೀತಗಾರರು, ಬಿಟ್ಟಿ ದುಡಿಮೆಗಾರರು, ಗಿರಣಿ ಕಾರ್ಮಿಕರು, ಮಹಿಳಾ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ಅವರೆಲ್ಲರ ಸಂಘಟನಾತ್ಮಕ ಹೋರಾಟಕ್ಕೆ ವೇದಿಕೆ ಸಿದ್ಧಪಡಿಸಿದರು. ಈ ಪಕ್ಷದ ಸದಸ್ಯರು 1937ರಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ ಮುಂಬೈ ಪ್ರಾಂತ್ಯದಿಂದ ಸ್ಪರ್ಧಿಸುವ ಮೂಲಕ 17 ಸ್ಥಾನಗಳ ಪೈಕಿ 15ರಲ್ಲಿ ಜಯಶಾಲಿಯಾಗಿದ್ದು ಗಮನಾರ್ಹ. ಈ ಕಾರಣವಾಗಿ ಪ್ರಮುಖ ವಿರೋಧ ಪಕ್ಷವಾಗಿ ನೆಲೆ ಕಂಡುಕೊಂಡ ಬಳಿಕ ಮುಂಬೈ ಶಾಸನ ಸಭೆಯಲ್ಲಿ ಅನೇಕ ವಿಷಯಗಳನ್ನು ಅಂಬೇಡ್ಕರ್ ಚರ್ಚಿಸಿದರು.

ರೈತರನ್ನು ಕಾರ್ಮಿಕರನ್ನಾಗಿ ಅಂಬೇಡ್ಕರ್ ಕಂಡ ಹಾಗೂ ವಿಶ್ಲೇಷಿಸಿದ ಬಗೆ ವಿಶೇಷವಾದುದು. ಪ್ರಜಾಪ್ರಭುತ್ವದಲ್ಲಿ ಕೃಷಿಯನ್ನು ಸರ್ಕಾರಿ ಕೈಗಾರಿಕೆ(State Industry)ಯಾಗಿ ರೂಪಿಸಬೇಕೆಂದು ಆಶಿಸಿದರು. ಭಾರತದಲ್ಲಿನ ಕೃಷಿಕೇಂದ್ರಿತ ಅಸಮಾನತೆ ಹಾಗೂ ಶೋಷಣೆಯ ಆಳ ಅಗಲಗಳನ್ನು ಬಲ್ಲವರಾಗಿದ್ದ ಅಂಬೇಡ್ಕರ್ ಭೂಮಿಯನ್ನೂ ರಾಷ್ಟ್ರೀಕರಣಗೊಳಿಸಲು ಒತ್ತಾಯಿಸಿದರು. ಈ ಮೂಲಕ ಭೂಮಾಲೀಕರ ಕ್ರೌರ್ಯವನ್ನು ನಿರ್ಮೂಲನಗೊಳಿಸುವ ಕನಸು ಅಂಬೇಡ್ಕರ್ ಅವರದು. ಇದಕ್ಕೆ ಪರ್ಯಾಯವಾಗಿ ಕೃಷಿ ಭೂಮಿಯನ್ನು ಕೃಷಿಯ ಬಗೆಗೆ ಆಸಕ್ತಿಯುಳ್ಳ ಎಲ್ಲಾ ಜಾತಿಯ ಕೃಷಿ ಕಾರ್ಮಿಕರಿಗೆ ಹಂಚಬೇಕೆಂದು ಬಯಸುತ್ತಾರೆ. ಅಲ್ಲದೆ ಅದನ್ನು ಸಣ್ಣ ಸಣ್ಣ ಹಿಡುವಳಿಗಳನ್ನಾಗಿ ಮಾಡಿ ಸಮುದಾಯ ಬೇಸಾಯ ಪದ್ಧತಿಗೆ ಪ್ರೇರೇಪಿಸುವ ಜೊತೆಗೆ ಕೃಷಿಗೆ ಬೇಕಾದ ಅವಶ್ಯಕ ಸಾಮಗ್ರಿಗಳನ್ನು (ಬಿತ್ತನೆ ಬೀಜ, ನೀರು, ಗೊಬ್ಬರ, ಉಳುಮೆಯ ಸಲಕರಣೆಗಳು) ಸರ್ಕಾರವೇ ಒದಗಿಸಬೇಕೆಂದು ಹೇಳುತ್ತಾರೆ. ಈ ಮೂಲಕ ಭೂಮಾಲೀಕರು ಹಾಗೂ ಮಧ್ಯವರ್ತಿಗಳಿಲ್ಲದ,

ಸರ್ಕಾರವೇ ಶೋಷಣಾರಹಿತ ಕೃಷಿ ಚಟುವಟಿಕೆ ನಡೆಸುವ ಆಶಯ ಅವರದು. ಇಷ್ಟೇ ಅಲ್ಲದೆ ರೈತರಿಗೆ ನಷ್ಟವಾಗದಂತೆ ಬೆಳೆಯ ಬೆಲೆಯನ್ನು ನಿಗದಿಪಡಿಸಬೇಕಲ್ಲದೆ ಕೃಷಿಕಾರ್ಮಿಕರಿಗೆ ಜಾತಿಯ ಹಾಗೂ ಲಿಂಗದ ಕಾರಣವಾಗಿ ಕೂಲಿ ತಾರತಮ್ಯವಿರಬಾರದು ಎಂದೂ ಪ್ರತಿಪಾದಿಸಿದ್ದಾರೆ. ಅಲ್ಲದೆ ರೈತರು ಕೊಡಬೇಕಾದ ಕಂದಾಯವನ್ನು ಬೆಳೆಯಲ್ಲಿ ಬಂದ ಲಾಭದ ಆಧಾರದ ಮೇಲೆ ಸರ್ಕಾರವು ಕಟ್ಟಿಸಿಕೊಳ್ಳಬೇಕೆಂದೂ ಹೇಳಿದ್ದಾರೆ. ಕೃಷಿಕಾರ್ಮಿಕರಿಗೂ ಶ್ರಮದ ಕಾಲ ನಿಗದಿ ಹಾಗೂ ಬಿಡುವು ಅಗತ್ಯವೆಂದು ಒತ್ತಾಯಿಸಿದ್ದಾರೆ. ಅಂಬೇಡ್ಕರ್ ಅವರ ಇಂತಹ ಚಿಂತನೆಗಳನ್ನೇ ಪ್ರಚಲಿತ ರೈತ ಚಳುವಳಿಯು ತನ್ನ ಹೋರಾಟದ ಭಾಗವಾಗಿ ತೆಗೆದುಕೊಂಡಿರುವುದನ್ನು ಗಮನಿಸಬಹುದು.

ಪರಿಶಿಷ್ಟ ಸಮುದಾಯಗಳನ್ನು ಬಿಟ್ಟಿ ಚಾಕರಿಯಲ್ಲಿ ತೊಡಗಿಸಿ ಕ್ರೂರವಾಗಿ ಹಿಂಸಿಸುವ ವತನ್‌ದಾರಿ ಕಾಯ್ದೆ ಹಾಗೂ ಖೋಟಿ ಪದ್ಧತಿಯನ್ನು ನಿಷೇಧಿಸಲು ಅಂಬೇಡ್ಕರ್ ಪರಿಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಪ್ರಬಲ ಹೋರಾಟವನ್ನೇ ರೂಪಿಸಿದರು. ಶ್ರಮಿಕರ ಈ ಬಗೆಯ ಅಪರಿಮಿತ ಶೋಷಣೆಯ ವಿರುದ್ಧ ತಾವು ತಂದ 'ಮೂಕನಾಯಕ', 'ಬಹಿಷ್ಕೃತ ಭಾರತ' ಹಾಗೂ 'ಜನತಾ' ನಿಯತಕಾಲಿಕೆಗಳಲ್ಲೂ ಕಾಲಕಾಲಕ್ಕೆ ಲೇಖನಗಳನ್ನು ಬರೆದು ಈ ಕುರಿತು ಜನಸಮುದಾಯಗಳಲ್ಲಿ ಎಚ್ಚರ ಮೂಡಿಸಲು ಸತತವಾಗಿ ಪ್ರಯತ್ನಿಸಿದರು. ಅಂದಿನ ಬ್ರಿಟಿಷ್ ಸರ್ಕಾರದ ಮಟ್ಟದಲ್ಲಿ ಈ ವಿಷಯ ಗಂಭೀರವಾಗಿ ಚರ್ಚೆಯಾಗುವಂತೆ ಮಾಡಿ ಇದನ್ನು ನಿಷೇಧಿಸುವ ಕಾನೂನುಗಳು ಜಾರಿಯಾಗಲು ನೆರವಾದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೂಲಭೂತ ಕೈಗಾರಿಕೆಗಳು, ಬೃಹತ್ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ಜೀವವಿಮೆ ಮೊದಲಾದ ಜವಾಬ್ದಾರಿಯುತ ಸಂಸ್ಥೆಗಳು ಸರ್ಕಾರದ ಅಧೀನದಲ್ಲೇ ಇರಬೇಕೆಂಬ ಪ್ರಬಲ ಪ್ರತಿಪಾದನೆ ಅಂಬೇಡ್ಕರ್ ಅವರದು. ಪ್ರಜಾಸತ್ತೆಯು ಖಾಸಗಿ ಒಡೆತನದ ಕೈಗಾರಿಕೆಗಳಿಗೆ ಉತ್ತೇಜನ ನೀಡಿದರೆ ಅವುಗಳ ಮಾಲೀಕರು ಏಕಸ್ವಾಮ್ಯದ ಹಿನ್ನೆಲೆ ಹಾಗೂ ಕೇವಲ ತಮ್ಮ ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿಗತಿಗಳ ಬಗೆಗೆ ಹೆಚ್ಚಾಗಿ ಮುತುವರ್ಜಿ ವಹಿಸುವುದಿಲ್ಲ ಎಂಬ ಆತಂಕ ಕೂಡ ಅಂಬೇಡ್ಕರ್ ಅವರದಾಗಿತ್ತು. ಪ್ರಜಾಸತ್ತೆಯಲ್ಲಿ ಎಲ್ಲಾ ಕಾರ್ಖಾನೆಗಳೂ ತನ್ನ ಕಾರ್ಮಿಕರಿಗೆ ಮೂಲಭೂತ ಸೌಕರ್ಯ, ಭವಿಷ್ಯನಿಧಿ, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ, ವಸತಿ ಗೃಹ, ಶ್ರಮಕ್ಕೆ ಅನುಗುಣವಾದ ವೇತನ, ಮಹಿಳೆ ಹಾಗೂ ಪುರುಷ ಕಾರ್ಮಿಕರ ನಡುವೆ ವೇತನ ತಾರತಮ್ಯ ಮಾಡದಿರುವುದು, ಮಹಿಳಾ ಕಾರ್ಮಿಕರಿಗೆ ಸಂಬಳಸಹಿತ ಹೆರಿಗೆ ರಜೆ, ಕಾರ್ಮಿಕರ ಮಕ್ಕಳ ಬದುಕನ್ನು ರೂಪಿಸಲು ಅಗತ್ಯವಾದ ಸೌಲಭ್ಯಗಳನ್ನು ಕುರಿತೂ ಅಂಬೇಡ್ಕರ್ ಚಿಂತನೆ ನಡೆಸಿದರು.

ಮೇಲ್ಕಂಡ ಅನೇಕ ವಿಷಯಗಳು ಅಂಬೇಡ್ಕರ್ ಅವರ ಒತ್ತಾಸೆಯ ಕಾರಣವಾಗಿ ಆಗಿನ ಮುಂಬೈ ಪ್ರಾಂತೀಯ ಸರ್ಕಾರದಲ್ಲಿ ಕಾನೂನುಗಳಾಗಿ ಜಾರಿಗೊಂಡವು. ಮಾತ್ರವಲ್ಲ, ಕಾರ್ಮಿಕರ ಹಿತರಕ್ಷಣೆಯ ಹಿನ್ನೆಲೆಯಲ್ಲಿ ಇಡೀ ದೇಶಕ್ಕೆ ಇವು ಮಾದರಿಯೆಂಬ ಚರ್ಚೆಯು ಆಗ ನಡೆದದ್ದು ಗಮನಾರ್ಹ. ಇನ್ನು ಕೆಲವು ವಿಚಾರಗಳು ಇಂದಿಗೂ ಚರ್ಚೆಯಾಗಬೇಕಾದವು.

1942ರಿಂದ 1946ರ ಅವಧಿಯಲ್ಲಿ ಆಗಿನ ಬ್ರಿಟಿಷ್ ಸರ್ಕಾರದ ಗೌರ್ನರ್ ಜನರಲ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಕಾರ್ಮಿಕ ಮಂತ್ರಿಯಾಗಿಯೂ ಅಂಬೇಡ್ಕರ್ ಕೆಲಸ ನಿರ್ವಹಿಸಿದರು. ಈ ಅವಧಿಯಲ್ಲೂ ಸಹ ಕಾರ್ಮಿಕರ ಪರವಾದ ಹಲವಾರು ಕಾನೂನುಗಳು ಜಾರಿಗೆ ಬರಲು ಕಾರಣರಾದರು. ಇವುಗಳ ಗುರುತಿಸುವಿಕೆಯು ಇಂದು ಅತ್ಯಗತ್ಯವಾಗಿದೆ.

1943ರ ಕಾರ್ಮಿಕ ಸಮ್ಮೇಳನವೊಂದರಲ್ಲಿ ಕಾರ್ಮಿಕ ಸಚಿವ ಅಂಬೇಡ್ಕರ್ ಅವರು ಮಾಡಿದ ಭಾಷಣದ ಮಾತುಗಳಿವು: "ಭಾರತದ ಸಕಲ ಕಾರ್ಮಿಕರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು, ಕೆಲಸ ಮಾಡಿಸುವ-ಕೆಲಸ ಕೊಡುವ ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧರಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೆ ಹೋದರೆ ಕಾರ್ಮಿಕರ ಕಲ್ಯಾಣದ ಸಮಸ್ಯೆ ಎಂದಿಗೂ ನಿವಾರಣೆಯಾಗಲು ಸಾಧ್ಯವಿಲ್ಲ". ಅಂಬೇಡ್ಕರ್ ಅವರ ಈ ಮಾತುಗಳು ಕಾರ್ಮಿಕರ ಪರವಾದ ನ್ಯಾಯದ ಹಿನ್ನೆಲೆಯಲ್ಲಿ ಇಂದಿಗೂ ಪ್ರಸ್ತುತವೆನ್ನಿಸುತ್ತವೆ.

ಇಂದು; ನಮ್ಮ ದೇಶದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳ ಹೆಸರಲ್ಲಿ ಬೃಹತ್ ಕೈಗಾರಿಕೆಗಳು, ಬೃಹತ್ ಉದ್ಯಮಗಳು, ವಿಶೇಷ ಆರ್ಥಿಕ ವಲಯಗಳು (SEZ) ತಲೆಯೆತ್ತಿವೆ. ಇವುಗಳಲ್ಲಿ ಬಹುಪಾಲು ಕೈಗಾರಿಕೋದ್ಯಮಗಳು ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ಆಶಯಗಳಿಗೆ ಭಿನ್ನವಾದ ತಮ್ಮದೇಯಾದ ಕಾನೂನುಗಳನ್ನು ಹೊಂದಿವೆ. ಕೆಲವು ಉದ್ಯಮಗಳಲ್ಲಿ ಕಾಲಾತೀತವಾಗಿ ಶ್ರಮಿಸುವ ಕಾರ್ಮಿಕರು ಅತ್ಯುತ್ತಮ ಸಂಬಳ ಗಳಿಸಿಯೂ ಅಭದ್ರತೆ ಹಾಗೂ ಅವ್ಯಕ್ತ ಭಯದಲ್ಲಿ ಬದುಕುತ್ತಿದ್ದು ಸಂಘಟಿತರಾಗಲು ಸಾಧ್ಯವಾಗುತ್ತಿಲ್ಲ. ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಮೀಸಲಾತಿಗಳಿಗೆ ಇಲ್ಲಿ ಯಾವ ಗೌರವವೂ ಇಲ್ಲವಾಗಿದೆ. ಅಲ್ಲದೆ ಕೈಗಾರಿಕೋದ್ಯಮದ ಹೆಸರಲ್ಲಿ ಭೂ ಕಬಳಿಕೆಯೂ ನಡೆಯುತಿದೆ. ಕೆಲವೊಮ್ಮೆ ಪ್ರಜಾಸತ್ತೆಯನ್ನು ನಿಯಂತ್ರಿಸುವಷ್ಟು ಪ್ರಾಬಲ್ಯಗಳನ್ನೂ ಇವು ಹೊಂದಿವೆ. ಇನ್ನು ಅಸಂಘಟಿತ ವಲಯಗಳಲ್ಲಿಯೂ ಕಾರ್ಮಿಕರ ಸ್ಥಿತಿಗತಿಗಳು ಭೀಕರವಾಗಿವೆ. ಇಂತಹ ಸಮಕಾಲೀನ ಸಂದಿಗ್ಧತೆಗಳ ಹಿನ್ನೆಲೆಯಲ್ಲಿ ಕಾರ್ಮಿಕ ಚಳುವಳಿ ಹಾಗೂ ಚಿಂತನೆಗಳು ಹೊಸ ಹುಟ್ಟನ್ನು ಪಡೆಯಬೇಕಾಗಿದೆ.

ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಕಾರ್ಮಿಕರ ಪರವಾದ ಅಂಬೇಡ್ಕರ್ ಅವರ ವಿಚಾರಧಾರೆಗಳು ಇಂದಿಗೂ ದಿಕ್ಸೂಚಿಯಾಗಬಲ್ಲವು. ಮತ್ತೆ ಮತ್ತೆ ಚಿಂತಿಸಿ ಕಾರ್ಯಗತಗೊಳಿಸಬೇಕಾದವು.

ಸಮಸ್ಯಾತ್ಮಕ ನಂಬಿಕೆಗಳು ಹಾಗೂ ಅದರ ಹಿಂದಿರುವ ಗ್ರಹಿಕೆಗಳು

■ ರಾಜೇಂದ್ರ ಚೆನ್ನಿ

ವಚನ ಸಾಹಿತ್ಯ ಹಾಗೂ ಜಾತಿ ವ್ಯವಸ್ಥೆಯ ಕುರಿತಾದ ಸಂವಾದದಲ್ಲಿ ದಿನಾಂಕ 15/04/2013ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಡಾ.ಎ.ಷಣ್ಮುಖ ಹಾಗೂ ಜೆ.ಎಸ್.ಸದಾನಂದ ಅವರ ಬರಹಗಳನ್ನು ಗಮನಿಸಿದೆ. ಎಚ್.ಎಸ್.ಶಿವಪ್ರಕಾಶರ ಅಂಕಣ ಲೇಖನದಿಂದ ಆರಂಭವಾದ ಚರ್ಚೆಗಳನ್ನೂ ಕುತೂಹಲ ಮತ್ತು ಆಶ್ಚರ್ಯದಿಂದ ಓದುತ್ತ ಬಂದಿದ್ದೇನೆ. ಆಶ್ಚರ್ಯದಿಂದ ಏಕೆಂದರೆ ಡಂಕಿನ್ ಝಳಕಿಯವರೆ ಹಾಗೂ ಅವರು ತಮ್ಮ ತಾತ್ವಿಕ ಚೌಕಟ್ಟಾಗಿ ಬಳಸುವ ಎಸ್.ಎನ್.ಬಾಲಗಂಗಾಧರ ಅವರ ವಾದಗಳು ವಚನ ಸಾಹಿತ್ಯದ ಮರುಓದಿಗೆ ಮತ್ತು ಜೊತೆಗೆ ಜಾತಿ ವ್ಯವಸ್ಥೆಯ ಕುರಿತು ಮರುಚರ್ಚೆಗೆ ಕಾರಣವಾಗಬಹುದಾದ ಸ್ವಂತಿಕೆ ಹಾಗೂ ವಿವೇಚನಾ ಸಾಮರ್ಥ್ಯವನ್ನು ಹೊಂದಿವೆ ಎನ್ನುವ ತಪ್ಪು ಕಲ್ಪನೆಯ ಮೇಲೆ ಈ ಸಂವಾದವು ನಡೆಯುತ್ತಿದೆ. ಜಗತ್ತಿನ ಬೌದ್ಧಿಕ ವಲಯದಲ್ಲಿಯೇ ಒಂದು ಮೂಲಭೂತವಾದ ಪಲ್ಲಟವನ್ನು ಮತ್ತು ಭಾರತೀಯ ಸಾಮಾಜಿಕ ವಿಜ್ಞಾನಗಳ ಮೂಲಸ್ವರೂಪವನ್ನೇ ಪುನರ್‌ರಚಿಸುವ ಸೈದ್ಧಾಂತಿಕ, ತಾತ್ವಿಕ ಪಲ್ಲಟಗಳು ಈ ವಾದಗಳಿಂದ ಆಗಿವೆ, ಆಗಬೇಕು ಎಂದು ಕುವೆಂಪು ವಿಶ್ವವಿದ್ಯಾಲಯದ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದ ಒಂದು ಗುಂಪು ಪ್ರತಿಪಾದಿಸುತ್ತಾ ಬಂದಿದೆ. ಅಲ್ಲದೇ ಇದನ್ನು ಅರ್ಥಮಾಡಿಕೊಳ್ಳಲಾಗದ 'ಕನ್ನಡ ಬುದ್ಧಿಜೀವಿಗಳು' ತಿರಸ್ಕಾರಕ್ಕೆ ಯೋಗ್ಯರೆಂದು ವಾದಿಸುತ್ತಾ ಬಂದಿದೆ. ('ನೋಡಿ, ರಾಜಾರಾಮ್ ಹೆಗಡೆ ಹಾಗೂ ಸದಾನಂದ ಜೆ.ಎಸ್.'ಪೂರ್ವವಲೋಕನ'ದ ಪೀಠಿಕೆ ಪುಟ 1.) " ಏಕೆಂದರೆ ಈ ಬುದ್ಧಿಜೀವಿಗಳೂ ಕೂಡಾ ಪ್ರಾಮಾಣಿಕವಾದ ಸಾಮಾಜಿಕ ಕಳಕಳಿಯಿಂದಲೇ ಹೀಗೆ ವಿಚಾರ ಮಾಡುತ್ತಿದ್ದಾರೆ ಎಂಬುವುದರಲ್ಲಿ ಸಂಶಯವಿಲ್ಲ. ಆದರೆ ಯಾವುದೇ ವಾದವನ್ನು ಖಂಡಿಸುವುದಕ್ಕೂ ಪೂರ್ವದಲ್ಲಿ.... ಇತ್ಯಾದಿ) "ಇನ್ನು ಬಾಲಗಂಗಾಧರರ ಉದ್ದೇಶಗಳ ಕುರಿತು ವ್ಯಕ್ತವಾಗಿರುವ ಅನುಮಾನಗಳ ಕುರಿತು, ಅವರದು ಹಿಂದುತ್ವದ ಅಜೆಂಡಾ ಎನ್ನುವುದು ಪ್ರಮುಖ ಆರೋಪ. ಹೀಗೆಂದು ಆರೋಪ ಮಾಡುವ ಕನ್ನಡ ಬುದ್ಧಿಜೀವಿಗಳಿಗೆ "ವೈಜ್ಞಾನಿಕ ಸಂಶೋಧನೆಯು ಅನುಸರಿಸಬೇಕಾದ ಪರಿಚಯವಿದ್ದರೆ (?) ಇತ್ಯಾದಿ ಹೇಳಲಾಗಿದೆ. (ಪುಟ: 22 ಅದೇ). ಇನ್ನು ಮುಂದುವರೆದು "ಒಂದು ವೇಳೆ ಸಂಶೋಧಕನು ಸಂಘ ಪರಿವಾರದ ಸಕ್ರಿಯ ಸದಸ್ಯನಾಗಿದ್ದಾನೆ/ಳೆ ಎಂದೇ ಇಟ್ಟುಕೊಳ್ಳಿ. ಆಗಲೂ ಸಹ ಆ ಕಾರಣದಿಂದಾಗಿ ಅವನ/ಅವಳ ಸಂಶೋಧನೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ತನ್ನ ವೈಯಕ್ತಿಕ ಅಭಿಪ್ರಾಯ ಬದ್ಧತೆ, ನಂಬಿಕೆಗಳಿಗೂ ತಾನು ಮಾಡುತ್ತಿರುವ ಸಂಶೋಧನೆಗೂ ನಡುವಿನ ವ್ಯತ್ಯಾಸ ತಿಳಿಯದೇ ಇದ್ದರೆ ವೈಜ್ಞಾನಿಕ ಸಂಶೋಧನೆ ಆಗುವುದಿಲ್ಲ" (ಪುಟ22).

ಇಂಥ ಅದ್ಭುತವಾದ ವಾದದ ಮೂಲಕ ಇವರು ತಲುಪುವ ನಿರ್ಣಯವೆಂದರೆ "ಹಾಗಾಗಿ ಈ ರೀತಿ ಆರೋಪ ಮಾಡುವವರು ಒಂದೋ ಬಾಲಗಂಗಾಧರರನ್ನು ಓದದೇ ಆರೋಪಿಸುತ್ತಿದ್ದಾರೆ. ಇಲ್ಲ ಅವರಿಗೆ ಏನು ಹೇಳಬೇಕಾಗಿದೆ ಎಂಬುದು ಅವರಿಗೆ ಇನ್ನೂ ಸ್ಪಷ್ಟವಾಗಿಲ್ಲ" (ಪುಟ 23) ಈ ಹೇಳಿಕೆಯ ಕೊನೆಯ ವಾಕ್ಯವು ಜೀಸಸ್ ಕ್ರೈಸ್ಟ್ God ಗೆ ಹೇಳಿದರೆಂದಾದ ಮಾತಿನಂತಿರುವುದು ಇಡೀ ಸಮಕಾಲೀನ ಭಾರತೀಯ ಚಿಂತನೆಯು ಕ್ರಿಶ್ಚಿಯನ್ ಥಿಯಾಲಜಿಯ ಪುನರುತ್ಪಾದನೆಯೆನ್ನುವ ಈ ಗುಂಪಿನ ವಾದಕ್ಕೆ ಸಮರ್ಥನೆಯಾಗಿರಬಹುದು!

ಹೀಗಾಗಿ 2010ರಲ್ಲಿ ಪ್ರಕಟವಾದ ಕೃತಿಯ ಪೀಠಿಕೆಯಲ್ಲಿಯೆ ಇಲ್ಲಿಯವರೆಗೆ ಬಂದಿರುವ ಹಾಗೂ ಇನ್ನೊಂದು ಶತಮಾನದವರೆಗೂ ಬರುವ 'ಕನ್ನಡ ಬುದ್ಧಿಜೀವಿಗಳ ವೈಚಾರಿಕ ಸಾಮರ್ಥ್ಯವನ್ನು ಅಖೈರಾಗಿ ಬರಖಾಸ್ತು ಮಾಡಲಾದ ಮೇಲೆ ಶಿವಪ್ರಕಾಶರು ಹಾಗೂ 'ಕನ್ನಡ ಬುದ್ಧಿಜೀವಿಗಳು' ಚರ್ಚೆಗೆ ಪ್ರವೇಶ ಮಾಡಿದ್ದು ಆಶ್ಚರ್ಯಕರವಾಗಿದೆ. ಈ ಮಧ್ಯೆ ಇನ್ನೊಂದು ಸಾರಿ ಕನ್ನಡ ಬುದ್ಧಿಜೀವಿಗಳು ಸಂಶೋಧನೆಯನ್ನು ಹೀಗೆ ನಡೆಸಬೇಕು, ಸಂಶೋಧನೆಯ ಆಂತರ್ಯ ಹಾಗೂ ರಾಜಕೀಯ ಇವುಗಳ ಗಡಿಗಳನ್ನು ಹೇಗೆ ಮೀರಬಾರದು ಎಂದು ಮತ್ತೊಮ್ಮೆ ನಾನು ಉಲ್ಲೇಖಿಸಿರುವ ಪ್ರತಿಕ್ರಿಯೆಯಲ್ಲಿ ನಮಗೆಲ್ಲಾ ತಾಕೀತು ಮಾಡಿದ್ದಾರೆ.

ಕೇವಲ ಕನ್ನಡ ಬುದ್ಧಿಜೀವಿಯಾದ ನಾನು ಈ ಗುಂಪು ಈಗಾಗಲೇ ನಿರ್ಧರಿಸಿದ ನನ್ನ ಅಜ್ಞಾನದ ಮಿತಿಗಳಲ್ಲಿ ಕೆಲವು ಪ್ರಶ್ನೆಗಳನ್ನು ಎತ್ತುತ್ತಿದ್ದೇನೆ.

1.ಡಾ.ಷಣ್ಮುಖ ಅವರು ಹೇಳುತ್ತಾರೆ "ಡಂಕಿನ್‌ರ ಪ್ರಬಂಧದಲ್ಲಿ ಎಲ್ಲೂ ಈಗ ಇರುವ ವಚನಗಳು ಜಾತಿ(ವ್ಯವಸ್ಥೆ) ವಿರೋಧಿ ಚಳುವಳಿ ಎಂಬ ಕಥೆಯನ್ನು "ವೀರಶೈವರು ತಮ್ಮ ಮೇಲುಚಲನೆಗಾಗಿ ಹರಡಿದರು" ಎನ್ನುವ ವಾದವಿಲ್ಲ. ಮಣಿಪಾಲ್ ವಿಶ್ವವಿದ್ಯಾನಿಲಯಕ್ಕೆ ಡಂಕಿನ್ ಅವರು ಸಲ್ಲಿಸಿದ 'Vachanas as Caste Critiques' ಎಂಬ ಪ್ರಬಂಧದ ಬಗ್ಗೆ ಷಣ್ಮುಖ ಅವರು ಮಾತನಾಡುತ್ತಿದ್ದಾರೆ ಎಂದು ನಾನಂದುಕೊಂಡಿದ್ದೇನೆ. ಹಾಗಿದ್ದರೆ ಷಣ್ಮುಖರು ಈ ಪ್ರಬಂಧವನ್ನು ಓದಿಲ್ಲ ಅಥವಾ ಅವರು ಕನ್ನಡ ಬುದ್ಧಿಜೀವಿಗಳಲ್ಲದಿದ್ದರೂ ಅವರಿಗೆ ಅರ್ಥವಾಗಿಲ್ಲವೆಂದು ಹೇಳಬೇಕಾಗುತ್ತದೆ. ನಾನು ರಜಣ-ಛಿರಿಠಿಥಿಯಲ್ಲಿ ಓದಿರುವ ಡಂಕಿನ್‌ರ ಪ್ರಬಂಧದ ಮುಖ್ಯವಾದಗಳು ಹೀಗಿವೆ: ಬ್ರಿಟಿಷ್ ಆಡಳಿತಗಾರರು, ಹವ್ಯಾಸಿ ವಿದ್ವಾಂಸರು ಮತ್ತು ಇತರರು ಲಿಂಗಾಯತ/ವೀರಶೈವ ಧರ್ಮ ಹಾಗೂ ಅದರ ಗ್ರಂಥಗಳ ಬಗ್ಗೆ ದ್ವಂದ್ವಾತ್ಮಕವಾದ ನಿಲುವನ್ನು ಮೊದಲಿನಿಂದ ತಾಳುತ್ತಾ ಬಂದಿದ್ದಾರೆ. ಈ ರಿಲಿಜನ್ ಇನ್ನಿತರ ಭಾರತೀಯ ಸಂಪ್ರದಾಯಗಳಿಗೆ ಹೋಲಿಸಿದರೆ ಹಿಂದೂ ರಿಲಿಜನ್‌ನ ಹಲವು ಪ್ರತಿಗಾಮಿ ಧೋರಣೆ ಹಾಗೂ ಆಚರಣೆಗಳನ್ನು ತಿರಸ್ಕರಿಸುವ ಮೂಲಕ ಪ್ರಶಂಸೆಗೆ ಅರ್ಹವಾಗಿದೆಯಾದರೂ ಅದರ ಗ್ರಂಥಗಳು (texts) ಹಾಗೂ ಆಚರಣೆಗಳು ಇತರ ಭಾರತೀಯ ಸಂಪ್ರದಾಯಗಳಂತೆಯೇ ತಿರಸ್ಕಾರಯೋಗ್ಯವಾಗಿವೆ. ಇದರಲ್ಲಿ ಅವರು ಇತ್ಯಾತ್ಮಕವೆಂದು ಗುರುತಿಸುವ ಅಂಶಗಳು ಪ್ರಾಟೆಸ್ಟಂಟ್ ಕ್ರಿಶ್ಚಿಯನ್ ಥಿಯಾಲಜಿಯ ಪ್ರಭಾವದಲ್ಲಿ ಮಾಡಲಾದ ರಚನೆಗಳು. ಅನಂತರ ತನ್ನ ಅಸ್ಮಿತೆ ಹಾಗೂ ಸಂಘಟನೆಯನ್ನು ಬಲಪಡಿಸುವ ಪ್ರಯತ್ನದಲ್ಲಿ ಈ ಬ್ರಿಟಿಷ್ stereo-story ತನಗೆ ಅಪ್ಯಾಯಮಾನವಾಗಿ ಕಂಡಿದ್ದರಿಂದ ಆಧುನಿಕ ವೀರಶೈವ ಶಿಕ್ಷಿತ ವರ್ಗವು ಇದನ್ನು ಒಪ್ಪಿಕೊಂಡಿತು. ಇಂಥ ಒಂದು ವಿವರಣೆಯನ್ನು ಡಂಕಿನ್‌ರ ಪ್ರಬಂಧವು ವೀರಶೈವ ಸಭಾದ ನಡುವಳಿಗಳು, ಅದರ ನೇತಾರರ ಭಾಷಣ ಬರಹಗಳು, ಇವುಗಳ ಸಹಾಯದೊಂದಿಗೆ ಮಂಡಿಸುತದೆ. ಒಂದು ಗುಂಪಿನ ನಿರ್ದಿಷ್ಟ ಉದ್ದೇಶದಿಂದ (ಇಲ್ಲಿ ಶಿಕ್ಷಿತ ವೀರಶೈವ ಧೀಮಂತ ವರ್ಗ) ಇದಾಯಿತೆಂದು ಕನ್ನಡ ಬುದ್ಧಿಜೀವಿಗಳೂ ಹೇಳುತ್ತಿಲ್ಲ. ಇಲ್ಲಿ ಇರುವ ಪ್ರಶ್ನೆಗಳೆಂದರೆ ಬ್ರಿಟಿಷ್ ಓರಿಯಂಟಲಿಸ್ಟ್ ಎಂದು ಕರೆಯಬಹುದಾದ ಬರಹಗಳು ವೀರಶೈವ ಧರ್ಮದ ಬಗ್ಗೆ ಏಕಮುಖವಾದ ಚಿತ್ರವನ್ನು ಕೊಟ್ಟಿವೆಯೆ? ಅಂದಾಜು ಹತ್ತರಿಂದ ಹದಿನೈದನೇ ಶತಮಾನದವರೆಗೆ ಪ್ರವರ್ಧಮಾನವಾದ ಒಂದು ಸಂಪ್ರದಾಯದ ಬಗ್ಗೆ ಬ್ರಿಟಿಷ್‌ರ ಆಗಮನದ ಮೊದಲು ಯಾವುದೇ ವಿವರಣೆಗಳು,ವ್ಯಾಖ್ಯಾನಗಳು ಇರಲೇ ಇಲ್ಲವೇ? ಈ ವಿವರಣೆಗಳು ಜಾತಿ, ಜಾತಿಪದ್ಧತಿ, ಬ್ರಾಹ್ಮಣ ಪುರೋಹಿತಶಾಹಿ

ಇವುಗಳು ತಮ್ಮ ಯಾವ 'ಅನುಭವ'ವನ್ನು ವಿವರಿಸಲೇ ಇಲ್ಲವೇ? ಡಂಕಿನ್ ಹಾಗೂ ಇತರರು ಆಧ್ಯಾತ್ಮಿಕವೆಂದು ಗುರುತಿಸಿ ಅದನ್ನು 'ಸಾಮಾಜಿಕ'ದಿಂದ ಬೇರ್ಪಡಿಸುವ ನಿರ್ಣಯಗಳನ್ನು ವಚನಕಾರರು ಜಾತಿಯ ಬಗ್ಗೆ ತಾಳಿದ ಧೋರಣೆಯ ಬಗ್ಗೆ ಬಳಸುತಾರೆ. (ಹೇಳುತ್ತಾರೆ?) ಆಧ್ಯಾತ್ಮಿಕ/ಸಾಮಾಜಿಕ ಎನ್ನುವ ವಿಂಗಡಣೆಯೇ ವಸಾಹತುಶಾಹಿ ಪ್ರಜ್ಞೆಯ ಫಲವಾಗಿದೆ. ಇದನ್ನು ವಸಾಹತುಶಾಹಿ–ಪೂರ್ವ ಸಂದರ್ಭಕ್ಕೆ ಅನ್ವಯಿಸುವ ಡಂಕಿನ್‌ರು ತಮ್ಮ ಪ್ರಬಂಧದಲ್ಲಿ Orientalismನ ಪುನರುತ್ಪಾದನೆ ಮಾಡಿದ್ದಾರೆ. ಹೀಗಾಗಿ ಅವರ ಸಂಶೋಧನೆಯ ವೈಚಾರಿಕ ಚೌಕಟ್ಟು ದುರ್ಬಲ ಮಾತ್ರವಲ್ಲ ಅಸಿಂಧುವಾಗಿದೆ(invalid).ವಸಾಹತುಪೂರ್ವ/ಆಧುನಿಕಪೂರ್ವ ಕಾಲದ ಅನುಭವದ ಬಗ್ಗೆ ಇನ್ನೂ ಸಂಶೋಧನೆಯಾಗಬೇಕಿದೆ ಎಂದು ಬಾಲಗಂಗಾಧರ ಗುಂಪು ಹೇಳುತ್ತದೆ; ಆದರೆ ಆ ಸಂಶೋಧನೆಯು ಆಗದಿದ್ದರೂ, ಅದರ ಬಗ್ಗೆ ಬಂದಿರುವ ಎಲ್ಲಾ ಕನ್ನಡ ಸಂಶೋಧನೆಯನ್ನು ತಿರಸ್ಕಾರದಿಂದ ನೋಡುವ ತನ್ನ obscene arrogance ಬಗ್ಗೆ ಅದು ಸೂಕ್ಷ್ಮವಾಗಿಲ್ಲ.

ರಿಲಿಜನ್ ಬಗ್ಗೆ ಹಾಗೂ ಜಾತಿ ವ್ಯವಸ್ಥೆಯ ಬಗ್ಗೆ ಬಾಲಗಂಗಾಧರ ಅವರ ವಾದಗಳು ವಿಶ್ವನಾಗರೀಕತೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಸತ್ಯವನ್ನು ಹೇಳುತ್ತಿವೆಯೆಂದೂ ಮತ್ತು ಈ ಮಾತನ್ನು ಒಪ್ಪದವರು ಅಶಿಕ್ಷಿತರೆಂದು ಈ ಗುಂಪು ವಾದಿಸುತ್ತ ಬಂದಿದೆ. ವಿಧಾನ ಹಾಗೂ ಅದರ ಹಿಂದಿರುವ ಗೃಹೀತಗಳು ಅತ್ಯಂತ ಸಮಸ್ಯಾತ್ಮಕವಾಗಿವೆ. ಇಡೀ ಪಶ್ಚಿಮದ ಲೋಕಗ್ರಹಿಕೆಯು ಕ್ರಿಶ್ಚಿಯನ್ ಥಿಯಾಲಜಿಯಿಂದ ಪ್ರಭಾವಿತವಾಗಿದೆ ಎನ್ನುವ ಹಾಗೂ ಈ ಥಿಯಾಲಜಿಯ ಮಾದರಿಯನ್ನು ಆಧರಿಸಿರುವ ವಸಾಹತುಶಾಹಿ ಪ್ರಜ್ಞೆ ಮತ್ತು ಅದರ ಪುನರುತ್ಪಾದನೆಯಾಗಿರುವ ಆಧುನಿಕ ಭಾರತೀಯ ಸಮಾಜವಿಜ್ಞಾನಗಳು ಇವುಗಳ ಬಗೆಗಿನ ಬೀಸು ಹೇಳಿಕೆಗಳು ಅವರಂದುಕೊಂಡಂತೆ 'ವೈಜ್ಞಾನಿಕ'ವಾಗಿಲ್ಲ. ಕಾಲ್ ಪಾಪರ್ (Carl Popper)ನಿಂದ ತೆಗೆದುಕೊಂಡಿರುವ ಹೇಳಿಕೆಗಳ ವಿಶ್ಲೇಷಣೆಯ ಮಾದರಿ ಸತ್ಯ ಮತ್ತು falsification ಬಗೆಗಿನ ನಿಲುವುಗಳು ಅತ್ಯಂತ ಪ್ರಶ್ನಾರ್ಹವೂ ಆಗಿವೆಯೆನ್ನುವುದು ಜಗತ್ತಿನ ವಿದ್ವತ್ ಪ್ರಪಂಚಕ್ಕೆ ತಿಳಿದಿದೆ. ಇಂಥ ಸಂದೇಹಾಸ್ಪದ ತರ್ಕಪದ್ಧತಿಗಳ ಆಧಾರದ ಮೇಲೆ ಜಗತ್ತಿನ ಅಖೈರಾದ ಸತ್ಯಗಳು ಗೋಚರಿಸಿವೆ ಎನ್ನುವುದು ಸಂಶೋಧನೆಯೆಂದು ಯಾರೂ ನಂಬುವುದಿಲ್ಲ. ಇನ್ನೂ ದೊಡ್ಡ ಸಮಸ್ಯೆಯೆಂದರೆ ಚರಿತ್ರಾತ್ಮಕ ಅಧ್ಯಯನಗಳ ಸಾಧ್ಯತೆಯನ್ನೇ ಒಪ್ಪದ ಇವರ ವಾದಗಳು ಬಾಲಿಶ ಹಾಗೂ ಅಸಂಬದ್ಧವಾಗಿರುತ್ತವೆ. ಉದಾಹರಣೆಗೆ ತಮ್ಮ ಪ್ರಬಂಧದಲ್ಲಿ ಡಂಕಿನ್ ಅವರು ವೀರಶೈವ/ಲಿಂಗಾಯತ ಸಂಪ್ರದಾಯಗಳು ಒಪ್ಪುವ ವಚನಕಾರರ ಬಗೆಗಿನ stereo-stories ಗಳಿಗೆ ಯಾವುದೇ ಚಾರಿತ್ರಿಕ ಆಧಾರಗಳಿಲ್ಲವಾದ್ದರಿಂದ ವಚನಗಳಲ್ಲಿ ಬರುವ ಹೇಳಿಕೆಗೆ textual ಓದುಗಳು ಮಾತ್ರ ನಮ್ಮ ವಾದಗಳಿಗೆ ಆಧಾರವಾಗಿರಬೇಕು ಎನ್ನುತ್ತಾರೆ. ಅಲ್ಲದೇ ಈ ಓದುಗಳಲ್ಲಿ (textual reading) ಸಾಹಿತ್ಯಿಕ ಓದು ಮತ್ತು ಸಮಾಜಶಾಸ್ತ್ರೀಯ ಓದುಗಳ ಮಧ್ಯ ಅಂತಹ ಭಿನ್ನತೆಯಿಲ್ಲವೆಂದು ವಾದಿಸಿ ವಚನಗಳಲ್ಲಿ ಜಾತಿ/ಜಾತಿ ವ್ಯವಸ್ಥೆಯ ಬಗ್ಗೆ ಇರುವ "ಹೇಳಿಕೆ"ಗಳನ್ನು ಶೇಕಡಾವಾರು ಸಂಖ್ಯಾಶಾಸ್ತ್ರೀಯ ಮಾದರಿಯಲ್ಲಿ ಪರಿಶೀಲಿಸುತ್ತಾರೆ. ಈ ವಾದಸರಣಿಗಳಲ್ಲಿ ಒಂದು ಮೆಟ್ಟಿಲಿನಿಂದ ಇನ್ನೊಂದು ಮೆಟ್ಟಿಲಿಗೆ ಹೋಗುವಾಗ ಅದೆಷ್ಟು ವೈಚಾರಿಕ ಕೊರಕಲುಗಳನ್ನು ಹಾರುತ್ತಾರೆ ಎಂದರೆ ತತ್ವಜ್ಞಾನದ ಪ್ರಾಥಮಿಕ ಪರಿಚಯವಿರುವವರಿಗೂ ಇದು ಅಸಮರ್ಥನೀಯವಾಗಿ ಕಾಣುತ್ತದೆ. ಇದರ ಪರಿಣಾಮವೆಂದರೆ "ಆದಿಶಂಕರರಲ್ಲಿಲ್ಲದ್ದು ವಚನಕಾರರಲ್ಲಿ ಏನಿದೆ" ಎನ್ನುವ ಅಚಾರಿತ್ರಿಕ, ಅಪ್ರಬುದ್ಧ ಹೇಳಿಕೆ ಡಂಕಿನ್ ಅವರಿಗೆ ಸಾಧ್ಯವಾಗುತ್ತದೆ. ಈ ದುರ್ಬಲ ಹೇಳಿಕೆಯ ಹಿಂದಿರುವುದೆಂದರೆ ಚರಿತ್ರೆ, ಸಾಮಾಜಿಕ ಅನುಭವ, ಸಾಮಾಜಿಕ ಬದಲಾವಣೆ ಇದಾವುದರಿಂದಲೂ ಅಬಾಧಿತವಾದ, ಅಚಾರಿತ್ರಿಕವಾದ 'ಅನುಭಾವ ಪರಂಪರೆ'ಯಿದೆಯೆಂದೂ ಹಾಗೂ ಈ ಪರಂಪರೆಯು ಜಾತಿ/ಜಾತಿ ವ್ಯವಸ್ಥೆಯ ಬಗ್ಗೆ (ಇವೆರಡೂ ನಿಜವಾಗಿ ಇಲ್ಲದಿದ್ದರೂ) ಒಂದೇ ಬಗೆಯ ಹೇಳಿಕೆಗಳನ್ನು ನೀಡುತ್ತ ಬಂದಿದೆಯೆನ್ನುವ ವಾದ. ಈ ಪರಂಪರೆಗೆ ಸೇರಿದ ಯಾರಾದರೂ (ಉದಾಹರಣೆಗೆ ವಚನಕಾರರು) ಜಾತಿಯ ಬಗ್ಗೆ ಏನನ್ನೇ ಹೇಳಿದರೂ ಅದು ಈ ಅಚಾರಿತ್ರಿಕ ಅನುಭಾವಿಕ ಪರಂಪರೆಯ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಬೇಕು. ಅದರಾಚೆಗೆ ಹೋಗಿ ಅದನ್ನು ಜಾತಿ ವಿರೋಧಿಯೆಂದರೆ ಅದು ನಮ್ಮ ಆಧುನಿಕ/ವಸಾಹತುಶಾಹಿ/ಕ್ರಿಶ್ಚಿಯನ್ ಥಿಯಾಲಜಿ ಪ್ರಭಾವಿತ ಪ್ರಜ್ಞೆಯಿಂದ ಹುಟ್ಟಿದ stereo-story ಮಾತ್ರ; ಅಥವಾ ಈ ಎಲ್ಲವೂ ಆದ ಓರಿಯೆಂಟಲಿಸಂನ ಪುನರುತ್ಪಾದನೆ. ದಯವಿಟ್ಟು ಗಮನಿಸಿ. ಆಧುನಿಕ/ವಸಾಹತುಶಾಹಿ/ಕ್ರಿಶ್ಚಿಯನ್ ಥಿಯಾಲಜಿ ಪ್ರೇರಿತ/ ಓರಿಯಂಟಲಿಸ್ಟ್ ಇವೆಲ್ಲವನ್ನೂ ಒಂದೇ ಎನ್ನುವ ಹಾಗೆ ಬಾಲಗಂಗಾಧರರ ವಾದಗಳು collapse ಮಾಡುತ್ತವೆ. ಏಕಾಕೃತಿಗೊಳಿಸುತ್ತವೆ. (homogenize) ಇದು ಚಾರಿತ್ರಿಕವಾಗಿ ಮತ್ತು ತಾತ್ವಿಕವಾಗಿ ಅಸಿಂಧುವಾಗಿದ್ದರಿಂದ ಮತ್ತು ಹೀಗೆ ಮಾಡುತ್ತಿರುವುದು ಬಾಲಗಂಗಾದರರ ವೈಚಾರಿಕ ಚೌಕಟ್ಟಿನ ದೌರ್ಬಲ್ಯವಾಗಿರುವುದರಿಂದ ಅದನ್ನು ಕನ್ನಡ ಬುದ್ಧಿಜೀವಿಗಳು ತಿರಸ್ಕರಿಸುತಾರೆ. ಒಂದು ಥಿಯರಿಯನ್ನು ಕಟ್ಟುವಾಗ ಅದು ಅನುಭವವನ್ನು ವಿವರಿಸುವ ಸಾಮರ್ಥ್ಯವನ್ನು ಹೊಂದಿದೆಯೇ? ವಿಭಿನ್ನ ಅನುಭವಗಳ ಮಧ್ಯೆ ವ್ಯತ್ಯಾಸವನ್ನು ಖಚಿತವಾಗಿ ಗುರುತಿಸುವ ಶಕ್ತಿ ಅದಕ್ಕಿದೆಯೇ? ಅಥವಾ ಅದು ಸಮಸ್ಯಾತ್ಮಕವೇ ಅಲ್ಲದ ಒಂದು ಆಕೃತಿಯೆಂದು, ಅದು ಕೇವಲ ಮತ್ತು ಸಮಗ್ರವಾಗಿ ಕ್ರಿಶ್ಚಿಯನ್ ಥಿಯಾಲಜಿಯಿಂದ ತನ್ನ ಲೋಕಗ್ರಹಿಕೆಗಳನ್ನು ರೂಪಿಸಿಕೊಂಡಿತು ಎನ್ನುವ ಬಾಲಗಂಗಾಧರರ ವಾದವು ಸೂಕ್ಷ್ಮವಾದ ವೈಚಾರಿಕ ವಿಶ್ಲೇಷಣೆಗೆ ಒಳಪಡಿಸದೇ ಇರುವ ಬೌದ್ಧಿಕ ಏಕದೇವೋಪಾಸನೆಯಂತಿದೆ. ಬಾಲಗಂಗಾಧರರ ಅಭಿಪ್ರಾಯ ಈ ಬಗ್ಗೆ ಏನೇ ಇರಲಿ, ಯಾವುದೇ ಥಿಯರಿ ತನ್ನ ಒಟ್ಟಾರೆ ಸಂದರ್ಭವನ್ನು ಮೀರಿ ಹೋಗುವುದಿಲ್ಲ. The Heathen in his Blindness (1994) ಕೃತಿ ಹಾಗೂ ಅನೇಕ ಸಂಕೀರ್ಣ ಪ್ರಬಂಧಗಳ ಮೂಲಕ ಅವರು ವಸಾಹತುಶಾಹಿ ಪ್ರಜ್ಞೆ ಮತ್ತು ಓರಿಯಂಟಲಿಸಂ ಬಗ್ಗೆ ಒಂದು ವಿಸ್ತಾರವಾದ ಪ್ರಾಕ್‌ಕಲ್ಪನೆಯನ್ನು ರೂಪಿಸಿಕೊಂಡಿದ್ದರು. ಇದಕ್ಕೆ ಪಶ್ಚಿಮದ ವಿದ್ವತ್ ಪ್ರಪಂಚದಲ್ಲಿ ಹಿನ್ನೆಲೆ ಇರಲಿಲ್ಲವೆಂದಲ್ಲ. 'ರಿಲಿಜನ್' ಅನ್ನುವ ಪದ ಮತ್ತು ಪರಿಕಲ್ಪನೆ ಎಲ್ಲಾ ಧರ್ಮಗಳಿಗೆ ಅನ್ವಯಿಸಬಹುದಾದಂಥ 'ಸರ್ವನಾಮ' ಸ್ವರೂಪದ್ದು ಅಲ್ಲ. ಅದು ಕೇವಲ ಕ್ರಿಶ್ಚಿಯನ್, ಯಹೂದಿ ಮತ್ತು ಕೆಲವೇ ಧರ್ಮಗಳನ್ನು ವಿವರಿಸುವ ಪದವಾಗಬಲ್ಲದು. ಹಿಂದೂಯಿಸಮ್, ಬುದ್ಧಿಸಮ್ ಮುಂತಾದ ಪದಗಳು ಕೇವಲ ರಚನೆಗಳು ಮತ್ತು ಅವು ಅಸಂಬದ್ಧವೆಂದು The Meaning and End of Religion (1962)ರಲ್ಲಿ ಅವರು ವಾದಿಸಿದ್ದರು. ಇದನ್ನೇ ಮುಂದುವರೆಸಿಕೊಂಡು 1989ರಲ್ಲಿ Frits Staal ಅವರು 'ರಿಲಿಜನ್'ಅನ್ನುವುದು ಸಾರ್ವತ್ರಿಕವಾದ ಸಂಗತಿಯಲ್ಲ; ಅದರ ಕಲ್ಪನೆ ಕ್ರಿಶ್ಚಿಯನ್ ಥಿಯಾಲಜಿಗೆ ಸಂಬಂಧಿಸಿದ್ದು ಎಂದು ವಾದಿಸಿದ್ದರು. ಈ ವಾದವು ಬಾಲಗಂಗಾಧರರ ಚಿಂತನೆಯ ಮೂಲ ಆಧಾರವಾಗಿದೆ. ಈ ಆಧಾರದ ಮೇಲೆ ಅವರು ಎಡ್ವರ್ಡ್ ಸೈಯಿದ್ ತನ್ನ Orinetalism ನಲ್ಲಿ ವಿಸ್ತಾರವಾಗಿ ಬಳಸಿದ ವಸಾಹತುಶಾಹಿ ಸಂಕಥನದ ವಿಶ್ಲೇಷಣೆಯ ಮಾದರಿಯನ್ನು ಬಳಸಿಕೊಂಡು ತಮ್ಮ ಪ್ರಾಕ್‌ಕಲ್ಪನೆಯನ್ನು ಕಟ್ಟುತ್ತಾರೆ. ಅಂದರೆ ಕ್ರಿಶ್ಚಿಯನ್ ಥಿಯಾಲಜಿಯು ರಚಿಸಿದ 'ರಿಲಿಜನ್'ನ ಪರಿಕಲ್ಪನೆಯು ಸೆಮೆಟಿಕ್ ರಿಲಿಜನ್‌ಗಳ ವಿವರಣೆಯನ್ನು ಕೊಟ್ಟಿತು. ಭಾರತಕ್ಕೆ ಬಂದ ಪಶ್ಚಿಮದ ವಿದ್ವಾಂಸರು, ಮಿಶನರಿಗಳು ತಮ್ಮ ಲೋಕಗ್ರಹಿಕೆಯ ತಳದಲ್ಲೇ ಇರುವ 'ರಿಲಿಜನ್'ನ ಕಲ್ಪನೆಯಿಂದಾಗಿ ಭಾರತದಲ್ಲಿರುವ

ಧರ್ಮ ಮತ್ತು ಸಂಪ್ರದಾಯಗಳು ರಿಲಿಜನ್ ಆಗಿರಲೇಬೇಕು ಎಂದು ಆಗ್ರಹಿಸಿ, ಅದು ಇಲ್ಲಿದೆಯೆಂದು ಭಾವಿಸಿಕೊಂಡು ಆ ಪರಿಕಲ್ಪನೆಗೆ ತಕ್ಕ ಹಾಗೆ ಭಾರತೀಯ ಧರ್ಮಗಳನ್ನು ವಿವರಿಸಿದರು. ಇದರ ಒಂದು ಉದ್ದೇಶವೆಂದರೆ ಈ ಭಾರತೀಯ 'ರಿಲಿಜನ್' ಕೆಟ್ಟದ್ದು ಎಂದು ಸಾಬೀತು ಮಾಡಿ ಕ್ರಿಶ್ಚಿಯನ್ ಧರ್ಮದ ಶ್ರೇಷ್ಠತೆಯನ್ನು ಸಮರ್ಥಿಸುವುದಾಗಿತ್ತು. ಗಂಗಾಧರರ ನುಡಿಗಟ್ಟಿನಲ್ಲಿ ಹೇಳುವುದಾದರೆ ಹೀಗಾಗಿ ಪಾಶ್ಚಿಮಾತ್ಯರು ವಿವರಿಸಿದ್ದು 'ಅನುಭವವನ್ನಲ್ಲ', 'ಸತ್ಯವನ್ನಲ್ಲ'. ತಮ್ಮ ಪ್ರಜ್ಞೆಯನ್ನೇ ತಾವು ವಿವರಿಸಿಕೊಂಡರು. ಗಂಗಾಧರರ ಥಿಯರಿಯು ಈ ಘಟ್ಟದವರೆಗೆ ಎಡ್ವರ್ಡ್ ಸೈಯಿದ್ ಮತ್ತು ವಸಾಹತೋತ್ತರ ಚಿಂತನೆಗೆ ಬಹಳ ಹತ್ತಿರವಾಗಿದೆ. ತಮ್ಮ ಥಿಯರಿಯ ಸೈಯಿದ್‌ನ ಚಿಂತನೆಗಿಂತ ಭಿನ್ನವಾಗಿದೆಯೆನ್ನುವುದನ್ನು ಮತ್ತು ಅದರ ದೌರ್ಬಲ್ಯಗಳನ್ನು ಗಂಗಾಧರ ತಮ್ಮ ಅನೇಕ ಪ್ರಬಂಧಗಳಲ್ಲಿ ವಿವರಿಸಿದ್ದಾರೆ. Orinetalismನ ವೈಚಾರಿಕ ಕೊರತೆಗಳ ಬಗ್ಗೆ ಸುಮಾರು ಎರಡು ದಶಕಗಳಿಗೂ ಮೀರಿ ಜಗತ್ತಿನಲ್ಲಿ ಬಹಳ ವಿಸ್ತಾರವಾಗಿ ಚರ್ಚೆಗಳ ನಡೆದಿವೆ. ಈ ಚರ್ಚೆಗೆ ಅವರು ಹೊಸದಾಗಿ ಏನನ್ನಾದರೂ ಸೇರಿಸಿದ್ದಾರೆ ಎಂದು ನನಗೆ ಅನ್ನಿಸುವುದಿಲ್ಲ. ಹಾಗೆ ನೋಡಿದರೆ, ಎಡ್ವರ್ಡ್ ಸೈಯಿದ್‌ನ ಬರಹದ ಹಿಂದಿರುವ ಮಿಶೆಲ್ ಫೂಕೋನ 'power-knwoledge' ನ ವೈಚಾರಿಕ ಆಕೃತಿಯ ದೌರ್ಬಲ್ಯಗಳ ಬಗ್ಗೆ ತೀಕ್ಷ್ಣ ವಿಮರ್ಶೆಗಳು ಬಂದಿವೆ. ಈ ಚರ್ಚೆಗಳ ಭರಾಟೆಯಿಂದಾಗಿ ವಸಾಹತೋತ್ತರ ಚಿಂತನೆಯು ತನ್ನ ಮೂಲಸತ್ವವನ್ನೇ ಕಳೆದುಕೊಂಡಿದೆ. ಓರಿಯಂಟಲಿಸಮ್‌ನ ಸಂಕಥನಗಳು ಮೂಲತಃ ಸಾಮ್ರಾಜ್ಯಶಾಹಿಯ ಸಂಕಥನಗಳು; ವಸಾಹತುಶಾಹಿ ಆಳ್ವಿಕೆಯ ನ್ಯಾಯ ಸಮರ್ಥನೆಗಳು; ಹೀಗಾಗಿ ಅವು ಜ್ಞಾನಕ್ಕಿಂತ ಹೆಚ್ಚಾಗಿ power ಗೆ ಸಂಬಂಧಿಸಿವೆ ಎಂಬುದು ಸೈಯಿದ್‌ನ ಮುಖ್ಯ ಒಳನೋಟವಾಗಿತ್ತು. ಇದರ ಓರೆಕೋರೆಗಳನ್ನು ವಿಮರ್ಶಿಸುವ ಅವಸರದಲ್ಲಿ ವಸಾಹತೋತ್ತರ ಚಿಂತನೆಯು ಸಾಮ್ರಾಜ್ಯಶಾಹಿ ಹಾಗೂ ಅದರ power ನ ಚರ್ಚೆಯನ್ನು ಸಂಪೂರ್ಣ ಬದಿಗಿರಿಸಿ ವಸಾಹತೋತ್ತರ ಚಿಂತನೆಯು ಚಾರಿತ್ರಿಕ, ರಾಜಕೀಯ ಅಂಶಗಳನ್ನು ಮರೆಯಿಸಿ ಅದನ್ನು ವಿಶ್ವವಿದ್ಯಾನಿಲಯಗಳಲ್ಲಿ 'ಅರಾಜಕೀಯವಾಗಿ' ಚರ್ಚಿಸಬಹುದಾದ ಅಕಡೆಮಿಕ್ ಸಿದ್ಧಾಂತವನ್ನಾಗಿ ಪರಿವರ್ತನೆ ಹೊಂದಿತು. ಬಾಲಗಂಗಾಧರರು ಇದೇ ಕೆಲಸವನ್ನು ಮುಂದುವರೆಸಿದ್ದಾರೆ. ಅವರು ವಸಾಹತುಶಾಹಿ ಪ್ರಜ್ಞೆಯನ್ನು ಕೇವಲ ಪ್ರಜ್ಞೆಯಾಗಿ, ಗ್ರಹಿಕೆಯಾಗಿ ಎಷ್ಟು ಅಮೂರ್ತವಾಗಿ ಚರ್ಚಿಸುತ್ತಾರೆಂದರೆ ಅವರ ಯಾವುದೇ ಲೇಖನದಲ್ಲಿ ಭಾರತದಲ್ಲಿ ಬ್ರಿಟಿಶ್ ವಸಾಹತುಶಾಹಿ ಒಂದು ರಾಜಕೀಯ, ಆರ್ಥಿಕ ವ್ಯವಸ್ಥೆಯೂ ಆಗಿತ್ತು ಎನ್ನುವ ಸಣ್ಣ ಪ್ರಸ್ತಾಪವೂ ಇಲ್ಲ. ಈ ಕಾರಣದಿಂದಾಗಿಯೇ ಅವರ ವಾದಗಳು ಸಂಪೂರ್ಣವಾಗಿ ಅಚಾರಿತ್ರಿಕ, ಅರಾಜಕೀಯ ನಿರ್ವಾತದಲ್ಲಿ ನಡೆಯುತ್ತವೆ. ಅವರ ವಾದದ ಪ್ರಕಾರ ಚರಿತ್ರೆ (history)ಅನ್ನುವುದು ಕೂಡ ಕ್ರಿಶ್ಚಿಯನ್ ಥಿಯಾಲಜಿಯಿಂದ ಬಂದ ಪರಿಕಲ್ಪನೆ. ಕ್ರಿಶ್ಚಿಯನ್ ಥಿಯಾಲಜಿ ಪ್ರೇರಿತ history ಗೂ ಮನುಷ್ಯ ಅನುಭವದ ಮೂಲ ಸತ್ಯವೇ ಆಗಿರುವ ಚರಿತ್ರೆಗೂ ವ್ಯತ್ಯಾಸವಿದೆ ಮತ್ತು ಆ ಚರಿತ್ರೆಯನ್ನು ಅಲಕ್ಷಿಸಲಾಗದು ಎನ್ನುವ ಅರಿವು ಇಲ್ಲದ್ದರಿಂದಾಗಿ ಗಂಗಾಧರರ ಥಿಯರಿಯು ಪಶ್ಚಿಮದ ವಿದ್ವತ್ ವಲಯದಲ್ಲಿ ಯಾವ ಸಣ್ಣ ಪರಿಣಾಮವನ್ನೂ ಮಾಡಲಿಲ್ಲ. ಭಾರತದ ಸಂದರ್ಭದಲ್ಲಿ ಅದು ವೈಚಾರಿಕವಾಗಿ ನಿಷ್ಪ್ರಯೋಜಕವಾಗಿದೆ.

ನಮ್ಮ ಚರ್ಚೆಗೆ ಮರಳುವುದಾದರೆ ಪಶ್ಚಿಮದ ವಿವರಣೆಗಳು ನಿಜವಾಗಿ ಪಶ್ಚಿಮದ ಸ್ವವಿವರಣೆಗಳೇ. ಮತ್ತು ಆ ವಿವರಣೆಗಳಲ್ಲಿರುವ 'ರಿಲಿಜನ್', 'ಸೆಕ್ಯುಲರ್' ಈ ಪರಿಕಲ್ಪನೆಗಳು ನಮ್ಮ ಅನುಭವವನ್ನು ವಿವರಿಸಲಾರವು ಎನ್ನುವ ವಾದವು ಕುತೂಹಲಕಾರಿಯಾದುದು ಮಾತ್ರವಲ್ಲ. ಅದು ನಾವು ಜ್ಞಾನವೆಂದು ಒಪ್ಪಿಕೊಂಡಿರುವುದನ್ನು ಪ್ರಶ್ನಿಸಲು ಅತ್ಯಂತ ಉಪಯುಕ್ತವಾದುದು. ಬಾಲಗಂಗಾಧರ ಅವರ ವಾದಗಳನ್ನು ಬಲವಾಗಿ ಸಮರ್ಥಿಸುವ ವಿವೇಕ್ ಧಾರೇಶ್ವರ ಅವರ ಕೆಲವು ಲೇಖನಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಆದರೆ ಇಂಥ ಅನೇಕ ಸಾಧ್ಯತೆಗಳಿದ್ದ ಥಿಯರಿಯನ್ನು ಬಾಲಗಂಗಾಧರ ಹಾಗೂ ಅವರ ಗುಂಪು ಯಾವುದಕ್ಕಾಗಿ ಬಳಸಿಕೊಂಡಿದ್ದಾರೆ ಎನ್ನುವುದನ್ನು ನೋಡಿದರೆ ಅಸಹ್ಯವೆನಿಸದೇ ಇರಲಾರದು. ಉದಾಹರಣೆಗೆ ಕುವೆಂಪು ವಿಶ್ವವಿದ್ಯಾನಿಲಯದ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದ ಬ್ಲಾಗ್‌ನಲ್ಲಿ ಲಭ್ಯವಿರುವ ಲೇಖನಗಳನ್ನು ಪ್ರತಿಕ್ರಿಯೆಗಳನ್ನು ನೋಡಬಹುದು. ಬಾಲಗಂಗಾಧರರ ಥಿಯರಿಯನ್ನು ಸಮಕಾಲೀನ ಸಂವಾದಗಳಿಗೆ ಅನ್ವಯಿಸಿರುವ ಈ ಲೇಖನಗಳಲ್ಲಿ ಆ ಥಿಯರಿಯು ಮಡೆಸ್ನಾನವನ್ನು ಬುದ್ಧಿಜೀವಿಗಳ ಸಮಸ್ಯೆಯನ್ನಾಗಿ ನೋಡಲು, ಮತಾಂತರ ನಿಷೇಧವನ್ನು ಪುರಸ್ಕರಿಸಲು ಉಪಯೋಗವಾಗಿದೆ. ಈ ಲೇಖನಗಳಲ್ಲಿ ಬಾಲಗಂಗಾಧರರ ಥಿಯರಿಯ ಮೂಲಭೂತ ದೌರ್ಬಲ್ಯ ಸ್ಪಷ್ಟವಾಗುತ್ತದೆ. ಆಧುನಿಕ ಶಿಕ್ಷಿತ ಭಾರತೀಯರ ಪ್ರತಿಯೊಂದು ಚಿಂತನೆಯೂ ಕ್ರಿಶ್ಚಿಯನ್ ಥಿಯಾಲಜಿ ಪ್ರಭಾವಿತ ವಸಾಹತುಶಾಹಿ ಪ್ರಜ್ಞೆಯ ಫಲವೆಂದು ಈ ಥಿಯರಿ ಹೇಳಿದ ಮೇಲೆ ಭಾರತೀಯ ಬುದ್ಧಿಜೀವಿಗಳ ಯಾವುದೇ ಪ್ರತಿಕ್ರಿಯೆಯನ್ನು ತಿರಸ್ಕರಿಸುವುದು ಸಾಧ್ಯ. ಈ ಉದಾಹರಣೆ ಏನನ್ನು ತೋರಿಸುತ್ತದೆಯೆಂದರೆ, ಪಶ್ಚಿಮದ ವಿದ್ವತ್ತು 1960ರ ದಶಕದಲ್ಲಿಯೇ 'ರಿಲಿಜನ್' ಬಗ್ಗೆ ಸತ್ವಶಾಲಿಯಾದ ಚರ್ಚೆಯನ್ನು ಆರಂಭಿಸಿತ್ತು. ಅದನ್ನು ವಸಾಹತುಶಾಹಿ ಸಿದ್ಧಾಂತವನ್ನಾಗಿ ಬೆಳೆಸುವ ಸಾಧ್ಯತೆಗಳಿದ್ದವು. ಆದರೆ ಬಾಲಗಂಗಾಧರರು ಅದನ್ನು ಅನಿವಾಸಿ ಬಲಪಂಥೀಯ ವರ್ಗದ ಅಪೇಕ್ಷೆಗಳನ್ನು ಪೂರೈಸುವುದಕ್ಕಾಗಿ ಸಂಪೂರ್ಣ ವಿಕೃತಗೊಳಿಸಿದ್ದಾರೆ. ನಾನು ಈ ಹಿಂದೆ ಸಂಕ್ಷಿಪ್ತವಾಗಿ ಪ್ರಸ್ತಾಪಮಾಡಿದಂತೆ ಬಾಲಗಂಗಾಧರರು ಕೊಡುವ ಪಶ್ಚಿಮದ ಲೋಕಗ್ರಹಿಕೆಯ ವಿವರಣೆಯೇ ಏಕಮುಖವಾದದ್ದು. ಅವರ ಕೃತಿಗೆ ಪರಾಮರ್ಶೆ ಬರೆದ ಪಾಶ್ಚಾತ್ಯ ವಿದ್ವಾಂಸರೊಬ್ಬರು ಹೇಳುವ ಹಾಗೆ ಒಬ್ಬ ಸಾಮಾನ್ಯ ಶಿಕ್ಷಿತ ವ್ಯಕ್ತಿಗೂ ಪರಿಚಿತವಿರುವ ಪಶ್ಚಿಮದ ಸ್ಥೂಲ ವಿವರಣೆಯನ್ನು ಬಾಲಗಂಗಾಧರರು ಮತ್ತೆ ಮತ್ತೆ ಲಂಬಿಸಿ, ದೀರ್ಘವಾಗಿ, ಪುನರಾವರ್ತಿಸಿ ಹೇಳುತ್ತಾರೆ. ಕೇವಲ ಕ್ರಿಶ್ಚಿಯನ್ ಥಿಯಾಲಜಿಯ ಪ್ರಭಾವದಲ್ಲಿ ತನ್ನ ಸಮಗ್ರ ಲೋಕಗ್ರಹಿಕೆಯನ್ನು ನಿರ್ಮಿಸಿಕೊಂಡಿದೆ ಎನ್ನಲಾಗುವ ಪಶ್ಚಿಮವು ಬಾಲಗಂಗಾಧರರ ಅವಸರದ ಕಲ್ಪನೆಯ ಆಚೆಗೆ ಎಲ್ಲಿಯೂ ಎಂದೂ ಅಸ್ತಿತ್ವದಲ್ಲಿರಲಿಲ್ಲ. ಪೂರ್ವವೂ ಹೇಗೆ ಏಕಶಿಲಾಕೃತಿಯದಲ್ಲವೋ ಪಶ್ಚಿಮವೂ ಏಕಶಿಲಾಕೃತಿಯದಲ್ಲ; ಅಷ್ಟೇ ಏಕೆ ಸಾಮ್ರಾಜ್ಯಶಾಹಿ ಪಶ್ಚಿಮವೂ ಕೂಡ ಹಾಗಿರಲಿಲ್ಲ.

ಥಿಯರಿ ಮತ್ತು ethics ನ ನಡುವಣ ಸಂಬಂಧದ ಬಗ್ಗೆ ನೂರಾರು ಚರ್ಚೆಗಳಿವೆ. ಅವುಗಳಲ್ಲಿ ನನ್ನ ಆಯ್ಕೆಯೆಂದರೆ ಒಂದು ಥಿಯರಿಯನ್ನು ಒಪ್ಪಬೇಕಾದರೆ ಅದರ ethical ಆಯಾಮವೂ ಮುಖ್ಯ; ಕೇವಲ ಥಿಯರಿಯ ಆಂತರಿಕ ಸುಸಂಬದ್ಧತೆ ಅಲ್ಲ. ಈ ಕಾರಣಕ್ಕಾಗಿಯೂ ನನಗೆ ಬಾಲಗಂಗಾಧ, ಡಂಕಿನ್ ಮುಂತಾದವರ ಬರಹಗಳು ಅಪ್ರಸ್ತುತವಾಗಿ ಕಾಣುತ್ತವೆ. "ಯಾವುದೇ ಒಂದು ಸಿದ್ಧಾಂತ ಜೀವಂತವಾಗಿ ಉಳಿಯಬೇಕಾದರೆ ಅದು ನಿರಂತರ ವಿಮರ್ಶೆಗೊಳಪಡುತ್ತಿರಬೇಕು. ಮತ್ತು ಅಂತಹ ಪ್ರಕ್ರಿಯೆಯಲ್ಲಿ ಅದರ ಮೂಲಸ್ವರೂಪ ಬದಲಾಗುತ್ತಾ ಹೋಗುತ್ತದೆ. ಇಲ್ಲವಾದಲ್ಲಿ ಅದೊಂದು ನಿರ್ಜೀವ ಐಡಿಯಾಲಜಿಯಾಗಿಬಿಡುತ್ತದೆ. ಮಾರ್ಕ್ಸ್‌ವಾದ ಇದಕ್ಕೊಂದು ಅತ್ಯುತ್ತಮ ಉದಾಹರಣೆಯಾಗಿ ನಮ್ಮ ಮುಂದಿದೆ" ಎಂದು ಜಿ.ಎಸ್.ಸದಾನಂದ ಹೇಳುತ್ತಾರೆ. (ಪ್ರಜಾವಾಣಿ 15-04-2013). ಸಂಶೋಧನೆ ಹೇಗಿರಬಾರದು ಎನ್ನುವುದಕ್ಕೆ ಈ ಹೇಳಿಕೆ ಒಂದು ಉದಾಹರಣೆಯಾಗಿದೆ. ಇದೇ ಸದಾನಂದರು, 'ಹಿಂದುತ್ವ ಎಂದರೇನು' ಎನ್ನುವುದು ಇತರರಿಗೆ

ಖಚಿತವಾಗಿ ಅರ್ಥವಾಗಿಲ್ಲವೆಂದು ಹೇಳುತ್ತಾರೆ. ಆದರೆ, ಮಾರ್ಕ್ಸ್‌ವಾದವೆಂದರೇನು ಮತ್ತು ಅದು ಖಚಿತವಾಗಿ ನಿರ್ಜೀವ ಐಡಿಯಾಲಜಿಯಾಗಿದೆಯೆಂದು, ಅದರ ಅಂತಿಮ ಮರಣಕ್ಕೆ ಕಾರಣಗಳೇನು ಎಂದು ಬಹಳ ಆತ್ಮವಿಶ್ವಾಸದಿಂದ ಹೇಳುತ್ತಾರೆ. ಏಕೆಂದರೆ, ಅವರ ಪ್ರಕಾರ ಮಾರ್ಕ್ಸ್‌ವಾದದ ಬಗ್ಗೆ ಯಾವ ಹೇಳಿಕೆಯನ್ನೂ ಬಾಲಗಂಗಾಧರ ಮಾದರಿ ವಿಶ್ಲೇಷಣೆಗೆ ಒಳಪಡಿಸಬೇಕಾಗಿಲ್ಲ. ಇದೇ ರೀತಿ ಆಧುನಿಕತೆ, ಸೆಕ್ಯುಲರಿಸಂ, ಅಂಬೇಡ್ಕರ್‌ವಾದಗಳ ಬಗ್ಗೆ ಅಂತಿಮವಾದ ನಿರ್ಣಯಗಳನ್ನು ಈ ಗುಂಪು ಆಗಲೇ ಕೊಟ್ಟುಬಿಟ್ಟಿದೆ. ಇಡೀ ಮಾರ್ಕ್ಸ್‌ವಾದದ (ವಾದಗಳ) ಸಮಗ್ರ ಅಧ್ಯಯನ, ಸಂಶೋಧನೆಯನ್ನು ಮಾಡಿ ಸದಾನಂದರ ಅದರ ಮರಣದ ಬಗ್ಗೆ ತೀರ್ಮಾನ ಕೊಟ್ಟಿರುವುದು ಆಶ್ಚರ್ಯ. ವಿಶ್ವದ ಸಹಸ್ರಾರು ಚಿಂತಕರು, ಸಂಶೋಧಕರು, ಬರಹಗಾರರು ಇನ್ನೂ ಮಾರ್ಕ್ಸ್‌ವಾದದ ಅಧ್ಯಯನ ಮಾಡುತ್ತಿದ್ದಾರೆ; ಮತ್ತು ಅದನ್ನು ಪೂರೈಸಿದಂತೆ ಕಾಣುವುದಿಲ್ಲ. ನನ್ನ ಮಾತಿನ ವ್ಯಂಗ್ಯವು ಅರ್ಥವಾಗದೇ ಹೋಗಬಹುದು. ಬಾಲಗಂಗಾಧರರ ವಾದಗಳನ್ನು ಒಪ್ಪದೇ ಇದ್ದರೂ ಅವರ ವಿಸ್ತೃತವಾದ ಓದಿನ ಬಗ್ಗೆ ಯಾರಿಗೂ ಸಂಶಯಗಳಿಲ್ಲ. ಅವರು ಮಾರ್ಕ್ಸ್‌ನ ಮೂಲಬರಹಗಳನ್ನು ಹಲವಾರು ವರ್ಷಗಳ ಕಾಲ ಚರ್ಚಿಸಿ ಗೆಂಟ್ ವಿಶ್ವವಿದ್ಯಾನಿಲಯದಲ್ಲಿ ಬೋಧಿಸಿದವರು ಎಂದು ಅವರಿಂದಲೇ ಕೇಳಿದ್ದೇನೆ. ಅವರು ಮಾರ್ಕ್ಸ್‌ವಾದದ ಬಗ್ಗೆ ವಿಸ್ತೃತವಾಗಿ ಬರೆದಿದ್ದರೆ ಅದು ನನಗೆ ಲಭ್ಯವಾಗಿಲ್ಲದಿರುವುದು ನನಗೆ ಒಂದು ಹಾನಿಯೇ ಸರಿ. ಆದರೆ ಇಂಥ ಯಾವ ಬೌದ್ಧಿಕ ಸಿದ್ಧತೆಯೂ ಇಲ್ಲದ ಸದಾನಂದರು ಮಾರ್ಕ್ಸ್‌ವಾದದ ಮರಣದ ಘೋಷಣೆಯನ್ನು ಮಾಡುವ ಮೂರ್ಖತನ ಹಾಸ್ಯಾಸ್ಪದವಾಗಿ ಕಾಣುತ್ತದೆ. ಬಾಲಗಂಗಾಧರರನ್ನು ಅವರ ಗಿಂಡಿಮಾಣಿಗಳಿಂದ ಯಾರೂ ರಕ್ಷಿಸಲಾರರು!

ನನ್ನ ಮಾತನ್ನು ಕೊನೆಗೊಳಿಸುವ ಮೊದಲು ಡಂಕಿನ್‌ರ ಪ್ರಬಂಧದ ಹಿನ್ನೆಲೆಯಲ್ಲಿ ಈಗ ನಡೆದಿರುವ ಒಟ್ಟು ಸಂವಾದದ ಬಗ್ಗೆ ನನ್ನ ಅಭಿಪ್ರಾಯವನ್ನು ಹೀಗೆ ಕ್ರೋಢೀಕರಿಸುತ್ತೇನೆ: ಸಂಶೋಧನೆಯಾಗಿ ಈ ಪ್ರಬಂಧವು ಈವರೆಗೆ ಕನ್ನಡವಲಯದಲ್ಲಿ ಚರ್ಚೆಗೆ ಬಾರದ ಯಾವುದೇ ಚಾರಿತ್ರಿಕ, ಆರ್ಕೈವಲ್ ಸಂಗತಿಗಳನ್ನು ಚರ್ಚೆಗೆ ತಂದಿದೆಯೇ? ಇಲ್ಲ. ಯಾವುದೇ ವಚನಗಳ ಸಮರ್ಥನೀಯವಾದ ಅಥವಾ ಹೊಸದಾದ ಓದನ್ನು ಎದುರಿಗಿಟ್ಟಿದೆಯೇ? ಇಲ್ಲ. ವಚನಗಳನ್ನು ಓದುವ, ಅರ್ಥೈಸುವ ಹೊಸ ವಿಧಾನವೊಂದನ್ನು ನಮ್ಮೆದುರಿಗೆ ತಂದಿದೆಯೇ? ಇಲ್ಲ. ಹೊಸದಾದ ವೈಚಾರಿಕ ಚೌಕಟ್ಟನ್ನು ಶೋಧಿಸಿದೆಯೇ? ಇಲ್ಲ. ಅದು ಬಾಲಗಂಗಾಧರರು ಮುಂದಿಟ್ಟಿರುವ ಚೌಕಟ್ಟುಗಳನ್ನು ಪ್ರಶ್ನಾತೀತವೆಂದು ಒಪ್ಪಿಕೊಂಡು ಯಾವುದೇ ಪರೀಕ್ಷೆಗೆ ಒಳಪಡಿಸದೇ ಅವುಗಳನ್ನು ವಚನಗಳ ಬಗ್ಗೆ ಒಂದು ಸರಳವೂ, ಅಸೂಕ್ಷ್ಮವೂ ಆದ ಪೂರ್ವನಿರ್ಧಾರಿತವಾದ ವಾದವನ್ನು ಇಟ್ಟು ಸಮರ್ಥಿಸುತ್ತದೆ. ಅದೇನೆಂದರೆ, ವಚನಗಳು ಜಾತಿವ್ಯವಸ್ಥೆಯ ಬಗ್ಗೆ ವಿಮರ್ಶೆಯನ್ನು (critique)ಅಭಿವ್ಯಕ್ತಿಸಿವೆ ಎನ್ನುವುದನ್ನು ಕನ್ನಡದ ವಚನ scholarship, ಲಿಂಗಾಯತ/ವೀರಶೈವ ಸಂಸ್ಥೆಗಳು, ಬ್ರಿಟಿಷ್ ಓರಿಯಂಟಲಿಸ್ಟ್ ವ್ಯಾಖ್ಯಾನಗಳು, ಶಿಕ್ಷಿತ ಆಧುನಿಕ ವೀರಶೈವ ಸಮುದಾಯ ಹಾಗೂ ಬಹುಮಟ್ಟಿಗೆ ಸಮಾಜವಿಜ್ಞಾನಗಳು (?) ಪ್ರತಿಪಾದಿಸಿವೆ. (ಇವೆಲ್ಲವುಗಳನ್ನು ಒಟ್ಟಿಗೇ ಪ್ರಸ್ತಾಪಿಸಲು ಕಾರಣವೆಂದರೆ ಡಂಕಿನ್‌ರು ಬಳಸುವ ಚೌಕಟ್ಟಿನ ಪ್ರಕಾರ ಇವುಗಳಲ್ಲಿ ಮೂಲಭೂತ ಭಿನ್ನತೆಗಳು ಇಲ್ಲ; ಏಕೆಂದರೆ ಅವೆಲ್ಲವೂ ಮೂಲತಃ ಕ್ರಿಶ್ಚಿಯನ್ ಥಿಯಾಲಜಿಯ ವೈಚಾರಿಕ ಮಾದರಿಯಿಂದ ರೂಪಿತವಾಗಿರುವವು. ಇವುಗಳು ವಚನಗಳು ಹಾಗೂ ಜಾತಿ ವ್ಯವಸ್ಥೆಯ ಬಗ್ಗೆ ಹೇಳುವ ಕತೆಯನ್ನು stereo-story ಡಂಕಿನ್ ವಚನಗಳ ತಮ್ಮ ಓದು (?!) ಮತ್ತು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯಿಂದ ತಿರಸ್ಕರಿಸುತ್ತಾರೆ. ಈ ಸಂಶೋಧನೆಯ ತೀರ್ಮಾನವೆಂದರೆ ವಚನಕಾರರು ಜಾತಿವ್ಯವಸ್ಥೆಯ ಬಗ್ಗೆ ಏನನ್ನೂ ಹೇಳುವುದಿಲ್ಲ. ಏಕೆಂದರೆ ಅಂಥಹದು ಏನೂ ಇಲ್ಲ. ಅವರು ಕೇವಲ ಆಧ್ಯಾತ್ಮಿಕವಾದ ಚೌಕಟ್ಟಿನಲ್ಲಿ ಜಾತಿಯ ಬಗ್ಗೆ ಅಲ್ಲಲ್ಲಿ ಹೇಳಿಕೊಂಡಿದ್ದಾರೆ. ಈ ಪ್ರಕಾರದ ಸಂಶೋಧನೆಯ ಬಗ್ಗೆ ಕನ್ನಡ ವಿದ್ವಾಂಸರು ಸಾರ್ವಜನಿಕ ಚರ್ಚೆ ನಡೆಸಬೇಕೆ? ನನ್ನ ಅಭಿಪ್ರಾಯದಲ್ಲಿ ಇದು ಅವಶ್ಯಕವಲ್ಲ. ಈ ಸಂಶೋಧನೆಯ ಉತ್ಪಾದನೆಗೆ ಕಾರಣವಾದ ಚೌಕಟ್ಟುಗಳನ್ನು ವಿಶ್ಲೇಷಿಸಬೇಕೆ?

ಈ ಪ್ರಶ್ನೆಗೆ ನನ್ನ ಉತ್ತರ ಹೀಗಿದೆ. ಬಾಲಗಂಗಾಧರರ ಒಂದು ವಾದ ಹೀಗಿದೆ. ತನ್ನ ಓರಿಯಂಟಲಿಸ್ಟ್ ಚೌಕಟ್ಟುಗಳ ಮೂಲಕ ಪಶ್ಚಿಮವು ಹಿಂದೂ ರಿಲಿಜನ್ ಬಗ್ಗೆ, ಸಂಪ್ರದಾಯಗಳ ಬಗ್ಗೆ ಎತ್ತುವ ಪ್ರಶ್ನೆಗಳ ಬಗ್ಗೆ ನಾವು ಉತ್ತರಗಳನ್ನು ಕೊಡಬೇಕೆ? ಇಲ್ಲ. ಬದಲಾಗಿ ಆ ಪ್ರಶ್ನೆಗಳನ್ನು ಪಶ್ಚಿಮವು ಯಾಕೆ ಕೇಳಿದೆ ಎನ್ನುವುದರ ಮೂಲಕ ಪಶ್ಚಿಮ ನಾಗರಿಕತಯೆನ್ನೇ ಅರ್ಥಮಾಡಿಕೊಳ್ಳಬಹುದಾಗಿದೆ. ಏಕೆಂದರೆ, (1986ರ ತನ್ನ ಕೃತಿಯಲ್ಲಿ ಎಡ್ವರ್ಡ್ ಸೈಯಿದ್ ವಿವರಿಸಿದ ಹಾಗೆ) ಪಶ್ಚಿಮವು ಪೂರ್ವದ (ಭಾರತ ಸೇರಿದಂತೆ) ಬಗೆಗಿನ ತನ್ನ ಅನುಭವವನ್ನು ವಿವರಿಸುತ್ತದೆಯೇ ಹೊರತು ಪೂರ್ವವನ್ನಲ್ಲ. ಬಾಲಗಂಗಾಧರರ ವಾದವನ್ನು ಅವರ ಇಡೀ ವೈಚಾರಿಕ ಯೋಜನೆಯ ಬಗ್ಗೆ ವಿಸ್ತರಿಸಿ ನಾನು ಅನ್ವಯಿಸಬಯಸುತ್ತೇನೆ. ಡಂಕಿನ್‌ರು ವಚನಗಳ ಬಗ್ಗೆ, ಬಾಲಗಂಗಾಧರರು ಸೆಕ್ಯೂಲರಿಸಂ ಬಗ್ಗೆ, ರಿಲಿಜನ್ ಬಗ್ಗೆ, ಈ ಗುಂಪಿನ ಇತರರು ಬೌದ್ಧಧರ್ಮದ ಬಗ್ಗೆ, ಭಕ್ತಿ ಚಳುವಳಿಗಳ ಬಗ್ಗೆ, ಗಾಂಧೀಜಿಯ ಬಗ್ಗೆ ಎತ್ತಿರುವ ಪ್ರಶ್ನೆಗಳನ್ನು ನಾವು ಉತ್ತರಿಸಬೇಕೆ? ಇಲ್ಲ. ಈ ಎಲ್ಲಾ "ಸಂಶೋಧನೆಗಳ" ಮೂಲಕ ಅವರು ಕಟ್ಟಿಕೊಡುತ್ತಿರುವ ವಿವರಣೆಗಳು ಪರಸ್ಪರ ಸಂಬಂಧಿತವಾಗಿವೆ. ಅವುಗಳನ್ನು ಸರಿಯೆಂದು ಒಪ್ಪುವುದಾದರೆ ಅದರಿಂದ ಮೂಡುವ ಭಾರತೀಯ ಚರಿತ್ರೆಯ ತಿಳುವಳಿಕೆ ಹೀಗಿರುತ್ತದೆ. ಆಧುನಿಕ ಕಾಲದ ಬರಹಗಾರರು, ಚಿಂತಕರು ಹಾಗೂ ಬಹುಪಾಲು ಸಮಾಜವಿಜ್ಞಾನಿಗಳು ಅಂದುಕೊಂಡಂತೆ ಬೌದ್ಧಧರ್ಮವಾಗಲೀ, ವಚನಕಾರರಾಗಲಿ ಬ್ರಾಹ್ಮಣ/ವೈದಿಕ ಪುರೋಹಿತಶಾಹಿ, ಜಾತಿ ವ್ಯವಸ್ಥೆ ಇವುಗಳನ್ನು ವಿರೋಧಿಸಲಿಲ್ಲ. ಅವರು ಈ ಬಗೆಯ 'ಸಾಮಾಜಿಕ' ಚೌಕಟ್ಟುಗಳನ್ನು ಹೊಂದಿರಲಿಲ್ಲ. ಅವರದು ಕೇವಲ ಆಧ್ಯಾತ್ಮಿಕವಾದ ಪರಂಪರೆ. ಮುಖ್ಯವಾಗಿ ಪಶ್ಚಿಮದ ಪ್ರತಿನಿಧಿಗಳು ಕ್ರಿಶ್ಚಿಯನ್ ಥಿಯಾಲಜಿಯ ಪ್ರಭಾವದಲ್ಲಿ caste system ಅನ್ನು ಅನೈತಿಕವೆಂದು, ಅಸಮಾನತೆಯ ಆಧಾರವೆಂದು, ಅಮಾನುಷವೆಂದು ವಿವರಿಸಿದ್ದಾರೆ. ಇದು ಪಶ್ಚಿಮ ನಾಗರೀಕತೆಯ ಲೋಕಗ್ರಹಿಕೆಯನ್ನು ವಿವರಿಸುತ್ತದೆಯೇ ಹೊರತು ಇಲ್ಲಿಯ ಸಮಾಜದ ವಾಸ್ತವವನ್ನಲ್ಲ. ಈ ಲೋಕಗ್ರಹಿಕೆಯನ್ನೇ ತಮ್ಮದಾಗಿಸಿಕೊಂಡ (ವಸಾಹತುಶಾಹಿಯ ಮೂಲಕ)ನಮ್ಮ ಆಧುನಿಕ ಚಿಂತಕರು ಕ್ರಿಶ್ಚಿಯನ್ ಥಿಯಾಲಜಿ ಪ್ರೇರಿತ ವಸಾಹತುಶಾಹಿ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತಿದ್ದಾರೆ. ಇದು ಇಲ್ಲಿಗೆ ನಿಲ್ಲುವುದಿಲ್ಲ. ಜಾತಿವ್ಯವಸ್ಥೆಯು ಅನೈತಿಕ, ಅಸಮಾನ ಎನ್ನುವುದಕ್ಕೆ ಆಧಾರವಿಲ್ಲ. ನಮ್ಮಲ್ಲಿ ರಿಲಿಜನ್ ಇಲ್ಲ. ಸಂಪ್ರದಾಯಗಳು ಇವೆ. ಅವುಗಳು ಯಾಕಿವೆ ಎಂದರೆ ಅವನ್ನು ನಮಗೆ ನಮ್ಮ ಹಿರಿಯರು ಬಿಟ್ಟುಹೋಗಿದ್ದಾರೆ. ಇದರ ಹೊರತಾದ ಯಾವ ಸಮರ್ಥನೆಯನ್ನೂ ನಾವು ಕೊಡಬೇಕಾಗಿಲ್ಲ.

ಬಾಲಗಂಗಾಧರ ಚೌಕಟ್ಟನ್ನು ವಿಸ್ತರಿಸಿಕೊಂಡು ಈ ಅವರ ವಾದಗಳನ್ನೂ, ತೀರ್ಮಾನಗಳನ್ನೂ ವಿಶ್ಲೇಷಿಸುವಾಗ ನಾವು ಅವರು ಎತುವ ಪ್ರಶ್ನೆಗಳನ್ನು ಉತರಿಸಬೇಕಾಗಿಲ್ಲ. ಅವರ ವಾದಗಳು ವಿವರಣೆಗಳು ಅವರ ಸಂದರ್ಭವನ್ನು ವಿವರಿಸುತ್ತವೆ. ವಾಸ್ತವವನ್ನಲ್ಲ. ಜಾತಿ ವ್ಯವಸ್ಥೆ ಇಲ್ಲ. ಸಂಪ್ರದಾಯಗಳು ಇವೆ, ಭಾರತದಲ್ಲಿ ಪುರೋಹಿತಶಾಹಿ, ಜಾತಿವ್ಯವಸ್ಥೆಗೆ ವಿರೋಧವಿರಲಿಲ್ಲ ಈ

ತೀರ್ಮಾನಗಳು ಯಾವ ಸಂದರ್ಭದ ಬೌದ್ಧಿಕ ಅವಶ್ಯಕತೆಗಳನ್ನು ಪೂರೈಸುತ್ತವೆ? ಅವರ ವಾದಗಳು ಒಟ್ಟಾರೆಯಾಗಿ ಸೆಮೆಟಿಕ್ ರಿಲಿಜನ್‌ಗಳ ಬಗ್ಗೆ, ಕ್ರಿಶ್ಚಿಯನ್ ಥಿಯಾಲಜಿಯ ಬಗ್ಗೆ ಹಾಗೂ ಜಾತಿ ವ್ಯವಸ್ಥೆ ಇಲ್ಲದ ಭಾರತದ ಚರಿತ್ರೆಯ ಪರಿಕಲ್ಪನೆ ಯಾವ ಸಂದರ್ಭದ ಅಪೇಕ್ಷೆ ಹಾಗೂ ಸ್ವ-ವಿವರಣೆಯಾಗಿದೆ? ಬಾಲಗಂಗಾಧರರು ಸ್ಪಷ್ಟಪಡಿಸುವಂತೆ ಮತ್ತು ನಿರಂತರವಾಗಿ ಅವರು intemet ಮೂಲಕ ನಡೆಸುತ್ತಿರುವ ಚರ್ಚೆಗಳು ಸ್ಪಷ್ಟಪಡಿಸುವ ಹಾಗೆ ಅವರ ಸಂಶೋಧನಾ ಯೋಜನೆ ಬಲಪಂಥೀಯ ಅನಿವಾಸಿ ಭಾರತೀಯ ಸಮುದಾಯದ ಬೌದ್ಧಿಕ ಅವಶ್ಯಕತೆಯನ್ನು ಪೂರೈಸುತ್ತದೆ. ಈ ಸಮುದಾಯದ ಸ್ವ-ವಿವರಣೆಯಾಗಿ, ಅದು ಭಾರತವನ್ನು ಕಲಿಸಿಕೊಳ್ಳಲು ಇಚ್ಛಿಸುವ ಮಾದರಿಯಾಗಿ ಅವರ ಸಂಶೋಧನಾ ಯೋಜನೆಯನ್ನು ನಾವು ನೋಡಬೇಕಾಗಿದೆ. ಅವರ ಜೊತೆಗೆ ನಾವು ಜಾತಿವ್ಯವಸ್ಥೆ ಇದೆ-ಯೆಂದು ಹೋರಾಡುವುದು ಮೂರ್ಖತನವಾಗುತ್ತದೆ. ಬದಲಾಗಿ ಇಂಥ ವೈಚಾರಿಕ ಚೌಕಟ್ಟುಗಳು ಈ ಸಮುದಾಯಕ್ಕೆ ಯಾಕೆ ಅಪ್ಯಾಯಮಾನವಾಗಿ ಕಾಣುತ್ತವೆಯೆನ್ನುವುದನ್ನು ಕೇಳಿಕೊಳ್ಳಬೇಕು. ಬಾಲಗಂಗಾಧರ ಅವರ ವಾದಗಳು ವೈಜ್ಞಾನಿಕವಲ್ಲ; ಅವು ಯಾವುದೇ ಚಾರಿತ್ರಿಕ ಸತ್ಯವನ್ನು ವಿವರಿಸುವುದಿಲ್ಲ. ಬದಲಾಗಿ ಕ್ರಿಶ್ಚಿಯನ್ ಥಿಯಾಲಜಿಯ ಬಗೆಗಿನ ಅಸಂಭಾವ್ಯವಾದ ಒಂದು meta-narrative ಮೂಲಕ ವಚನ, ಜಾತಿ, ಸೆಕ್ಯೂಲರಿಸಂ, ಇವೆಲ್ಲವನ್ನೂ ನಾನು ಹೇಳಿದ ಸಮುದಾಯದ ಅಪೇಕ್ಷೆಗಳಿಗೆ ಒಗ್ಗುವಂತೆ ವಿವರಿಸುತ್ತವೆ. ಸದಾನಂದರು ಹೇಳುತ್ತಿರುವುದು ಈ 'ಆಂತರ್ಯವನ್ನು' ಯಾರೂ ಪರೀಕ್ಷಿಸಬಾರದು ಅಂತ. ನಾನು ಹೇಳುತ್ತಿರುವುದು ಬಾಲಗಂಗಾಧರ ಬಲಪಂಥೀಯ ಒಳಸಂಚಿನ ಆಯುಧವಾಗಿದ್ದಾರೆ ಎಂದಲ್ಲ, ಖಂಡಿತ ಅಲ್ಲ. ಅವರದ್ದೇ ಚೌಕಟ್ಟು ಹಾಗೂ ನುಡಿಗಟ್ಟಿನಲ್ಲಿ ನಾನು ಹೇಳಿದ ಹಾಗೆ ನಮ್ಮ ಸಮಕಾಲೀನ ಬಲಪಂಥೀಯ ಅನಿವಾಸಿ ಭಾರತೀಯ ಸಮುದಾಯದ ಬೌದ್ಧಿಕ ಅವಶ್ಯಕತೆಗಳನ್ನು ಅವರ ಚಿಂತನೆ ಪೂರೈಸಿಕೊಡುತ್ತದೆ. ಇದರಲ್ಲಿ ಮೋಸದ ಪ್ರಶ್ನೆಯೇ ಇಲ್ಲ. ವಿಕಿಪೀಡಿಯಾದಲ್ಲಿ ಲಭ್ಯವಿರುವ ಮಾಹಿತಿಯಲ್ಲಿ ನಮೂದಿತವಾಗಿರುವಂತೆ ಅವರು ವಿಶ್ವ ಹಿಂದೂ ಪರಿಷತ್ತಿನ ಅಂಗಸಂಸ್ಥೆಗಳಾದ Educators' Society for Heritage of India(ESHI), Hindu Students Council (HSC) ಇವುಗಳೊಂದಿಗೆ ವೇದಿಕೆ ಹಂಚಿಕೊಂಡಿರುವ ಬುದ್ಧಿಜೀವಿಯಾಗಿದ್ದಾರೆ. Google ಮೂಲಕ ಯಾರಾದರೂ access ಮಾಡಬಹುದಾದಂತೆ ಅವರುIndia Rakshak, consortium of websites ಎನ್ನುವ ತಾಣದಲ್ಲಿ ಅತ್ಯಂತ ಸೌಹಾರ್ದಯುತವಾಗಿ ಈ ಸಮುದಾಯದ ಸದಸ್ಯರೊಂದಿಗೆ ಚರ್ಚೆ ಮಾಡಿದ್ದಾರೆ. ಈ ಸಮುದಾಯದ ಸದಸ್ಯರು ಬಾಲಗಂಗಾಧರರ "ಪತ್ರಗಳನ್ನು" ಅಂದರೆ ಸುದೀರ್ಘ e-comment ಗಳಿಗೆ ಮೆಚ್ಚುಗೆ ಸೂಚಿಸಿ ಆನಂತರ ಮುಸ್ಲಿಮರ ವಿರುದ್ಧ ತಮ್ಮ ಪೂರ್ವಗ್ರಹಗಳನ್ನು ಕಾರಿಕೊಳ್ಳುತ್ತಾರೆ. ಶತಾವಧಾನಿ ಆರ್ ಗಣೇಶ್ ಅವರೊಂದಿಗೆ ನಡೆಸುವ ಸಂದರ್ಶನದಲ್ಲಿ (ಇದನ್ನು intemetನಲ್ಲಿ ನೋಡಬಹುದು) ವಿಶ್ವಹಿಂದೂ ಪರಿಷತ್ ಹಾಗೂ ಇತರ ಬಲಪಂಥೀಯ ಸಂಸ್ಥೆಗಳ ನಾಯಕರುಗಳೀಗೆ ನೀವೂ ನಿಮ್ಮದೇ ಆದ ಬುದ್ಧಿಜೀವಿಗಳನ್ನು ಹೊಂದಿರಬೇಕಲ್ಲವೇ ಎಂದು ಕೇಳಿದ್ದನ್ನು ಮತ್ತು ಅವರು ನಮಗೆ ಬುದ್ಧಿಜೀವಿಗಳು ಅವಶ್ಯಕವಲ್ಲ ಎಂದಿದ್ದನ್ನು ಚರ್ಚಿಸುತ್ತಾರೆ. ಅಲ್ಲದೇ ಈ ಹಿಂದೆ ಪ್ರಸ್ತಾಪಿಸಿದ ತಾಣದಲ್ಲಿ ಭಗವದ್‌ಗೀತೆಯ 'ಯದಾಯದಾನಿ' ಭಾಗವು ನೀಡಿದ ದಿವ್ಯ ಅನುಭವದ ಬಗ್ಗೆ ಭಾವುಕರಾಗಿ ಬರೆಯುತ್ತಾರೆ. ಆದರೆ, ಕನ್ನಡ ಬುದ್ಧಿಜೀವಿಗಳ ಬಗ್ಗೆ, ಭಾರತೀಯ ಬುದ್ಧಿಜೀವಿಗಳ ಬಗ್ಗೆ ಅನಾಗರೀಕ ಅಶಿಕ್ಷಿತರ ಹಾಗೆ ರೇಗಾಡುತ್ತಾರೆ. ಇರಲಿ. ಈ ವಿವರಗಳ ಉದ್ದೇಶವೆಂದರೆ ಅವರು ಬಲಪಂಥೀಯರೆಂದು ಹೇಳುವುದಕ್ಕಲ್ಲ. ಆದರೆ ಅವರ ಚಿಂತನೆ ಹಾಗೂ ಬರಹಗಳೂ ಬಲಪಂಥೀಯ ಅನಿವಾಸಿ ಭಾರತೀಯ ಸಮುದಾಯದ ಬೌದ್ಧಿಕ ಅವಶ್ಯಕತೆಗಳನ್ನು ಪೂರೈಸುತ್ತದೆ ಎನ್ನುವ ನನ್ನ ವಾದದ ಸಮರ್ಥನೆಗಾಗಿ ಇವುಗಳನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಬಾಲಗಂಗಾಧರರಿಗೆ ಸ್ಪಷ್ಟತೆ ಇದೆ. ಸಂಕಷ್ಟವಿರುವುದು ಕನ್ನಡ ಬುದ್ಧಿಜೀವಿಗಳ ನಡುವೆಯೇ ಸಂಬಳ ಪಡೆಯಬೇಕಾದ ಅವರ ಗಿಂಡಿಮಾಣಿಗಳಿಗೆ. ಇಂಥ ಒಂದು ಸಂಶೋಧನಾ ಯೋಜನೆ, ಅದರ ಹಿಂದಿನ ವೈಚಾರಿಕತೆಯ ರಾಜಕೀಯದ ಬಗ್ಗೆ ನನಗೆ ಕಾಳಜಿಯಿದೆ. ಇಲ್ಲದಿದ್ದರೆ ಅವುಗಳ ಅಪ್ರಬುದ್ಧತೆಯ ಬಗ್ಗೆ ಇಷ್ಟು ದೀರ್ಘವಾಗಿ ಬರೆಯುತ್ತಿರಲಿಲ್ಲ. ಬಾಲಗಂಗಾಧರರ ಒಟ್ಟು ಬರಹದ ತಾತ್ವಿಕ ಸಮಸ್ಯೆಗಳ ಬಗ್ಗೆ ವಿವರವಾಗಿ ಬೇರೆಡೆ ಚರ್ಚಿಸುತ್ತೇನೆ.

(ಕೃಪೆ: ಲಡಾಯಿ ಪ್ರಕಾಶನ)

ಇದು ನಮ್ಮ ಸಂಪರ್ಕ ವಿಳಾಸ...
ಆದಿಮ ಲಿವಿಂಗ್ ಟೈಮ್ಸ್
ನಂ.1007, ಸಿದ್ಧಾರ್ಥ ಲೇಔಟ್, ಚನ್ನಸಂದ್ರ ರೋಡ್,
ಕಾಡುಗೋಡಿ. ಬೆಂಗಳೂರು-67. 9945208735

ಪತ್ರಿಕೆಗೆ ಸಂಬಂಧಿಸಿದ ಲೇಖನಗಳನ್ನು ಈ ವಿಳಾಸಕ್ಕೆ ಕಳುಹಿಸಿ

email: laxmipathicg@gmail.com
shripad.budi@gmail.com
arunodayagc@gmail.com
ph: 9945321970, 9880453799

ಆದಿಮ ಲಿವಿಂಗ್ ಟೈಮ್ಸ್

Book Post

Editor, Publisher, Printer : Kotiganahalli Ramaiah, Address:1007, Sidhartha layout, channasandra Raod, Kadu-godi. Bangalore-67. www.adimalivingtimes.blogspot.com